ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 11 ಶನಿವಾರ 2022

₹4

ದೂರವಾಣಿ: 2496520, 2496521, 2496526, 2496527, 2496528, FAX: 0821–2496525

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 56 | ಪುಟಗಳು: 10

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಗಿನ್ನಿಸ್ ದಾಖಲೆ ಬರೆದ ಗಣಪತಿ ಶ್ರೀಗಳ ಜನುಮ ದಿನದ ಶುಭಾಶಯಗಳ ವಿಡಿಯೋ ಆಲ್ಬಂ

ಮೈಸೂರು,ಜೂ.10 (ಆರ್‌ಕೆಬಿ)– ಮೈಸೂರಿನ ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ಜನುಮ ದಿನದ ಪ್ರಯುಕ್ತ ಶ್ರೀಗಳಿಗೆ ವಿಶ್ವಾದ್ಯಂತ ಭಕ್ತರು ಶುಭಕಾಮನೆಗಳನ್ನು ಸಲ್ಲಿಸಿರುವ ವಿವಿಧ ಭಾಷೆಗಳ ವಿಡಿಯೋಗಳನ್ನೊಳಗೊಂಡ ಬೃಹತ್ ಆಲ್ಬಮ್ ಗಿನ್ನಿಸ್ ದಾಖಲೆ ಮಾಡಿದೆ.



ಶುಕ್ರವಾರ ದತ್ತಪೀಠದ ನಾದಮಂಟಪದಲ್ಲಿ ಗಿನ್ನಿಸ್ ವರ್ಲ್ಡ್ ಆರ್ಗನೈಸೇಶನ್‌ನ ಋಷಿನಾತ್ ಅವರು ದಾಖಲೆಯ ಪ್ರಮಾಣಪತ್ರವನ್ನು ಶ್ರೀಗಳಿಗೆ ನೀಡಿದರು. ಇಂಗ್ಲಿಷ್, ತೆಲುಗು, ಕನ್ನಡ, ಹಿಂದಿ, ಸಂಸ್ಕೃತ, ತಮಿಳು, ಅಮೇರಿಕನ್ ಸಂಕೇತ ಭಾಷೆ, ಗುಜರಾತಿ, ಮಲಯಾಳಂ, ಜಪಾನೀಸ್, ಸ್ವಿಸ್, ಮರಾಠಿ, ಅರೇಬಿಕ್, ಇಟಾಲಿಯನ್, ಮಲಯ, ಸ್ಪ್ಯಾನಿಷ್, ಸುರ್ನಾಮಿ, ಟರ್ಕಿಶ್ ಮತ್ತು ಸಂಗೀತ ವಾದ್ಯಗಳಲ್ಲಿ ಜನ್ಮದಿನದ ಶುಭಾಶಯಗಳನ್ನು ಸಲ್ಲಿಸಲಾಗಿದೆ.

ಭಾಷೆಯನ್ನು ಪತ್ತೆಹಚ್ಚಲು ಮತ್ತು ಆಯಾ ಭಾಷೆಯಲ್ಲಿ ಹುಟ್ಟುಹಬ್ಬ ಪದವನ್ನು ಗುರುತಿಸಲು ಭಾಷಾ ತಜ್ಞರು ಪ್ರತಿ ವೀಡಿಯೊವನ್ನು ಹಸ್ತಚಾಲಿತವಾಗಿ ಪರಿಶೀಲಿಸಿದ್ದಾರೆ. ಈ ಎಲ್ಲಾ ವೀಡಿಯೊ ಬೈಟ್‌ಗಳನ್ನು ಸಂಯೋಜಿಸುವ ದೀರ್ಘ ವೀಡಿಯೊವನ್ನು ಗಿನ್ನೆಸ್ ವಿಶ್ವ ದಾಖಲೆಗಾಗಿ ಜನ್ಮದಿನದ ಶುಭಾಶಯಗಳ ಅತಿದೊಡ್ಡ ಆನ್‌ಲೈನ್ ವೀಡಿಯೊ ಆಲ್ಬಮ್ ಎಂದು ಪರಿಗಣಿಸಲಾಗಿದೆ. ಇದೇ ವೇಳೆ ಕಿರಿಯ ಶ್ರೀಗಳಾದ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಅವರು ಗಣಪತಿ ಶ್ರೀಗಳ ಜನ್ಮ ಸ್ಥಳವಾದ ಮೇಕೆದಾಟಿನಿಂದ ಮೈಸೂರಿನ ಆಶ್ರಮದವರೆಗೆ ಕೈಗೊಂಡಿದ್ದ ವಿಶ್ವಶಾಂತಿ ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದ ಭಕ್ತರು ಮಾಡಿದ ವಿವಿಧ ವಿಡಿಯೋಗಳು ಎರಡನೆ ಗಿನ್ನಿಸ್ ವಿಶ್ವ ದಾಖಲೆ ಗಳಿಸಿದ್ದು ಅದನ್ನೂ ಇದೇ ವೇಳೆ ಶ್ರೀಗಳಿಗೆ ಹಸ್ತಾಂತರಿಸಲಾಯಿತು.

ಮೊಬೈಲ್ ಛಾಯಾಚಿತ್ರಗಳ ಪ್ರದರ್ಶನ



ಮೈಸೂರು,ಜೂ.10(ಎಂಟಿವೈ)– ಪ್ರತಿಯೊಂದು ಛಾಯಾಚಿತ್ರವೂ ಮಹತ್ವದ್ದು. ಹಾಗಾಗಿ ಛಾಯಾಗ್ರಾಹಕರು ಸೂಕ್ಷ್ಮ ಗ್ರಹಿಕೆಯಿಂದ ಕಲಾತ್ಮಕವಾಗಿ ಛಾಯಾಚಿತ್ರ ತೆಗೆಯುವುದನ್ನು ರೂಢಿಸಿಕೊಳ್ಳಬೇಕು ಎಂದು ವನ್ಯಜೀವಿ ಛಾಯಾಗ್ರಾಹಕ ಎಸ್. ತಿಪ್ಪೇಸ್ವಾಮಿ ಸಲಹೆ ನೀಡಿದ್ದಾರೆ.

ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ಮೈಸೂರು ಆರ್ಟ್ ಗ್ಯಾಲರಿಯಲ್ಲಿ ಆಯೋಜಿಸಿದ್ದ ಕಲಾವಿದ ಎಂ.ಆರ್. ಮನೋಹರ್ ಮೊಬೈಲ್‌ನಲ್ಲಿ ತೆಗೆದಿರುವ ಛಾಯಾಚಿತ್ರಗಳ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಈ ಹಿಂದೆ ಛಾಯಾಚಿತ್ರ ತೆಗೆಯುವುದು ಕಷ್ಟ ಸಾಧ್ಯವಾಗಿತ್ತು. ಒಂದು ಉತ್ತಮ ಫೋಟೋಗಾಗಿ ಗಂಟೆಗಟ್ಟಲೇ ಕಾಯಬೇಕಾದ ಪರಿಸ್ಥಿತಿ ಇತ್ತು. ಆದರೆ ಇಂದು ತಂತ್ರಜ್ಞಾನ ಅಭಿವೃದ್ಧಿ ಹೊಂದಿ ಬಹುತೇಕರಲ್ಲಿ ಉತ್ತಮ ಕ್ಯಾಮರಾವುಳ್ಳ ಮೊಬೈಲ್‌ಗಳಿರುತ್ತವೆ. ಅದರಲ್ಲಿ ಪ್ರಪಂಚದ ವಿದ್ಯಮಾನಗಳನ್ನು ಕ್ಷಣಾರ್ಧದಲ್ಲಿ ನೋಡುವುದರೊಂದಿಗೆ ಅತ್ಯುತ್ತಮ ಛಾಯಾಚಿತ್ರಗಳನ್ನು ತೆಗೆಯಬಹುದು. ಮೋಹನ್ ಮೊಬೈಲ್‌ನಲ್ಲಿ ಅತ್ಯುತ್ತಮ ಚಿತ್ರಗಳನ್ನು ಸೆರೆ ಹಿಡಿದಿದ್ದಾರೆ ಎಂದು ಶ್ಲಾಘಿಸಿದರು.

ಇದೇ ವೇಳೆ ಹಿರಿಯ ಕಲಾವಿದ ಎಲ್.ಶಿವಲಿಂಗಪ್ಪ ಮಾತನಾಡಿ, ಮನೋಹರ ಅವರಿಗೆ ಉಜ್ವಲ ಭವಿಷ್ಯವಿದೆ. ಅವರ ಕಲಾಸಕ್ತಿಯನ್ನು ಗಮನಿಸಿದರೆ ಅತ್ಯುತ್ತಮ ಕಲಾವಿದರಾಗಿ ಬೆಳೆಯಬಲ್ಲರು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಪತ್ರಿಕೆಗಳಲ್ಲಿ ಪ್ರಕಟವಾಗುವ ಒಂದು ಫೋಟೋ ಸಾವಿರ ಪದಗಳಷ್ಟು ಮಾಹಿತಿ ನೀಡಬಲ್ಲದು. ಪತ್ರಿಕೆಗಳಲ್ಲಿ ಫೋಟೋಗಳು, ವ್ಯಂಗ್ಯಚಿತ್ರಗಳು, ರೇಖಾ ಚಿತ್ರಗಳಿಗೆ ಮಹತ್ವ ನೀಡಲಾಗುತ್ತದೆ ಎಂದರು. ಕಾರ್ಯಕ್ರಮದಲ್ಲಿ ಛಾಯಾಗ್ರಾಹಕ ಆರ್. ಸುಬ್ರಹ್ಮಣ್ಯ, ಸಂಚಾಲಕ ಶ್ರೀಕಂಠಮೂರ್ತಿ, ಪ್ರೊ.ಆರ್.ಎಂ. ಚಿಂತಾಮಣಿ, ನಾರಾಯಣರಾವ್, ಮೈಕ್ ಪ್ರಕಾಶ್, ಶಿವಲಿಂಗಪ್ಪ ಉಪಸ್ಥಿತರಿದ್ದರು. ಮೈಸೂರು ಆರ್ಟ್ ಗ್ಯಾಲರಿಯ ಕಾರ್ಯದರ್ಶಿ ಡಾ.ಜಮುನಾರಾಣಿ ಮಿರ್ಲೆ ಸ್ವಾಗತಿಸಿ, ನಿರೂಪಿಸಿದ ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್ ವಂದಿಸಿದರು.



ಮೈಸೂರು ನಗರದ ಬಿಜೆಪಿ ಯುವಮೋರ್ಚ ವತಿಯಿಂದ ಸುಬ್ರಹ್ಮಣ್ಯನಗರ ವ್ಯಾಪ್ತಿಯಲ್ಲಿ ಬಿಜೆಪಿ ಅಭ್ಯರ್ಥಿಯಾದ ಮೈ.ವಿ.ರವಿಶಂಕರ ಅವರ ಪರ ಮತ ಯಾಚನೆ ಮಾಡಲಾಯಿತು. ಈ ಸಂದರ್ಭ ನಗರಾಧ್ಯಕ್ಷ ಎಂ.ಜೆ.ಕಿರಣ್ ಗೌಡ, ಉಸ್ತುವಾರಿ ರಮೇಶ್, ಸಹ ಸಂಚಾಲಕ ಕುಮಾರ, ಜೆಬಿ ರವಿ, ಕಾರ್ಯಕಾರಿಣಿ ಸದಸ್ಯರಾದ ಕಿರಣ್ ಕುಮಾರ, ಶ್ರೀಧರ, ಗಂಗಾಧರ ಇದ್ದರು.

ಅತಿಥಿ ಉಪನ್ಯಾಸಕರ ಸಂಕಷ್ಟಗಳ ದುರ್ಬಳಕೆ

ಅಶ್ವತ್ಥನಾರಾಯಣ ವಿರುದ್ಧ ಕ್ರಮ ಕೈಗೊಳ್ಳಲು ಚುನಾವಣಾ ಆಯೋಗಕ್ಕೆ ಡಾ.ಡಿ.ತಿಮ್ಮಯ್ಯ ಆಗ್ರಹ

ಮೈಸೂರು, ಜೂ.10(ಆರ್‌ಕೆಬಿ)– ವಿಧಾನ ಪರಿಷತ್ ಚುನಾವಣೆ ಸಂಬಂಧ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ್ ಅವರು ಅತಿಥಿ ಉಪನ್ಯಾಸಕರು ತಮ್ಮ ಪಕ್ಷದ ಅಭ್ಯರ್ಥಿಯನ್ನು ಬೆಂಬಲಿಸಿದಲ್ಲಿ ಸೇವೆ ಖಾಯಂಗೊಳಿಸುವುದಾಗಿ ಭರವಸೆ ನೀಡುವ ಮೂಲಕ ಅವರ ಸಂಕಷ್ಟಗಳನ್ನು ದುರ್ಬಳಕೆ ಮಾಡಿಕೊಳ್ಳಲು ಯತ್ನಿಸಿದ್ದಾರೆ. ಹೀಗಾಗಿ ಚುನಾವಣಾ ಆಯೋಗ ಸಚಿವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಆಗ್ರಹಿಸಿದ್ದಾರೆ.



ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಮೈಸೂರು ನಗರ ಹಾಗೂ ಗ್ರಾಮಾಂತರ ಕಾಂಗ್ರೆಸ್ ಸಮಿತಿ ವತಿಯಿಂದ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಬಿಜೆಪಿ ಸರ್ಕಾರ ಜಾತಿ ಮತಗಳಲ್ಲಿ ಭೇದವೆಣಿಸುತ್ತ ಸಮಾಜದಲ್ಲಿ ಸದಾ ಒಡಕುಂಟು ಮಾಡುತ್ತಿದೆ. ಬಿಜೆಪಿ ಹಾಗೂ ಅದರ ಬೆಂಬಲಿಗ ಸಂಘಟನೆಗಳಾದ ಆರ್‌ಎಸ್‌ಎಸ್, ವಿಶ್ವಹಿಂದೂ ಪರಿಷತ್, ಬಜರಂಗದಳ ಮತ್ತು ಶ್ರೀರಾಮ ಸೇನೆಗಳು ಹಿಂದುತ್ವ ಪ್ರತಿಪಾದಿಸಲು ಹೊರಟು ಸಮಾಜದಲ್ಲಿ ಅಶಾಂತಿ ಸೃಷ್ಟಿಸುತ್ತಿವೆ ಎಂದು ದೂರಿದರು.

ರಾಜ್ಯ ಬಿಜೆಪಿ ಸರ್ಕಾರ ವಿದ್ಯಾರ್ಥಿಗಳ ಎಳೆಯ ಮನಸ್ಸಿಗೆ ವಿಷವುಣಿಸಲು ಮುಂದಾಗಿದೆ. ಹಿಂದೆ ಇದ್ದ ಪಠ್ಯಪುಸ್ತಕಗಳ ಪರಿಷ್ಕರಣೆ ನೆಪದಲ್ಲಿ ಹಿಂದುತ್ವದ ವಿಷಯಗಳನ್ನು ಬಲವಂತವಾಗಿ ಹೇರಲು ಯತ್ನಿಸಲಾಗಿದೆ. ಸಂವಿಧಾನಶಿಲ್ಪಿ ಪದವನ್ನೇ ಡಾ.ಬಿ.ಆರ್. ಅಂಬೇಡ್ಕರ್ ಹೆಸರಿನಿಂದ ಕಿತ್ತು ಹಾಕಲಾಗುತ್ತಿದೆ. ಕುವೆಂಪು ಅವರ ನಾಡಗೀತೆಗೆ ಅಪಮಾನ ಮಾಡಿದ ವ್ಯಕ್ತಿಯಿಂದ ಪಠ್ಯ ಪರಿಷ್ಕರಣೆ ಮಾಡಿಸುವ ಮೂಲಕ ವೈಜ್ಞಾನಿಕ ಹಾಗೂ ವೈಚಾರಿಕತೆಯನ್ನು ಮರೆಮಾಚಲಾಗಿದೆ ಎಂದು ಆರೋಪಿಸಿದರು.

ಸಂವಿಧಾನದಲ್ಲಿ ಅಡಕವಾಗಿರುವ ಜಾತ್ಯಾತೀತ ಸಿದ್ಧಾಂತವನ್ನು ಮೈಗೂಡಿಸಿಕೊಂಡು ಶೋಷಿತರು, ಹಿಂದುಳಿದ ವರ್ಗ, ಅಲ್ಪಸಂಖ್ಯಾತರು ಸೇರಿದಂತೆ ಎಲ್ಲರನ್ನೂ ಬೆಸೆಯುವ ಭಾವೈಕ್ಯತೆಯ ಸಿದ್ಧಾಂತ ಹೊಂದಿರುವ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿರುವ ಮಧು ಜಿ.ಮಾದೇಗೌಡ ಅವರಿಗೆ ಪದವೀಧರ ಮತದಾರರು ಮತ ನೀಡುವಂತೆ ಮನವಿ ಮಾಡಿದರು.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಬಿಜೆಪಿ ವಿರುದ್ಧ ಟೀಕೆ ಮಾಡಿದ ವೇಳೆ ಆ ಪಕ್ಷದವರು ಅವರ ವಿರುದ್ಧ ಮುಗಿಬಿದ್ದರೆ ಅದು ಕಾಂಗ್ರೆಸ್ ಪಕ್ಷದ ವಿರುದ್ಧವೇ ಮುಗಿಬಿದ್ದಂತಾಗುತ್ತದೆ. ಹೀಗಾಗಿ ಪಕ್ಷವು ಸದಾ ಸಿದ್ದರಾಮಯ್ಯ ಪರ ಬೆಂಬಲಕ್ಕಿರುತ್ತದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ.ವಿಜಯಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಜಿಲ್ಲಾ ಕಾಂಗ್ರೆಸ್ ಮುಖ್ಯ ಮಾಧ್ಯಮ ಸಂಚಾಲಕ ಎಡತೊರೆ ಎಂ.ನಿಂಗರಾಜ್, ಹಿರಿಯ ಕಾರ್ಯದರ್ಶಿ ಹುಣಸೂರು ಬಸವಣ್ಣ, ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ ಇನ್ನಿತರರು ಉಪಸ್ಥಿತರಿದದರು.

ಎಸ್‌ಪಿಬಿ ಜನ್ಮದಿನ ಪ್ರಯುಕ್ತ ನಾಳೆ ರಸಮಂಜರಿ

ಮೈಸೂರು, ಜೂ.10(ಆರ್‌ಕೆಬಿ)– ಸ್ವರ್ಗಿರಿ ಮೆಲೋಡಿಸ್ ವತಿಯಿಂದ ಗಾಯಕ ಎಸ್.ಪಿ. ಬಾಲಸುಬ್ರಹ್ಮಣ್ಯಂ ಜನ್ಮದಿನದ ಅಂಗವಾಗಿ ಗಾನಗಂಧರ್ವ ರಸಮಂಜರಿ ಕಾರ್ಯಕ್ರಮವನ್ನು ಜೂ.12ರಂದು ಆಯೋಜಿಸಲಾಗಿದೆ ಎಂದು ಎಂ.ವಿ. ಗೋವಿಂದರಾಜ್ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಂದು ಸಂಜೆ 4 ಗಂಟೆಗೆ ನಾದಬ್ರಹ್ಮ ಸಂಗೀತ ಸಭಾಂಗಣದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ. ಇಳೈ ಆಳ್ವಾರ್ ಸ್ವಾಮೀಜಿ ವಿಶೇಷ ಆಹ್ವಾನಿತರಾಗಿ ಭಾಗವಹಿಸಲಿದ್ದು, ಹಿರಿಯ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮಾಜಿ ಅಧ್ಯಕ್ಷ ವೈ.ಡಿ.ರಾಜಣ್ಣ, ಚಲನಚಿತ್ರ ನಿರ್ಮಾಪಕ ಎಸ್.ಎ. ಶ್ರೀನಿವಾಸ್, ಚರ್ಮ ರೋಗ ತಜ್ಞ ಡಾ. ಸುರೇಂದ್ರ, ಪ್ರಸೂತಿ ತಜ್ಞೆ ಡಾ. ರೇಖಾ, ಡಾ. ರವೀಂದ್ರಕುಮಾರ್, ಎಇಇ ವೆಂಕಟೇಶ್, ವಕೀಲ ತಮ್ಮಯ್ಯ ಭಾಗವಹಿಸಲಿದ್ದಾರೆ ಎಂದರು. ಇದೇ ವೇಳೆ ಹಿರಿಯ ಕಲಾವಿದರಾದ ಮಹಾಲಿಂಗು, ನಾಗಣ್ಣ, ಬಾಲಕೃಷ್ಣ, ಶಾಂತಮ್ಮ, ರಾಧಮ್ಮ, ಪಾರ್ಥಸಾರಥಿ, ವಾಸು ಅವರನ್ನು ಸನ್ಮಾನಿಸಲಾಗುವುದು ಎಂದರು.

ಅಂತಾರಾಷ್ಟ್ರೀಯ ರೈಲ್ವೆ ಲೆವೆಲ್ ಕ್ರಾಸಿಂಗ್ ಜಾಗೃತಿ ಅಭಿಯಾನ

ಲೆವೆಲ್ ಕ್ರಾಸಿಂಗ್‌ಗಳಲ್ಲಾಗುವ ಸಾವುಗಳ ತಗ್ಗಿಸಲು ಜನರಲ್ಲಿ ಜಾಗೃತಿ

ಮೈಸೂರು, ಜೂ.10(ಆರ್‌ಕೆಬಿ)– ನೈರುತ್ಯ ರೈಲ್ವೆ ಮೈಸೂರು ವಿಭಾಗವು ಜೂ.3ರಿಂದ 9ರವರೆಗೆ ಒಂದು ವಾರದ ಅಂತಾರಾಷ್ಟ್ರೀಯ ಲೆವೆಲ್ ಕ್ರಾಸಿಂಗ್ ಜಾಗೃತಿ ಅಭಿಯಾನ ನಡೆಸಿತು. ರಸ್ತೆ–ರೈಲು ಸಂಪರ್ಕ ಸಾಧನಗಳಿಗೆ (ಲೆವೆಲ್ ಕ್ರಾಸಿಂಗ್) ಸಂಬಂಧಿಸಿದ ಅಪಾಯಗಳ ಬಗ್ಗೆ ಜಾಗೃತಿ ಮೂಡಿಸುವ ಗುರಿಯನ್ನು ಹೊಂದಿದ್ದ ಅಭಿಯಾನದಲ್ಲಿ ಶಾಲಾ–ಕಾಲೇಜು ಮತ್ತು ಗ್ರಾಮ ಪಂಚಾಯಿತಿಗಳಲ್ಲಿ ಮತ್ತು ಸಾರ್ವಜನಿಕರಲ್ಲಿ ಜಾಗೃತಿ ಉಂಟು ಮಾಡಲಾಯಿತು.



ಹಿರಿಯ ವಿಭಾಗೀಯ ಸುರಕ್ಷತಾ ಅಧಿಕಾರಿ ನೀರಜ್ ಬಾಫ್ನಾ ಅವರು ಚಾಮರಾಜನಗರ, ಹಾಸನ, ಅರಸೀಕೆರೆ, ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಲೆವೆಲ್ ಕ್ರಾಸಿಂಗ್ ಸೇರಿದಂತೆ ವಿಭಾಗದ ಲೆವೆಲ್ ಕ್ರಾಸಿಂಗ್‌ಗಳಲ್ಲಿ ಹಿರಿಯ ವಿಭಾಗೀಯ ಸುರಕ್ಷತಾ ಅಧಿಕಾರಿ, ರೈಲ್ವೆ ರಕ್ಷಣಾ ಪಡೆ, ಸರ್ಕಾರಿ ರೈಲ್ವೆ ಪೊಲೀಸರು ಮತ್ತು ಆರ್‌ಟಿಓ ಅಧಿಕಾರಿಗಳು, ಸಿಬ್ಬಂದಿಗಳೊಂದಿಗೆ ವಾರದ ಜಾಗೃತಿ ಅಭಿಯಾನ ನಡೆಸಿದರು.

ಘಟನೆಗಳನ್ನು ತಪ್ಪಿಸಲು ಮತ್ತು ಎಲ್ಲಾ ರೈಲ್ವೆ ಎಚ್ಚರಿಕೆ ಮತ್ತು ಸಂಕೇತಗಳನ್ನು ಪಾಲಿಸಲು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಬಳಕೆದಾರರು ತಮ್ಮನ್ನು, ಇತರ ಬಳಕೆದಾರರು ಮತ್ತು ರೈಲಿನಲ್ಲಿ ಪ್ರಯಾಣಿಸುವ ಜನರನ್ನು ರಕ್ಷಿಸಲು ಮತ್ತು ಟ್ರ್ಯಾಕ್ ದುರಂತಗಳನ್ನು ಕಡಿಮೆ ಮಾಡಲು ಯಾವಾಗಲೂ ಗೊತ್ತುಪಡಿಸಿದ ರೈಲ್ವೆ ಕ್ರಾಸಿಂಗ್‌ಗಳನ್ನು ಬಳಸಬೇಕೆಂದು ರಸ್ತೆ ಬಳಕೆದಾರರಿಗೆ ಎಚ್ಚರಿಕೆ ನೀಡಲಾಯಿತು.

ಅಪಾಯಕಾರಿ ಅಂಶಗಳ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಜನರ ಅಜಾಗರೂಕತೆಯಿಂದ ಲೆವೆಲ್ ಕ್ರಾಸಿಂಗ್ ಸಾವುಗಳನ್ನು ತಗ್ಗಿಸುವ ಕ್ರಮಗಳ ಬಗ್ಗೆ ಜನರಲ್ಲಿ ತಿಳುವಳಿಕೆ ನೀಡಲು ಮೈಸೂರು ಮತ್ತು ಸುತ್ತಮುತ್ತಲಿನ ಅನೇಕ ಜನನಿಬಿಡ ಲೆವೆಲ್ ಕ್ರಾಸಿಂಗ್‌ಗಳಲ್ಲಿ ಶಿಕ್ಷಣ ಮತ್ತು ಜಾಗೃತಿ ಮೂಡಿಸುವ ನಾಟಕಗಳನ್ನು ಪ್ರದರ್ಶಿಸಲಾಯಿತು. ವಾರದ ಅಭಿಯಾನದಲ್ಲಿ ಮೈಸೂರು ವಿಭಾಗ ವ್ಯಾಪ್ತಿಯ ಎಲ್ಲಾ 150 ಲೆವೆಲ್ ಕ್ರಾಸಿಂಗ್‌ಗಳಲ್ಲಿ ತಿಳುವಳಿಕೆ ಕರಪತ್ರಗಳನ್ನು ವಿತರಿಸಲಾಯಿತು. ಇದೇ ವೇಳೆ ರೈಲ್ವೆ ಸಂರಕ್ಷಣಾ ಪಡೆ ಮತ್ತು ಇತರ ಪಾಲುದಾರರು ಸುಮಾರು 30 ಲೆವೆಲ್ ಕ್ರಾಸಿಂಗ್‌ಗಳಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿ, ಲೆವಲ್ ಕ್ರಾಸಿಂಗ್ ಉಲ್ಲಂಘನೆ ತಪಾಸಣೆ ನಡೆಸಿದರು. ಅಪರಾಧಿಗಳ ವಿರುದ್ಧ ದಂಡ ವಿಧಿಸಿದರು.

ಮಂಗಳಮುಖಿಯ ಜನಮುಖಿ ಕಾರ್ಯಕ್ಕೆ : ಲ್ಯಾಪ್‌ಟಾಪ್ ಉಡುಗೊರೆ



ಮೈಸೂರು,ಜೂ 10(ಜಿಎ)– ಜನಮುಖಿ ಕಾರ್ಯ ಮಾಡುತ್ತಿರುವ ಮಂಗಳಮುಖಿಗೆ ಮೈಸೂರು ಅಮಿಟಿ ರೌಂಡ್ ಟೇಬಲ್(156) ಮತ್ತು ಮೈಸೂರು ಅಮಿಟಿ ಲೇಡೀಸ್ ಸರ್ಕಲ್(108) ಸಂಸ್ಥೆಯು ಲ್ಯಾಪ್‌ಟಾಪ್ ನೀಡುವ ಮೂಲಕ ಒತ್ತಾಸೆಯಾಗಿದೆ.

ಮೈಸೂರಿನ ನಜರ್‌ಬಾದ್ ಬಡೇ–ಮಖಾನ್ ನಿವಾಸಿ ಮಂಗಳಮುಖಿ ಚಾಂದಿನಿ (ಅಸ್ಲಂಪಾಷ) ಸಾತಗಳ್ಳಿಯಲ್ಲಿ ನ್ಯಾಯಬೆಲೆ ಅಂಗಡಿ, ಇ–ಸೇವಾ ಕೇಂದ್ರವನ್ನು ತೆರೆದು ಮಂಗಳಮುಖಿಯರು ಹಾಗೂ ಸ್ಥಳೀಯ ನಿವಾಸಿಗಳಿಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ದೊರಕಿಸಿಕೊಡುವ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದರ ಬಗ್ಗೆ 'ಮೈಸೂರು ಮಿತ್ರ'ನ ಜೂ.3ರ ಸಂಚಿಕೆಯಲ್ಲಿ 'ಮೈಸೂರಲ್ಲಿ ಮಂಗಳಮುಖಿಯ ಜನಮುಖಿ ಕಾರ್ಯ' ಎಂಬ ಶೀರ್ಷಿಕೆಯಡಿ ವರದಿ ಪ್ರಕಟವಾಗಿತು.

ಈ ವರದಿಯಿಂದ ಪ್ರೇರಣೆಗೊಂಡ ಮೈಸೂರು ಅಮಿಟಿ ರೌಂಡ್ ಟೇಬಲ್(156) ಮತ್ತು ಮೈಸೂರು ಅಮಿಟಿ ಲೇಡೀಸ್ ಸರ್ಕಲ್(108) ಸಂಸ್ಥೆಯು ಮಂಗಳಮುಖಿ ಚಾಂದಿನಿ ಅವರ ಕಾರ್ಯವನ್ನು ಮೆಚ್ಚಿ, ಅವರಿಗೆ ಇಂದು ಲ್ಯಾಪ್‌ಟಾಪ್ ಅನ್ನು ಉಡುಗೊರೆಯಾಗಿ ನೀಡುವ ಮೂಲಕ ಸಹಾಯ ಹಸ್ತ ಚಾಚಿದೆ.

ಇಂದು ಸಂಜೆ ಚಾಂದಿನಿ ಅವರ ಕಚೇರಿಗೆ ಭೇಟಿ ನೀಡಿದ ಮೈಸೂರು ಅಮಿಟಿ ಲೇಡೀಸ್ ಸರ್ಕಲ್‌ನ ಅಧ್ಯಕ್ಷೆ ಸ್ವಾತಿ ವಾಘ್, ಸದಸ್ಯೆ ರೂಪಲ್ ಮೆಹ್ತಾ ಹಾಗೂ ಮೈಸೂರು ಅಮಿಟಿ ರೌಂಡ್ ಟೇಬಲ್ ಅಧ್ಯಕ್ಷ ಹುಸೇನ್ ವಾಘ್, ಸದಸ್ಯ ಅನಿರುದ್ಧ ಮತ್ತು ಚಿರಾಗ್ ಮೆಹ್ತಾ ಅವರು ಚಾಂದಿನಿ ಅವರಿಗೆ ಲ್ಯಾಪ್‌ಟಾಪ್ ಅನ್ನು ಹಸ್ತಾಂತರಿಸಿದರು.

ಆರೋಗ್ಯ ತಪಾಸಣೆ ಶಿಬಿರ

ಮೈಸೂರು, ಜೂ. 10– ಮೈಸೂರಿನ ದಟ್ಟಗಳ್ಳಿಯಲ್ಲಿರುವ ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರದಲ್ಲಿ ಪ್ರಕೃತಿ ಆಯುರ್ವೇದ ಪ್ರತಿಷ್ಠಾನದ ವತಿಯಿಂದ ಜೂ. 12 ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 3 ರವರೆಗೆ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 8277888524 ಸಂಪರ್ಕಿಸಬಹುದು.

ಉಚಿತ ಹೃದಯ, ಚರ್ಮ ತಪಾಸಣಾ ಶಿಬಿರ

ಮೈಸೂರು, ಜೂ. 10– ಮೈಸೂರಿನ ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ವೀರಶೈವ ಸಜ್ಜನ ಸಂಘದ ವತಿಯಿಂದ ಜೂ. 14 ರಂದು ಬೆಳಗ್ಗೆ 9.30 ರಿಂದ ಮಧ್ಯಾಹ್ನ 1.30 ರವರೆಗೆ ಕಬೀರ್ ರಸ್ತೆಯಲ್ಲಿರುವ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಉಚಿತ ಹೃದಯ, ಚರ್ಮ ತಪಾಸಣಾ ಶಿಬಿರ, ಕಣ್ಣಿನ ಶಸ್ತ್ರ ಚಿಕಿತ್ಸೆ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9916155453 ಸಂಪರ್ಕಿಸಬಹುದು.

ವಧು–ವರರ ಮುಖಾಮುಖಿ ಸಮಾವೇಶ

ಮೈಸೂರು, ಜೂ. 10– ಮೈಸೂರಿನ ಸಿದ್ದಾರ್ಥನಗರ ಒಕ್ಕಲಿಗರ ಸಂಘದ ವತಿಯಿಂದ ಜೂ. 12 ರಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಸಿದ್ಧಾರ್ಥ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ವಧು–ವರರ ಮುಖಾಮುಖಿ ಸಮಾವೇಶ ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9845585008, 6362280966 ಸಂಪರ್ಕಿಸಬಹುದು.

ಮೊಹಮ್ಮದ್ ಪೈಗಂಬರ್ ಅವಹೇಳನ ಆರೋಪ: ಬಿಜೆಪಿ ಮುಖಂಡರ ಬಂಧನಕ್ಕೆ ಆಗ್ರಹಿಸಿ

ಮೈಸೂರಲ್ಲಿ ಎಸ್‌ಡಿಪಿಐ ಭಾರೀ ಪ್ರತಿಭಟನೆ



ಮೈಸೂರು, ಜೂ.10(ಎಸ್‌ಬಿಡಿ)– ಮೊಹಮ್ಮದ್ ಪೈಗಂಬರ್ ಅವರ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿದ್ದಾರೆನ್ನಲಾದ ಬಿಜೆಪಿ ಮುಖಂಡರಿಬ್ಬರ ಬಂಧನಕ್ಕೆ ಆಗ್ರಹಿಸಿ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ನೇತೃತ್ವದಲ್ಲಿ ಶುಕ್ರವಾರ ಮೈಸೂರಿನಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಅಶೋಕರಸ್ತೆ ಮಿಲಾದ್ ಪಾರ್ಕ್ ಬಳಿ ಸೋಮವಾರ ಮಧ್ಯಾಹ್ನ ಮುಸ್ಲಿಮರು ನೂರಾರು ಸಂಖ್ಯೆಯಲ್ಲಿ ಜಮಾಯಿಸಿ, ಸಂದರ್ಶನವೊಂದರಲ್ಲಿ ಬಿಜೆಪಿ ವಕ್ತಾರೆಯಾಗಿದ್ದ ನೂಪುರ್ ಶರ್ಮಾ(ಅಮಾನತುಗೊಳಿಸಲಾಗಿದೆ) ಹಾಗೂ ದೆಹಲಿ ಘಟಕದ ಮಾಧ್ಯಮ ಮುಖ್ಯಸ್ಥ ನವೀನ್ ಜಿಂದಾಲ್(ವಜಾಗೊಳಿಸಲಾಗಿದೆ), ಮೊಹಮ್ಮದ್ ಪೈಗಂಬರ್ ಅವರನ್ನು ಅವಹೇಳನ ಮಾಡುವ ಮೂಲಕ ಧಾರ್ಮಿಕ ನಂಬಿಕೆಗೆ ಧಕ್ಕೆ ತಂದಿದ್ದಾರೆ. ಅವರನ್ನು ಬಂಧಿಸಿ, ಕಠಿಣ ಶಿಕ್ಷೆ ವಿಧಿಸಬೇಕೆಂದು ಆಗ್ರಹಿಸಿದರು. ಇದೇ ವೇಳೆ ಬಿಜೆಪಿ ಪಕ್ಷ, ಪ್ರಧಾನಿ ಮೋದಿ, ಕೇಂದ್ರ ಸರ್ಕಾರ ಹಾಗೂ ಆರ್‌ಎಸ್‌ಎಸ್ ವಿರುದ್ಧವೂ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಅಕ್ಷಮ್ಯ ಅಪರಾಧ: ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಮಾತನಾಡಿ, ನೂಪುರ್ ಶರ್ಮಾ ಹಾಗೂ ನವೀನ್ ಜಿಂದಾಲ್ ಚಾನಲ್‌ನಲ್ಲಿ ಕುಳಿತು ಮೊಹಮ್ಮದ್ ಪೈಗಂಬರ್ ಅವರನ್ನು ನಿಂದಿಸಿರುವುದು ಅಕ್ಷಮ್ಯ ಅಪರಾಧ. ಇದರಿಂದ ಭಾರತದ ಘನತೆಗೆ ಧಕ್ಕೆ ತಂದಿದ್ದಾರೆ. ಬಿಜೆಪಿ ಚುನಾವಣೆ ಅಜೆಂಡಾ ಮುಸ್ಲಿಂ ಮಾತ್ರವೇ ಹೊರತು ಜನರ ಜ್ವಲಂತ ಸಮಸ್ಯೆ ಅಲ್ಲ. ಧೈರ್ಯ ಇದ್ದರೆ ಅಭಿವೃದ್ಧಿ, ರೈತರ ಆತ್ಮಹತ್ಯೆ, ಅನಿವಾರ್ಯವಾಗಿ ವೇಶ್ಯಾವಾಟಿಕೆಯಲ್ಲಿರುವ ನೊಂದ ಹೆಣ್ಣು ಮಕ್ಕಳ ಬಗ್ಗೆ ಮಾತನಾಡಿ. ಟಿಪ್ಪು ಸುಲ್ತಾನ್ ಬಗ್ಗೆ ಮಾತನಾಡುವ ಪ್ರತಾಪ್ ಸಿಂಹ ಚರ್ಚೆಗೆ ಬರಲಿ. ಮೈಸೂರಿನ ಸೌಹಾರ್ದತೆ ಕದಡಲು ಯತ್ನಿಸುತ್ತಿರುವ ಪ್ರಮೋದ್ ಮುತಾಲಿಕ್, ಕಾಳಿಸ್ವಾಮಿ ಇಲ್ಲಿಗೆ ಬರದಂತೆ ಪೊಲೀಸರು ನಿರ್ಬಂಧಿಸಬೇಕು. ಇಂತಹವರ ವಿರುದ್ಧ ಸುಮೋಟೋ ದಾಖಲಿಸಿ, ಬಂಧಿಸಬೇಕು ಎಂದು ಆಗ್ರಹಿಸಿದರು.

ಮುಖಂಡ ಫರ್ಧೀನ್ ಖಾನ್ ಮಾತನಾಡಿ, ನೂಪುರ್ ಶರ್ಮಾ ಹಾಗೂ ನವೀನ್ ಜಿಂದಾಲ್‌ನನ್ನು ಬಂಧಿಸಿ ಕಠಿಣ ಶಿಕ್ಷೆ ವಿಧಿಸಬೇಕು. ನಾವು ದೇಶದ ಕಾನೂನನ್ನು ಗೌರವಿಸುವ ಕಾರಣದಿಂದಲೇ ಆಗ್ರಹಿಸುತ್ತಿದ್ದೇವೆ. ಈ ವಿಚಾರವಾಗಿ ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) ಏಕೆ ತನಿಖೆ ನಡೆಸುತ್ತಿಲ್ಲ. ಮುಂಬರುವ ಕರ್ನಾಟಕ ಹಾಗೂ ಗುಜರಾತ್ ವಿಧಾನಸಭಾ ಚುನಾವಣೆ ದೃಷ್ಟಿಯಲ್ಲಿ ಬಿಜೆಪಿ ಈ ರೀತಿಯ ಗದ್ದಲ ಸೃಷ್ಟಿ ಮಾಡುತ್ತಿದೆ. ಇಸ್ಲಾಂ ಹಾಗೂ ಶರೀಯತ್ ಅನ್ನು ಗುರಿ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಕಾಂಗ್ರೆಸ್ ವಿರುದ್ಧವೂ ಕಿಡಿ: ಮೌಲಾನಾ ನೂರುದ್ದೀನ್ ಫಾರೂಖಿ ಮಾತನಾಡಿ, ಭಾರತದಲ್ಲಿ ಮುಸ್ಲಿಂ ಸಮುದಾಯದ ಮೇಲೆ ನಿರಂತರ ದೌರ್ಜನ್ಯ ನಡೆಯುತ್ತಿದೆ. ನೂಪುರ್ ಶರ್ಮಾ ಮತ್ತು ನವೀನ್ ಜಿಂದಾಲ್ ಅವರಂತಹ ಸಾಕಷ್ಟು ಜನ ಈ ರೀತಿ ಕಿಚ್ಚು ಹಚ್ಚುತ್ತಿದ್ದಾರೆ. ಆರ್‌ಎಸ್‌ಎಸ್, ಶ್ರೀರಾಮ ಸೇನೆ ಹಾಗೂ ಬಿಜೆಪಿಗೆ ಮುಂದಿನ ದಿನಗಳಲ್ಲಿ ಎಸ್‌ಡಿಪಿಐ ಹಾಗೂ ಪಿಎಫ್‌ಐ ತಕ್ಕ ಉತ್ತರ ನೀಡಲಿವೆ. ಆದರೆ ಮುಸ್ಲಿಂ ಸಮುದಾಯ ಯಾವ ಕಾರಣಕ್ಕೂ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಬಾರದು ಎಂದು ಹೇಳಿದರು.

ಎಸ್‌ಡಿಪಿಐ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹಮ್ಮದ್ ಶಫಿ, ರಾಜ್ಯ ಉಪಾಧ್ಯಕ್ಷರಾದ ದೇವನೂರು ಪುಟ್ಟನಂಜಯ್ಯ ಹಾಗೂ ಅಮ್ಜಾದ್ ಖಾನ್, ಜಿಲ್ಲಾ ಉಪಾಧ್ಯಕ್ಷ ಸ್ವಾಮಿ, ಅಲ್ತಾಫ್, ಫರ್ದೀನ್ ಖಾನ್, ಇಬ್ರಾಹಿಂ ಫಠಾಣ್, ಮಹಮ್ಮದ್ ಜಹೀರ್, ನದೀಮ್, ಅಸ್ಲಾಂ ಪಾಷಾ, ಜುನೈದ್, ಫರ್ದೂಸ್ ಅಹಮದ್, ರಿಜ್ವಾನ್, ಮುಬಾರಕ್ ಸೇರಿದಂತೆ ಎಸ್‌ಡಿಪಿಐ ಇನ್ನಿತರ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಗಂಟೆಗೂ ಹೆಚ್ಚು ಕಾಲ ರಸ್ತೆ ತಡೆದು ಪ್ರತಿಭಟನೆ ನಡೆಸಿದ ಪರಿಣಾಮ ವಾಹನ ಸಂಚಾರಕ್ಕೆ ಅಡ್ಡಿಯಾಗಿತ್ತು.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 11 ಶನಿವಾರ 2022

ಸಂಪುಟ: 43 | ಸಂಚಿಕೆ: 56 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com


₹4


ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾದ

ನಿರ್ಮಲಾ ಸೀತಾರಾಮನ್, ಜಗ್ಗೇಶ್, ಲೆಹರ್‌ಸಿಂಗ್, ಜೈರಾಮ್ ರಮೇಶ್


ನಿರ್ಮಲಾ ಸೀತಾರಾಮನ್


ಜಗ್ಗೇಶ್


ಲೆಹರ್‌ಸಿಂಗ್


ಜೈರಾಮ್ ರಮೇಶ್

ಜೆಡಿಎಸ್–ಕಾಂಗ್ರೆಸ್ ಜಗಳದಲ್ಲಿ ಬಿಜೆಪಿಗೆ ಮಹಾಲಾಭ... ಬಿಜೆಪಿ ತ್ರಿವಿಕ್ರಮ, ಕೈಗೆ ಒಂದು, ಜೆಡಿಎಸ್ ಶೂನ್ಯ

● 'ಕೈ' ಹಿಡಿದ ಜೆಡಿಎಸ್ ಶ್ರೀನಿವಾಸ್‌ಗೌಡ ● ಕುತೂಹಲ ಕೆರಳಿಸಿರುವ ಬಿಜೆಪಿಗೆ ಬಿದ್ದಿರುವ ಒಂದು ಅಧಿಕ ಮತ

ಬೆಂಗಳೂರು, ಜೂ.10(ಕೆಎಂಶಿ)– ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಗೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಬಿಜೆಪಿಯ ನಿರ್ಮಲಾ ಸೀತಾರಾಮನ್, ಜಗ್ಗೇಶ್, ಲೆಹರ್‌ಸಿಂಗ್ ಸಿರೋಯಾ ಮತ್ತು ಕಾಂಗ್ರೆಸ್‌ನ ಜೈರಾಮ್ ರಮೇಶ್ ಗೆಲುವು ಸಾಧಿಸಿದ್ದಾರೆ. ಇಂದು ರಾತ್ರಿ ಅಧಿಕೃತವಾಗಿ ಫಲಿತಾಂಶ ಘೋಷಿಸಿದ ಚುನಾವಣಾಧಿಕಾರಿ ಎಂ.ಕೆ. ವಿಶಾಲಾಕ್ಷಿ ಅವರು ವಿಜೇತರಿಗೆ ಪ್ರಮಾಣಪತ್ರ ವಿತರಿಸಿದರು.

ಕಾಂಗ್ರೆಸ್–ಜೆಡಿಎಸ್ ಒಣ ಪ್ರತಿಷ್ಠೆಯಿಂದ ರಾಜ್ಯಸಭೆಯಲ್ಲಿ ತಮಗೆ ದಕ್ಕಬಹುದಾಗಿದ್ದ ಒಂದು ಸ್ಥಾನವನ್ನು ನಿರಾಯಾಸವಾಗಿ ಬಿಜೆಪಿಗೆ ಬಿಟ್ಟುಕೊಟ್ಟಿವೆ. ಜೆಡಿಎಸ್ ಅಭ್ಯರ್ಥಿ ರಾಜ್ಯಸಭೆ ಪ್ರವೇಶಿಸಬಾರದೆಂಬ ನಿಲುವು ▶ 6ನೇ ಪುಟಕ್ಕೆ


ಬಿಜೆಪಿಯಿಂದ ರಾಜ್ಯಸಭೆಗೆ ಆಯ್ಕೆಯಾದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಜಗ್ಗೇಶ್, ಲೆಹರ್‌ಸಿಂಗ್ ಸಿರೋಯಾ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಸಚಿವ ಭಗವಂತ್ ಕೂಬಾ, ರಾಜ್ಯ ಸಚಿವ ಬಿ.ಸಿ. ನಾಗೇಶ್, ಮುಖಂಡ ಸಿ.ಟಿ. ರವಿ ಅಭಿನಂದಿಸಿದರು.


ಕಾಂಗ್ರೆಸ್‌ನಿಂದ ರಾಜ್ಯಸಭೆಗೆ ಆಯ್ಕೆಯಾದ ಜೈರಾಮ್ ರಮೇಶ್ ಅವರನ್ನು ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್, ಮುಖಂಡ ಮನ್ಸೂರ್ ಅಲೀಖಾನ್ ಇತರರು ಅಭಿನಂದಿಸಿದರು.

ಶ್ರೀನಿವಾಸಗೌಡಗೆ ಮಾನ–ಮರ್ಯಾದೆ ಇದ್ರೆ ರಾಜೀನಾಮೆ ಕೊಡ್ಲಿ

ಕಾಂಗ್ರೆಸ್‌ನವರಿಗೆ ನಾಚಿಕೆ ಇದೆಯಾ?: ಹೆಚ್.ಡಿ.ಕುಮಾರಸ್ವಾಮಿ ಆಕ್ರೋಶ



ಬೆಂಗಳೂರು, ಜೂ.10– ಶ್ರೀನಿವಾಸಗೌಡಗೆ ಮಾನ ಮರ್ಯಾದೆ ಇದ್ದರೆ ತಕ್ಷಣವೇ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ತೊಲಗಲಿ ಎಂದು ರಾಜ್ಯಸಭೆ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದ ಜೆಡಿಎಸ್‌ನ ಕೋಲಾರ ಶಾಸಕ ಶ್ರೀನಿವಾಸಗೌಡ ವಿರುದ್ಧ ಜೆಡಿಎಸ್ ನಾಯಕ ಹೆಚ್.ಡಿ.ಕುಮಾರಸ್ವಾಮಿ ಕೆಂಡಾಮಂಡಲರಾಗಿದ್ದಾರೆ.

ಕೋಲಾರ ಶಾಸಕ ಶ್ರೀನಿವಾಸಗೌಡ ಅವರು ಅಡ್ಡ ಮತದಾನ ಮಾಡಿದ ಬಳಿಕ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಹೆಚ್.ಡಿ. ಕುಮಾರಸ್ವಾಮಿ, ಮಾನ ಮರ್ಯಾದೆ ಇದ್ದರೆ ಪಕ್ಷ ಬಿಟ್ಟು ಹೋಗಲಿ, ಇಂಥವರಿಗೆ ಪಕ್ಷದಿಂದ ಶಿಸ್ತು ಕ್ರಮದ ಅಗತ್ಯವಿಲ್ಲ, ಅದರಿಂದ ಪ್ರಯೋಜನವೂ ಇಲ್ಲ. ಜೆಡಿಎಸ್‌ನಲ್ಲಿದ್ದುಕೊಂಡು ಶಾಸಕರಾಗಿ ಇಂದು ವಿರುದ್ಧವಾಗಿ ನಡೆದುಕೊಂಡು ಜನರ ಮುಂದೆ ಹೋಗುತ್ತಾರೆ. ಪ್ರಜಾಪ್ರಭುತ್ವದಲ್ಲಿ ಜನ ಉಳಿಸುತ್ತಾರಾ, ಕಾಂಗ್ರೆಸ್‌ನವರಿಗೆ ಶ್ರೀನಿವಾಸಗೌಡರ ಮತದಿಂದ ಏನು ಸಿಕ್ಕಿತು, ನೀವು ಬಿಜೆಪಿ ಗೆಲ್ಲಿಸಿಕೊಂಡು ಜನರ ಮುಂದೆ ಹೇಗೆ ಹೋಗ್ತೀರಿ ಎಂದು ಕಿಡಿಕಾರಿದರು. ಇವತ್ತು ಬಿಜೆಪಿ ಗೆದ್ದರೆ ಅದು ಕಾಂಗ್ರೆಸ್‌ನಿಂದ. ಕಾಂಗ್ರೆಸ್‌ನವರು ಇನ್ನೂ ಮತ ಹಾಕುವುದಕ್ಕೆ ಬಂದಿಲ್ಲ. ಬಿಜೆಪಿಯವರಿಗೆ ಮತ ಹಾಕಲು ಕಾದು ಕುಳಿತಿದ್ದಾರೆ ಎಂದರು.

ಕಾಂಗ್ರೆಸ್‌ನವರಿಗೆ ನಾಚಿಕೆ, ಮಾನ–ಮರ್ಯಾದೆ ಇದೆಯಾ?: ನಿಮಗೆ ನಾಚಿಕೆ, ಮಾನ, ಮರ್ಯಾದೆ ಇದೆಯಾ ಎಂದು ಕಾಂಗ್ರೆಸ್ ವಿರುದ್ಧ ಕಿಡಿಕಾರಿದರು. ಶ್ರೀನಿವಾಸ ಗೌಡ ಮತ ಹಾಕಿಸಿಕೊಂಡು ಕಾಂಗ್ರೆಸ್ಸಿಗರೇ ಗೆದ್ಬಿಟ್ರಾ, ಕೀಳುಮಟ್ಟದ ರಾಜಕಾರಣ ಮಾಡಿದವರನ್ನು, ಶಾಸಕರು ಅಂತಾರಾ? ▶ 6ನೇ ಪುಟಕ್ಕೆ

ಕಾಂಗ್ರೆಸ್‌ಗೆ ಮತ ಹಾಕಿದ್ದೇನೆ, ನಾನು ಕಾಂಗ್ರೆಸ್ ಇಷ್ಟಪಡುತ್ತೇನೆ



ಬೆಂಗಳೂರು, ಜೂ.10– ಜೆಡಿಎಸ್‌ನಿಂದ ಮೊದಲ ಅಧಿಕೃತ ಅಡ್ಡ ಮತದಾನವಾಗಿದೆ. ಶುಕ್ರವಾರ ಬೆಳಗ್ಗೆ ಆರಂಭವಾದ ರಾಜ್ಯಸಭಾ ಚುನಾವಣೆಯ ಮತದಾನ ಪ್ರಕ್ರಿಯೆಯಲ್ಲಿ ವಿಧಾನಸೌಧಕ್ಕೆ ಆಗಮಿಸಿದ ಕೋಲಾರ ಕ್ಷೇತ್ರದ ಜೆಡಿಎಸ್ ಶಾಸಕ ಕೆ ಶ್ರೀನಿವಾಸ ಗೌಡ ಕಾಂಗ್ರೆಸ್‌ಗೆ ಮತ ಹಾಕಿದ್ದಾರೆ.

ಈ ಮೂಲಕ ಜೆಡಿಎಸ್‌ನಿಂದ ಮೊದಲ ಅಡ್ಡಮತದಾನವಾಗಿದೆ. ಮತದಾನ ಮಾಡಿ ಹೊರಬಂದ ಬಳಿಕ ತಮ್ಮ ಸುತ್ತ ನೆರೆದಿದ್ದ ಮಾಧ್ಯಮ ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡಿದ ಅವರು, ನಾನು ಈ ಹಿಂದೆ ಕಾಂಗ್ರೆಸ್‌ನಲ್ಲಿದ್ದಾಗ ಸಚಿವನಾಗಿದ್ದೆ. ಕುಮಾರಸ್ವಾಮಿ ಸಿಟ್ಟಾದ್ರೆ ಆಗಲಿ ಬಿಡಿ, ರಾಜಕೀಯದಲ್ಲಿ ಇವೆಲ್ಲಾ ಕಾಮನ್, ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಸೇರ್ಪಡೆಯಾಗಲಿದ್ದೇನೆ ಎಂದರು.

ಜೆಡಿಎಸ್‌ನಲ್ಲಿ ನನಗೆ ಅಸಮಾಧಾನವಿದೆ. ಆದರೆ ನಾನು ಜೆಡಿಎಸ್ ಶಾಸಕನಾಗಿದ್ದು, ಈಗ ಜೆಡಿಎಸ್‌ಗೆ ಮತ ಚಲಾಯಿಸದಿದ್ದರೇ ನನ್ನನ್ನು ಆಯ್ಕೆ ಮಾಡಿದ ಮತದಾರರನ್ನು ಅಗೌರವಿಸಿದಂತೆ ಆಗುತ್ತದೆ. ಹೀಗಾಗಿ ಜೆಡಿಎಸ್ ಅಭ್ಯರ್ಥಿಗೆ ಮತ ಚಲಾಯಿಸಿದ್ದೇನೆ. ಪ್ರಸ್ತುತ ಎಲ್ಲಾ ಪಕ್ಷಗಳ ರಾಜಕಾರಣವನ್ನು ನೋಡಿ ರಾಜ್ಯದ ಜನತೆ ಬೇಸರ ವ್ಯಕ್ತಪಡಿಸುತ್ತಿದ್ದಾರೆ. ನನಗೂ ಕೂಡ ಈಗಿನ ರಾಜಕೀಯ ವಿದ್ಯಮಾನಗಳು ಬೇಸರ ತಂದಿವೆ.



ಮುಂದೆ ಚುನಾವಣೆಯಲ್ಲಿ ಸ್ಪರ್ಧಿಸುವುದೇ ಬೇಡ ಎಂದು ಅನಿಸಿಬಿಟ್ಟಿದೆ. ಆದರೆ ಕ್ಷೇತ್ರದ ಜನರ ಅಭಿಪ್ರಾಯದಂತೆ ನಡೆದುಕೊಳ್ಳುತ್ತೇನೆ. ಈಗಾಗಲೇ ನನ್ನ ಮಗ ಹರೀಶ್‌ಗೌಡ ಸ್ಪರ್ಧೆ ಮಾಡಲೇಬೇಕು ಎಂದು ಜನರು ಒತ್ತಾಯಿಸುತ್ತಿದ್ದಾರೆ.

– ಜಿ.ಟಿ.ದೇವೇಗೌಡ, ಚಾಮುಂಡೇಶ್ವರಿ ಕ್ಷೇತ್ರದ ಶಾಸಕ.

ಯಾರು ನೀಚರು ಎಂದು ಜನರೇ ತೀರ್ಮಾನಿಸುತ್ತಾರೆ



ಗುಬ್ಬಿ, ಜೂ.10– ರಾಜ್ಯದ ಜನತೆ ಎಲ್ಲಾ ವಿದ್ಯಮಾನಗಳನ್ನು ನೋಡುತ್ತಿದ್ದಾರೆ ಯಾರು ನೀಚರು ಎಂಬುದನ್ನು ಜನತೆಯೇ ತೀರ್ಮಾನಿಸುತ್ತಾರೆ ಎಂದ ಗುಬ್ಬಿ ಜೆಡಿಎಸ್ ಶಾಸಕ ಎಸ್.ಆರ್.ಶ್ರೀನಿವಾಸ್, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ತಿರುಗೇಟು ನೀಡಿದ್ದಾರೆ. ಗುಬ್ಬಿಯಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕುಮಾರಸ್ವಾಮಿ ಅವರಿಂದ ನೀಚರು, ಅಧಮರು ಎಂದು ಹೇಳಿಸಿಕೊಳ್ಳುವ ಮಟ್ಟಕ್ಕೆ ನಾವಿಲ್ಲ. ರಾಜಕಾರಣದಲ್ಲಿ ನಾನು ಮತ್ತು ▶ 6ನೇ ಪುಟಕ್ಕೆ

ಜೂ.13, ವಿಧಾನ ಪರಿಷತ್ ಚುನಾವಣೆ

ವಿಶೇಷ ಸಾಂದರ್ಭಿಕ ರಜೆ ಘೋಷಣೆ

ಬೆಂಗಳೂರು, ಜೂ.10– ಜೂ.13 ರಂದು ರಾಜ್ಯದಲ್ಲಿ ವಿಧಾನಪರಿಷತ್‌ನ ಪದವೀಧರ ಹಾಗೂ ಶಿಕ್ಷಕರ ಕ್ಷೇತ್ರದ ಚುನಾವಣೆ ಹಿನ್ನೆಲೆ, ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿನ ಮತದಾರ ನೌಕರರಿಗೆ ವಿಶೇಷ ಸಾಂದರ್ಭಿಕ ರಜೆ ನೀಡುವಂತೆ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಈ ಕುರಿತು ಆದೇಶ ಹೊರಡಿಸಿರುವ ಸರ್ಕಾರದ ಅಧೀನ ಕಾರ್ಯದರ್ಶಿ ಅಪೇಕ್ಷಾ ಸತೀಶ್ ಪವಾರ್, ಎಲ್ಲಾ ಸರ್ಕಾರಿ ಹಾಗೂ ಶಾಲಾ ಕಾಲೇಜು, ಅನುದಾನ ಹಾಗೂ ಅನುದಾನ ರಹಿತ, ಸಹಿತ ಶಿಕ್ಷಣ ಸಂಸ್ಥೆಗಳು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಕಚೇರಿಗಳು, ರಾಷ್ಟ್ರೀಕೃತ ಹಾಗೂ ಇತರೆ ಬ್ಯಾಂಕ್‌ಗಳಿಗೆ ಇತರ ಸಂಸ್ಥೆಗಳ ಪದವೀಧರ ಮತದಾರಿಗೆ ಸಾಂದರ್ಭಿಕ ರಜೆ ನೀಡುವಂತೆ ಸೂಚಿಸಿದ್ದಾರೆ. ಎರಡು ಪದವೀಧರ ಹಾಗೂ ಎರಡು ಶಿಕ್ಷಕರ ಕ್ಷೇತ್ರಗಳಿಗೆ ಜೂನ್ 13 ರಂದು ಚುನಾವಣೆ ನಡೆಯಲಿದ್ದು ಅಂದು ರಾಜ್ಯ ಸರ್ಕಾರದಿಂದ ವಿಶೇಷ ಸಾಂದರ್ಭಿಕ ರಜೆಯನ್ನು ಘೋಷಣೆ ಮಾಡಿದೆ.

ಬೆಂಗಳೂರಿನಲ್ಲಿ ಮತ್ತೊಂದು ಆಸಿಡ್ ಪ್ರಕರಣ

ಮದುವೆಗೆ ಒಪ್ಪದ ವಿವಾಹಿತೆ ಮೇಲೆ ದಾಳಿ




ಬೆಂಗಳೂರು, ಜೂ.10– ಬೆಂಗಳೂರಿನಲ್ಲಿ ಮತ್ತೊಂದು ಆಸಿಡ್ ದಾಳಿ ಪ್ರಕರಣ ವರದಿಯಾಗಿದ್ದು, ಮದುವೆಯಾಗಲು ನಿರಾಕರಿಸಿದ ಮಹಿಳೆ ಮೇಲೆ ವ್ಯಕ್ತಿ ಆ್ಯಸಿಡ್ ಎರಚಿದ್ದಾನೆ.

ಬೆಂಗಳೂರಿನ ಕುಮಾರಸ್ವಾಮಿ ಲೇಔಟ್‌ನ ಸಾರಕ್ಕಿ ಬಳಿ ಈ ಘಟನೆ ನಡೆದಿದ್ದು, ಮಹಿಳೆಯೊಬ್ಬರ ಮೇಲೆ ಆಸಿಡ್ ಎರಚಿ ವ್ಯಕ್ತಿ ಪರಾರಿಯಾಗಿದ್ದಾನೆ. ಪರಿಚಯಸ್ಥನೇ ಕೃತ್ಯ ಎಸಗಿರುವ ಶಂಕೆ ಇದೆ. ಮೂಲಗಳ ಪ್ರಕಾರ ಮದುವೆಯಾಗುವಂತೆ ಒತ್ತಾಯಿಸುತ್ತಿದ್ದ ವ್ಯಕ್ತಿ ಆಕೆ ನಿರಾಕರಿಸಿದ್ದರಿಂದ ಆಕ್ರೋಶಗೊಂಡು ಸ್ಥಳದಲ್ಲೇ ಆಸಿಡ್ ಎರಚಿದ್ದಾನೆ ಎಂದು ತಿಳಿದುಬಂದಿದೆ. ಕುಮಾರಸ್ವಾಮಿ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ಕೃತ್ಯ ನಡೆದಿದ್ದು, ಗಾಯಾಳು ಮಹಿಳೆಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. 'ಮಹಿಳೆ ಜೊತೆ ವೈಮನಸ್ಸು ಹೊಂದಿದ್ದ ಅಹ್ಮದ್ ಎಂಬಾತ, ಆಸಿಡ್ ಎರಚಿರುವ ಮಾಹಿತಿ ಇದೆ. ಸದ್ಯ ಮಹಿಳೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಪ್ರತ್ಯಕ್ಷದರ್ಶಿಗಳು ಹಾಗೂ ಮಹಿಳೆ ಹೇಳಿಕೆ ಪಡೆದು ಮುಂದಿನ ಕ್ರಮ ಜರುಗಿಸಲಾಗುವುದು' ಎಂದು ಪೊಲೀಸರು ತಿಳಿಸಿದ್ದಾರೆ.

ಇಲ್ಯಾಸ್ ನಗರದ ನಿವಾಸಿಯಾಗಿರುವ ಮಹಿಳೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಅಲ್ಲಿಂದ ಶೀಘ್ರದಲ್ಲೇ ಡಿಸ್ಚಾರ್ಜ್ ಆಗುವ ನಿರೀಕ್ಷೆಯಿದೆ. ಘಟನೆ ನಡೆದ ಕೆಲವೇ ಗಂಟೆಗಳಲ್ಲಿ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ

ಇಬ್ಬರೂ ವಿಚ್ಛೇದಿತರು: ಇನ್ನು ಆಸಿಡ್ ದಾಳಿಗೆ ತುತ್ತಾದ 32 ವರ್ಷದ ಮಹಿಳೆ ಮತ್ತು ದಾಳಿ ಮಾಡಿದ ವ್ಯಕ್ತಿ ಇಬ್ಬರೂ ವಿಚ್ಛೇದಿತರಾಗಿದ್ದು, ಮಹಿಳೆಗೆ ಮೂರು ಮಕ್ಕಳಿದ್ದರು. ಸಂತ್ರಸ್ಥೆ ಮತ್ತು ಆರೋಪಿ ಇಬ್ಬರು ಅಗರಬತ್ತಿ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದು, ಕಳೆದ ಒಂದೂವರೆ ವರ್ಷಗಳಿಂದ ಸಂಬಂಧ ಹೊಂದಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ ಆರೋಪಿಯು ಮದುವೆಯಾಗಿ ಮಕ್ಕಳನ್ನೂ ಹೊಂದಿದ್ದು, ಎರಡನೇ ಹೆಂಡತಿಯನ್ನು ಹೊಂದಲು ಬಯಸಿದ್ದ. ಹೀಗಾಗಿ ಮಹಿಳೆಯನ್ನು ಮದುವೆಯಾಗುವಂತೆ ▶ 6ನೇ ಪುಟಕ್ಕೆ

ರಾಜ್ಯದಲ್ಲಿ ಕೊರೊನಾ ಹೆಚ್ಚಳ: ರಾಜ್ಯ ಸರ್ಕಾರದಿಂದ ಹೊಸ ಮಾರ್ಗಸೂಚಿ



ಬೆಂಗಳೂರು, ಜೂ.10– ರಾಜ್ಯದಲ್ಲಿ ಕೊರೊನಾ ಸೋಂಕು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಶುಕ್ರವಾರ ಹೊಸ ಮಾರ್ಗಸೂಚಿ ಹೊರಡಿಸಿ, ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಕಡ್ಡಾಯಗೊಳಿಸಿದೆ.

ರಾಜ್ಯದಲ್ಲಿ ಕಳೆದ 10 ದಿನಗಳಿಂದ ದೈನಂದಿನ ಕೋವಿಡ್ ಪಾಸಿಟಿವ್ ಪ್ರಕರಣಗಳ ಸಂಖ್ಯೆಯಲ್ಲಿ ನಿಧಾನಗತಿಯಲ್ಲಿ ಏರಿಕೆಯಾಗಿರುವುದನ್ನು ಪರಿಗಣಿಸಿ ಮುಂಜಾಗ್ರತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವುದು ಅಗತ್ಯವಾಗಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಹೊಸ ಮಾರ್ಗಸೂಚಿ: ● ಸಾರ್ವಜನಿಕ ಪ್ರದೇಶಗಳಲ್ಲಿ ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ● ಶಾಪಿಂಗ್ ಮಾಲ್‌ಗಳು, ರೆಸ್ಟೋರೆಂಟ್‌ಗಳು, ಪಬ್‌ಗಳು, ಕೆಫೆಟೇರಿಯಾ, ಹೊಟೇಲ್‌ಗಳು, ಶೈಕ್ಷಣಿಕ ಸಂಸ್ಥೆಗಳು, ಹಾಸ್ಟೆಲ್‌ಗಳು, ಕಛೇರಿಗಳು, ಕಾರ್ಖಾನೆ ಇತ್ಯಾದಿ ಪ್ರದೇಶಗಳಲ್ಲಿ ಸಿಬ್ಬಂದಿಗಳು ಮಾಸ್ಕ್ ಕಡ್ಡಾಯ. ● ಸ್ವಂತ ವಾಹನಗಳು ಹಾಗೂ ಸಾರ್ವಜನಿಕ ಸಾರಿಗೆ ವಾಹನಗಳಲ್ಲಿ (ಬಸ್ ಹಾಗೂ ರೈಲು) ಪ್ರಯಾಣಿಸುವ ಸಂದರ್ಭದಲ್ಲಿ ಸಾರ್ವಜನಿಕರು ಮಾಸ್ಕ್ ಧರಿಸುವುದು ಕಡ್ಡಾಯ. ● ILI & SARI ಲಕ್ಷಣಗಳನ್ನು ಹೊಂದಿದ ವರು, ಹೈರಿಸ್ ಗುಂಪಿನವರು ಹಾಗೂ ಇತರ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವವರನ್ನು ಆದ್ಯತೆಯ ಮೇಲೆ ಪರೀಕ್ಷೆಗೆ ಒಳಪಡುವುದು ಹಾಗೂ ಫಲಿತಾಂಶ ಲಭ್ಯವಾಗುವವರೆಗೂ ಮನೆಯಲ್ಲಿಯೇ ಪ್ರತ್ಯೇಕವಾಗಿ ರುವುದು. ●ಎಲ್ಲರೂ ಕೋವಿಡ್ 19 ಲಸಿಕೆಯನ್ನು ಪಡೆಯುವುದು.

ಮದ್ದೂರಲ್ಲಿ ATM ತುಂಡರಿಸಿ 20.62 ಲಕ್ಷ ದೋಚಿದ್ದ ಖದೀಮ ಉತ್ತರ ಪ್ರದೇಶದಲ್ಲಿ ಬಂಧನ

● ಗ್ಯಾಸ್ ಕಟ್ಟರ್‌ನಿಂದ ಎಟಿಎಂ ಯಂತ್ರ ತುಂಡರಿಸಲಾಗಿತ್ತು ● ಇನ್ನೂ ನಾಲ್ವರು ಆರೋಪಿಗಳಿಗೆ ಶೋಧ ● ಮದ್ದೂರು ಪೊಲೀಸರ ಸಾಹಸಮಯ ಕಾರ್ಯಾಚರಣೆಗೆ ಎಸ್ಪಿ ಶ್ಲಾಘನೆ



ಮದ್ದೂರು, ಜೂ.10– ಗ್ಯಾಸ್ ಕಟ್ಟರ್‌ನಿಂದ ಎಟಿಎಂ ಯಂತ್ರ ಕತ್ತರಿಸಿ 20.62 ಲಕ್ಷ ರೂ. ದರೋಡೆ ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಉತ್ತರಪ್ರದೇಶದಲ್ಲಿ ಓರ್ವ ಡಕಾಯಿತನನ್ನು ಬಂಧಿಸುವಲ್ಲಿ ಮದ್ದೂರು ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ಉತ್ತರಪ್ರದೇಶದ ಗಾಜಿಯಾಬಾದ್‌ನ ದೀಪಕ್ ತೋಮರ್ ಅಲಿಯಾಸ್ ಕುಲ್ಲು(29) ಬಂಧಿತನಾಗಿದ್ದು, ಇನ್ನುಳಿದ ಗಾಜಿಯಾಬಾದ್‌ನ ರವೀಂದ್ರ ಯಾದವ್ ಅಲಿಯಾಸ್ ಮಂಗಲ್, ಹರಿಯಾಣದ ಮೇವಾತ್‌ನ ಸಲೀಂ ಅಲಿಯಾಸ್ ಚೀಪಾ, ಫೌಜಿ ಮತ್ತು ರಾಜ ಎಂಬುವವರಿಗಾಗಿ ಹುಡುಕಾಟ ನಡೆದಿದೆ.

ವಿವರ: ಮದ್ದೂರು ಕೆಎಸ್‌ಆರ್‌ಟಿಸಿ ಡಿಪೋ ರಸ್ತೆಯಲ್ಲಿರುವ ಎಸ್‌ಬಿಐ ಎಟಿಎಂ ಯಂತ್ರವನ್ನು ಕಳೆದ ಏ.11 ರಂದು ರಾತ್ರಿ ಗ್ಯಾಸ್ ಕಟ್ಟರ್‌ನಿಂದ ಕತ್ತರಿಸಿ 20,62,800 ರೂ.ಗಳನ್ನು ದರೋಡೆ ಮಾಡಲಾಗಿತ್ತು. ಸ್ವಿಫ್ಟ್ ಕಾರಿನಲ್ಲಿ ಬಂದ ಐವರು ದುಷ್ಕರ್ಮಿಗಳು ಎಟಿಎಂ ಮುಂದೆ ಇಳಿದಿದ್ದು ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿತ್ತು. ಆ ನಂತರ ದುಷ್ಕರ್ಮಿಗಳು ಸಿಸಿ ಕ್ಯಾಮರಾಗಳಿಗೆ ಕಲರ್ ಸ್ಪ್ರೇ ಮಾಡಿದ್ದರಿಂದ ದೃಶ್ಯಗಳು ದಾಖಲಾಗಿರಲಿಲ್ಲ.

ಸಿಸಿ ಕ್ಯಾಮರಾದಲ್ಲಿ ಕಾರು ಸೆರೆಯಾಗಿದ್ದರೂ ಕೂಡ ಅದರ ಸಂಖ್ಯೆ ಸ್ಪಷ್ಟವಾಗಿ ಕಾಣಿಸುತ್ತಿರಲಿಲ್ಲ. ಕಾರಿನ ಇಂಡಿಕೇಟರ್‌ಗಳನ್ನು ಸೂಕ್ಷ್ಮವಾಗಿ ಗಮನಿಸಿ ಅದು ಸ್ವಿಫ್ಟ್ ಕಾರು ಎಂಬ ನಿರ್ಧಾರಕ್ಕೆ ಪೊಲೀಸರು ಬಂದಿದ್ದರು. ಮದ್ದೂರಿನ ಕೊಲ್ಲಿ ಸರ್ಕಲ್‌ನ ಎಸ್‌ಬಿಐ ಎಟಿಎಂ ಅನ್ನು ಇದೇ ರೀತಿ ಕತ್ತರಿಸಿ 2021ರ ಮೇ 22 ರಂದು ದರೋಡೆ ಮಾಡಲಾಗಿತ್ತು. ಈ ಹಿನ್ನೆಲೆಯಲ್ಲಿ ಮಂಡ್ಯ ಜಿಲ್ಲಾ ಎಸ್ಪಿ ಯತೀಶ್ ಅವರು, ಈ ಪ್ರಕರಣದ ಪತ್ತೆಗಾಗಿ ಮದ್ದೂರು ಠಾಣೆ ಇನ್ಸ್‌ಪೆಕ್ಟರ್ ಕೆ.ಎನ್. ಹರೀಶ್ ನೇತೃತ್ವದಲ್ಲಿ ಮೂವರು ಸಬ್ ಇನ್ಸ್‌ಪೆಕ್ಟರ್‌ಗಳು ▶ 5ನೇ ಪುಟಕ್ಕೆ

ಮೈಸೂರಲ್ಲಿ ವಿದ್ಯುತ್ ಕಂಬಗಳಲ್ಲಿ ಭಾರೀ ಪ್ರಮಾಣದಲ್ಲಿ ಜೋತು ಬಿದ್ದಿದ್ದ ಕೇಬಲ್‌ಗಳಿಗೆ ಸರ್ಜರಿ



- ನಿಯಮಾನುಸಾರ ಶುಲ್ಕ ಪಾವತಿ ಕಡ್ಡಾಯ
- ಮತ್ತೆ ಅಕ್ರಮವಾಗಿ ಅಳವಡಿಸಿದರೆ ಕ್ರಿಮಿನಲ್ ಕೇಸ್
- ಕೇಬಲ್ ಅಳವಡಿಕೆಗೆ ಶುಲ್ಕ ವಸೂಲಿ ಮೂಲಕ ಆದಾಯ ಕ್ರೋಢೀಕರಣ; ವರ್ಷಕ್ಕೆ ಸೆಸ್ಕ್ ಖಜಾನೆ ತುಂಬಲಿದೆ 50 ಕೋಟಿ ಆದಾಯ

● ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಜೂ.10– ನಿಯಮಾನುಸಾರ ನಿಗದಿತ ಶುಲ್ಕ ಪಾವತಿಸದೆ ವಿದ್ಯುತ್ ಕಂಬಗಳಲ್ಲಿ ಅಳವಡಿಸಿರುವ ಕೇಬಲ್ ವೈರ್‌ಗಳನ್ನು ತೆರವುಗೊಳಿಸುವ ಕಾರ್ಯಾಚರಣೆಯನ್ನು ಚೆಸ್ಕಾಂ ಆರಂಭಿಸಿದೆ. ಮೈಸೂರಿನ ಹೃದಯಭಾಗ ಸೇರಿದಂತೆ ವಿವಿಧ ಬಡಾವಣೆಗಳಲ್ಲಿ ಅಕ್ರಮವಾಗಿ ಅಳವಡಿಸಿದ್ದ ಕೇಬಲ್ ವೈರ್‌ಗಳನ್ನು ಶುಕ್ರವಾರ ತುಂಡರಿಸುವ ಮೂಲಕ ಕೆಲ ಇಂಟರ್‌ನೆಟ್ ಹಾಗೂ ಕೇಬಲ್ ನೆಟ್‌ವರ್ಕ್‌ದಾರರಿಗೆ ಬಿಸಿ ಮುಟ್ಟಿಸಿದ್ದಾರೆ.

ಇತ್ತೀಚೆಗಷ್ಟೇ ಟ್ರಾನ್ಸ್‌ಫಾರ್ಮರ್‌ಗಳ ತ್ವರಿತ ದುರಸ್ತಿ ಹಾಗೂ ನಿರ್ವಹಣಾ ಅಭಿಯಾನದ ಮೂಲಕ ಸೇವೆ ಸುಧಾರಣೆಗೆ ಪ್ರಯತ್ನಿಸಿದ್ದ ಸೆಸ್ಕ್, ಇದೀಗ ಕಂಬಗಳಲ್ಲಿ ಯದ್ವಾತದ್ವಾ ಕೇಬಲ್ ಅಳವಡಿಸಿರುವ ಕೇಬಲ್ ತೆರವುಗೊಳಿಸುವ ಮೂಲಕ ವಿದ್ಯುತ್ ಪೂರೈಕೆಗೆ ಅಡ್ಡಿಯಾಗದಂತೆ, ಅನಾಹುತಗಳು ಸಂಭವಿಸದಂತೆ ನಿಗಾ ವಹಿಸಿದ್ದಾರೆ. ಜೊತೆಗೆ ಪೂರ್ವಾನುಮತಿಯೊಂದಿಗೆ ವ್ಯವಸ್ಥಿತ ಕೇಬಲ್ ಅಳವಡಿಸಲು ಎಚ್ಚರಿಕೆಯನ್ನೂ ನೀಡಿದ್ದಾರೆ. ನಿಯಮಾನುಸಾರ ಶುಲ್ಕ ಪಾವತಿಸಿದರೆ ಸೆಸ್ಕ್ ಆದಾಯ ಕ್ರೋಢೀಕರಣವೂ ಹೆಚ್ಚಾಗಲಿದೆ.

ಸೆಸ್ಕ್ ವ್ಯಾಪ್ತಿಗೆ ಒಳಪಡುವ ಮೈಸೂರು, ಮಂಡ್ಯ, ಚಾಮರಾಜನಗರ ಸೇರಿದಂತೆ ಇನ್ನಿತರೆಡೆ ವಿದ್ಯುತ್ ಕಂಬದಲ್ಲಿ ಅಳವಡಿಸಿದ್ದ ಕೇಬಲ್ ವೈರ್‌ಗಳಿಗೆ ಕತ್ತರಿ ಪ್ರಯೋಗಿಸುವ ಮೂಲಕ ಬಿಸಿ ಮುಟ್ಟಿಸಲಾಗುತ್ತಿದೆ. ಕಾರ್ಯಾಚರಣೆಯ ಮೊದಲ ದಿನವಾದ ಗುರುವಾರ ಮಂಡ್ಯ ಜಿಲ್ಲೆಯ ಕೆಲವೆಡೆ ಕೇಬಲ್ ವೈರ್‌ಗಳಿಗೆ ಕತ್ತರಿಸಿದ್ದ ಸೆಸ್ಕ್ ತಂಡ ಇಂದು ಬೆಳಗ್ಗೆ ಮೈಸೂರಿನ ಹೃದಯಭಾಗದಲ್ಲಿ ಕಾರ್ಯಾಚರಣೆ ಮುಂದುವರೆಸಿತು. ಮೈಸೂರಿನ ಪ್ರಮುಖ ಡಿ.ದೇವರಾಜ ಅರಸ್ ರಸ್ತೆ, ಶಿವರಾಮ್‌ಪೇಟೆ, ▶ 6ನೇ ಪುಟಕ್ಕೆ

ಮತ್ತೆ ಅಳವಡಿಸಿದರೆ "ಕ್ರಿಮಿನಲ್ ಕೇಸ್"

ನಿಯಮಾನುಸಾರ ಸೆಸ್ಕ್‌ಗೆ ಶುಲ್ಕ ಪಾವತಿಸಿ ಅಳವಡಿಸಿರುವ ಕೇಬಲ್‌ಗಳನ್ನು ಮಾತ್ರ ಹಾಗೆಯೇ ಬಿಡಲಾಗುವುದು. ಯಾವ ಸಂಸ್ಥೆ ಅಥವಾ ಕೇಬಲ್‌ದಾರರು ಶುಲ್ಕ ಪಾವತಿಸಿಲ್ಲವೋ ಅಂತಹ ಕೇಬಲ್‌ಗಳನ್ನು ತೆರವು ಮಾಡುತ್ತಿದ್ದೇವೆ. ಈಗ ತೆರವು ಮಾಡಿರುವ ಕಂಬಗಳಲ್ಲಿ ನಿಯಮಬಾಹಿರವಾಗಿ ಮತ್ತೆ ಕೇಬಲ್ ಅಳವಡಿಸಿದರೆ ಅಂತಹವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು. ಕಾರ್ಯಾಚರಣೆ ಪರಿಣಾಮ ನೆಟ್‌ವರ್ಕ್ ಸಂಸ್ಥೆಯೊಂದು ವಲಯವಾರು ಶುಲ್ಕ ಪಾವತಿಸಲು ಮುಂದೆ ಬಂದಿದೆ. ಅದೇ ರೀತಿ ಎಲ್ಲಾ ಕೇಬಲ್ ನೆಟ್‌ವರ್ಕ್‌ದಾರರು ಶುಲ್ಕ ಪಾವತಿಸಬೇಕು.

–ಜಯವಿಭವಸ್ವಾಮಿ, ಚೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ

ನಕ್ಕರೆ ಅದೇ ಸ್ವರ್ಗ

ಅಮ್ಮ : (ಹಾಸ್ಟೆಲ್‌ನಲ್ಲಿದ್ದ ಮಗನಿಗೆ ಫೋನ್ ಮಾಡಿ) "ಏನೋ ಮಾಡ್ತಿದ್ದೀಯಾ?"
ಮಗ : "ಓದ್ತಾ ಇದ್ನಮ್ಮ"
ಅಮ್ಮ : ವೆರಿಗುಡ್. ಏನು ಓದ್ತಾ ಇದ್ದೆ?"
ಮಗ : ನಿನ್ನ ಭಾವಿ ಸೊಸೆ ಮೆಸೇಜ್!"

ಮೈಸೂರು ಮಿತ್ರ

ಶನಿವಾರ, 11 ಜೂನ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ


ಮನಸ್ಸು ಮತ್ತು ಭಾವನೆಗಳು ಶುದ್ಧವಾಗಿದ್ದರೆ ಮನುಷ್ಯನಿಗೆ ರೋಗ ರುಜಿನಗಳ ಬಾಧೆ ಇರುವುದಿಲ್ಲ. –ಸ್ವಾಮಿ ಶಿವಾನಂದರು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಕಮಟ ಕೊಬ್ಬರಿಗೂ ಚಿಗುಟು ಬೆಲ್ಲಕ್ಕೂ ನಂಟು

ನಿಮ್ಮ ಪತ್ರಗಳು

ಬೋಗಾದಿಯ ಖಾಲಿ ಜಾಗ ಸ್ವಚ್ಛಗೊಳಿಸಿ



ಮಾನ್ಯರೇ,

ಮೈಸೂರು ನಗರದ ಬೋಗಾದಿ 2ನೇ ಹಂತದಲ್ಲಿ (ಶ್ರೀದೇವಿ ನರ್ಸಿಂಗ್ ಹೋಂ ರಸ್ತೆ) ಇತ್ತೀಚೆಗೆ ಮಳೆ ಸುರಿದ ಪರಿಣಾಮ ಖಾಲಿ ನಿವೇಶನದಲ್ಲಿ ಗಿಡ–ಗಂಟೆಗಳು ಬೃಹದಾಕಾರವಾಗಿ ಬೆಳೆದು ನಿಂತಿವೆ. ಇಲ್ಲಿ ಸುತ್ತ ಮುತ್ತಲು ಸಾಕಷ್ಟು ಮನೆಗಳಿದ್ದು, ಚಿಕ್ಕ ಮಕ್ಕಳು, ವಯೋವೃದ್ಧರು ಓಡಾಡುತ್ತಿರುತ್ತಾರೆ. ಬೆಳೆದು ನಿಂತಿರುವ ಗಿಡ–ಗಂಟೆಗಳ ಮಧ್ಯೆ ವಿಷಕಾರಿ ಹಾವುಗಳು ಸೇರುವುದು ಸಹಜ. ಆದುದರಿಂದ ಇಲ್ಲಿನ ಮಹಾನಗರಪಾಲಿಕೆ ಸದಸ್ಯರು ಆದಷ್ಟು ಬೇಗ ಈ ನಿವೇಶನವನ್ನು ಜೆ.ಸಿ.ಬಿ.ಯಿಂದ ಸ್ವಚ್ಛಗೊಳಿಸಿ ಸಾರ್ವಜನಿಕರು ನಿರಾಳವಾಗಿ ಓಡಾಡುವಂತೆ ಅನುವು ಮಾಡಿ ಕೊಡಬೇಕೆಂದು ವಿನಂತಿ.

– ಸುಬ್ಬರಾಜ ಪ್ರಸಾದ್, ಬೋಗಾದಿ 2ನೇ ಹಂತ, ಮೈಸೂರು

ಸರ್ಕಾರಿ ನೌಕರರಿಗೆ ಸಹನೆ ಬೇಕು

ಮಾನ್ಯರೆ,

ಪ್ರತಿದಿನ ನೂರಾರು ಸಂಖ್ಯೆಯಲ್ಲಿ ಸಾರ್ವಜನಿಕರು ತಾಲೂಕು ಕಚೇರಿ, ಬ್ಯಾಂಕ್, ಆಸ್ಪತ್ರೆ ಇತರೆ ಸರ್ಕಾರಿ ಇಲಾಖೆಗಳಿಗೆ ವಿವಿಧ ಸೇವೆ ಪಡೆಯಲು ಬರುತ್ತಾರೆ. ಇದರಲ್ಲಿ ಗ್ರಾಮೀಣ ಪ್ರದೇಶದ ಹಿರಿಯ ನಾಗರಿಕರು, ಅನಕ್ಷರಸ್ಥರು ಬರುತ್ತಾರೆ. ಅವರಿಗೆ ಯಾವ ರೀತಿ ಸೇವೆಯನ್ನು ಪಡೆಯಬೇಕು ಎಂಬ ಮಾಹಿತಿ, ಜ್ಞಾನ ಇರುವುದಿಲ್ಲ. ಅಂತವರು ಸೇವೆಯನ್ನು ಪಡೆಯುವಾಗ ಏನಾದರೂ ತಪ್ಪುಗಳನ್ನು ಮಾಡುವುದು ಸಹಜ. ತಮಗೆ ತಿಳಿಯದ ಪ್ರಕ್ರಿಯೆಯನ್ನು, ತೊಂದರೆಯನ್ನು ಯಾರಾದರೂ ನೌಕರರ ಬಳಿ ಕೇಳುವುದುಂಟು. ಈ ಸಂದರ್ಭದಲ್ಲಿ ನೌಕರರು ತಮ್ಮ ಕೆಲಸದ ಒತ್ತಡದಲ್ಲಿ ಅಂತವರ ಮೇಲೆ ಕೋಪಗೊಂಡು ರೇಗುವುದು, ಸರಿಯಾಗಿ ಪ್ರತಿಕ್ರಿಯೆ ನೀಡದಿರುವುದು ಮಾಡುತ್ತಿರುತ್ತಾರೆ. ಸರ್ಕಾರಿ ನೌಕರರ ಈ ವರ್ತನೆಯಿಂದ ಸೇವೆ ಪಡೆಯಲು ಬಂದ ಸಾರ್ವಜನಿಕರಿಗೆ ಅದರಲ್ಲೂ ಗ್ರಾಮೀಣ ಭಾಗದ ನಾಗರಿಕರು ಮತ್ತು ಅನಕ್ಷರಸ್ಥರು ಹೆಚ್ಚು ತೊಂದರೆಗೆ ಒಳಗಾಗುತ್ತಾರೆ. ಸರ್ಕಾರಿ ನೌಕರರು ಸಾರ್ವಜನಿಕರ ಬಳಿ ತಾಳ್ಮೆ ಮತ್ತು ಸಹನೆ, ಶಾಂತಿಯಿಂದ ವರ್ತಿಸಿ ಸೇವಾ ಮನೋಭಾವ ತೋರಬೇಕು.

–ಚನ್ನಕೇಶವ ಜಿ, ಕೆ. ತರೀಕೆರೆ

ಸಂಚಾರಿ ಪೊಲೀಸರ ಗಮನಕ್ಕೆ

ಮಾನ್ಯರೆ,

ಇತ್ತೀಚೆಗೆ ಹೆಚ್ಚಾಗಿ ಕಾರ್ಮಿಕ ವರ್ಗದವರು, ವಿದ್ಯಾರ್ಥಿಗಳು, ಹಿರಿಯ ನಾಗರಿಕರು, ಗಾರ್ಮೆಂಟ್ಸ್ ಮಹಿಳೆಯರು, ಇಲವಾಲದ ಮತ್ತು ಮೈಸೂರು ಭಾಗದಲ್ಲಿ ಸಂಚರಿಸುವ ವ್ಯಾನ್‌ಗಳನ್ನು ಅವಲಂಬಿತರಾಗಿದ್ದಾರೆ. ಈ ವ್ಯಾನ್‌ಗಳ ಚಾಲಕರು ಜನರನ್ನು ಕುರಿಗಳಂತೆ ಮಿತಿ ಮೀರಿ ತುಂಬಿಕೊಂಡು ಸಂಚಾರಿ ನಿಯಮಗಳನ್ನು ಪಾಲಿಸದೇ ಜನರ ಜೀವದ ಜೊತೆ ಚೆಲ್ಲಾಟವಾಡುತ್ತಿದ್ದಾರೆ. ಈ ಯಮ ಸ್ವರೂಪಿ ವಾಹನಗಳ ಚಾಲಕರ ಬಳಿ ಚಾಲನಾ ತರಬೇತಿ ಪತ್ರ, ವಾಹನದ ವಿಮೆ ಇದೆಯೇ ಇಲ್ಲವೋ ಎನ್ನುವುದನ್ನು ಸಂಚಾರಿ ಪೊಲೀಸರು ಪರಿಶೀಲಿಸಬೇಕಾಗಿದೆ.

– ನೊಂದ ಪ್ರಯಾಣಿಕರು, ಮೈಸೂರು.

ಎಲ್ಲದಕ್ಕೂ ಸಾವೇ ಪರಿಹಾರವಾದರೇ, ಬದುಕಿಗೇನು ಅರ್ಥ?

ಮಾನ್ಯರೆ,

ಇಡೀ ಪ್ರಾಣಿ ಸಂಕುಲದಲ್ಲೇ ಮಾನವ ಜನ್ಮ ದೊಡ್ಡದು. ತನ್ನ ಯೋಚನಾ ಲಹರಿಯಿಂದ ಮಾನವ ಇತರೇ ಜೀವಿಗಳಿಗಿಂತ ವಿಭಿನ್ನ ಎನ್ನುವುದು ಎಲ್ಲರೂ ಒಪ್ಪುವಂತಹದ್ದೆ. ಆದರೆ ಇತ್ತೀಚಿನ ದಿನಗಳಲ್ಲಿ ಮಾನವರಾದ ನಾವುಗಳು ಸಣ್ಣ ಸಣ್ಣ ಸಮಸ್ಯೆಗಳಿಗೂ ಆತ್ಮಹತ್ಯೆಯತ್ತ ಮುಖ ಮಾಡುತ್ತಿರುವುದು ಹೇಡಿತನದ ಪರಮಾವಧಿ ಎಂದರೆ ತಪ್ಪಾಗಲಾರದು. ತಾನು ಪ್ರೀತಿಸಿದ ಹುಡುಗ/ಹುಡುಗಿ ಕೈಕೊಟ್ಟರು ಎಂಬ ಸಣ್ಣ ಕಾರಣಕ್ಕೆ ಮತ್ತು ಬಡತನ, ನಿರುದ್ಯೋಗ, ಮಾನಸಿಕ ಕಿರುಕುಳ, ಲೈಂಗಿಕ ಕಿರುಕುಳ, ಹಿರಿಯ ಅಧಿಕಾರಿಗಳ ಕಿರುಕುಳದಿಂದ ಮನನೊಂದು ಆತ್ಮಹತ್ಯೆಯತ್ತ ಮುಖ ಮಾಡುತ್ತಿರುವವರು ಕೂಡ ಕಮ್ಮಿಯೇನಿಲ್ಲ. ಅದರಲ್ಲೂ ರೈತ ತಾನು ಬೆಳೆದ ಬೆಳೆಗೆ ಸರಿಯಾದ ಬೆಲೆ ಹಾಗೂ ಮಾರುಕಟ್ಟೆ ಸಿಗುತ್ತಿಲ್ಲ ಎಂದು ಮಾನಸಿಕವಾಗಿ ನೊಂದು ಬೆಂದು ಆತ್ಮಹತ್ಯೆಗೆ ಶರಣಾಗುತ್ತಿರುವ ಪ್ರಕರಣಗಳು ದಿನೇ ದಿನೆ ಹೆಚ್ಚಾಗುತ್ತಿರುವುದು ಕಳವಳಕಾರಿಯಾದ ಸಂಗತಿಯಾಗಿದೆ.

ಇಷ್ಟಕ್ಕೂ ಪ್ರತಿಯೊಬ್ಬ ಮನುಷ್ಯನ ಜೀವನದಲ್ಲಿ ಕಷ್ಟಗಳು ಯಾರಿಗೂ ಎಂದಿಗೂ ತಪ್ಪಿದ್ದಲ್ಲ. ಕಷ್ಟಗಳು ಬಂದಾಗ ಅದಕ್ಕೆ ಬೆನ್ನು ತಿರುಗಿಸದೇ ಧೈರ್ಯದಿಂದ ಎದುರಿಸುವುದು ಜಾಣತನ. ಆತ್ಮಹತ್ಯೆಯೇ ಎಲ್ಲದಕ್ಕೂ ಪರಿಹಾರವಲ್ಲ. ತನ್ನ ಸಾವಿನೊಂದಿಗೆ ತನ್ನೆಲ್ಲಾ ಸಮಸ್ಯೆಗಳು ಪರಿಹಾರವಾಗಿ ಬಿಡುತ್ತವೆ ಎಂಬ ಭ್ರಮೆ ಕೆಲವರಲ್ಲಿದೆ. ಇದು ಖಂಡಿತ ತಪ್ಪು ಭಾವನೆ. ಪ್ರತಿಯೊಬ್ಬ ವ್ಯಕ್ತಿಗೂ ಬದುಕುವ ಹಕ್ಕಿದೆ. ತನ್ನನ್ನು ನಂಬಿಕೊಂಡು ಆಶ್ರಯಿಸಿಕೊಂಡು ಇತರರು ಬದುಕುತ್ತಿರುತ್ತಾರೆ. ಅವರ ಬಗ್ಗೆಯು ಯೋಚಿಸಬೇಕಲ್ಲವೇ? ಸಾವೇ ಎಲ್ಲದಕ್ಕೂ ಪರಿಹಾರವಾದರೆ ಬದುಕಿಗೇನು ಅರ್ಥವಿದೆ?

ಇಷ್ಟಕ್ಕೂ ಯಾವುದೋ ಒಂದು ಕ್ಷಣದಲ್ಲಿ ಉಂಟಾಗುವ ಆತುರದ ನಿರ್ಧಾರದಿಂದ ನಾವೆಲ್ಲರೂ ಹಿಂದೆ ಸರಿದದ್ದೇ ಆದರೆ ಅನಂತರದ ಧೈರ್ಯದ ಬದುಕು ಹಸನಾಗುವುದರಲ್ಲಿ ಅನುಮಾನವಿಲ್ಲ. ಹೀಗಾಗಿ ನಮ್ಮ ಬದುಕು ನಮ್ಮ ಕೈಯಲ್ಲಿದೆ. ಬದುಕನ್ನು ಪ್ರೀತಿಸೋಣ. ಪ್ರೀತಿಸುತ್ತಲೇ ಬೆಳೆಯೋಣ. ಆತ್ಮಹತ್ಯೆ ಮಾಡಿಕೊಳ್ಳುವುದು ಸುಲಭ. ಆದರೆ ಅನಂತರದ ದಿನಗಳಲ್ಲಿ ನಮ್ಮನ್ನು ನಂಬಿದವರ ಬದುಕು ಅಷ್ಟೇ ಕಠಿಣವಾಗುವುದರಲ್ಲಿ ಅನುಮಾನವಿಲ್ಲ. ಈ ಸತ್ಯವನ್ನರಿತು ಜೀವನದಲ್ಲಿ ಎಷ್ಟೇ ಕಷ್ಟ ಸಂದರ್ಭಗಳು ಬಂದರೂ ಅಂಜದೆ ಅಳುಕದೆ ಬದುಕನ್ನು ಪ್ರೀತಿಸುತ್ತಾ, ಛಲದ ಮನೋಭಾವನೆಯಿಂದ ಕೂಡಿದ ಧೈರ್ಯದ ಬದುಕನ್ನು ಪ್ರತಿಯೊಬ್ಬರೂ ಕಟ್ಟಿಕೊಳ್ಳುವುದು ಅವಶ್ಯಕ ಹಾಗೂ ಅನಿವಾರ್ಯ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.



ಕಾರ್ಕಳ ಆನಂದಭಟ್
ಮೊ.7676554198

ದಿಕ್ಕುದೆಸೆ

ಉಚಿತ ಯೋಜನೆಗಳ ಆಮಿಷ; ಆರ್ಥಿಕತೆಗೆ ಅಪಾಯ

> 2019ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ರಾಹುಲ್ ಗಾಂಧಿಯವರು 'ನ್ಯಾಯ್' ಹೆಸರಿನ ಯೋಜನೆ ಪ್ರಕಟಿಸಿದರು. ಈ ಯೋಜನೆಯಂತೆ ಕಾಂಗ್ರೆಸ್ ಅಧಿಕಾರಕ್ಕೆ ಬಂದಲ್ಲಿ ದೇಶದ ಐದು ಕೋಟಿ ಕುಟುಂಬಗಳಿಗೆ ವಾರ್ಷಿಕ ತಲಾ ರೂ. 72,000/- ನೀಡುವ ಘೋಷಣೆ ಮಾಡಿದರು. ಈ ಯೋಜನೆ ಅನುಷ್ಠಾನ ಗೊಂಡಲ್ಲಿ ಸರಕಾರವು ಪ್ರತಿ ವರ್ಷ ರೂ. 3.60 ಲಕ್ಷ ಕೋಟಿ ಅನುತ್ಪಾದಕ ಉದ್ದೇಶಕ್ಕೆ ವ್ಯಯಿಸಬೇಕಾಗುತ್ತಿತ್ತು. ಈ ಯೋಜನೆಯಿಂದ ದೇಶದಲ್ಲಿ ಸೋಮಾರಿತನ ವೃದ್ಧಿಯಾಗಿ ನಿರುದ್ಯೋಗ ಹೆಚ್ಚುತ್ತಿತ್ತು. ಅವಶ್ಯಕ ವಸ್ತುಗಳ ಉತ್ಪಾದನೆ ಕುಸಿದು ಬೆಲೆ ಏರಿಕೆಯಾಗುತ್ತಿತ್ತು. ಹಣದುಬ್ಬರ ಭಾರೀ ಪ್ರಮಾಣದಲ್ಲಿ ಏರಿಕೆಯಾಗಿ ದೇಶದಲ್ಲಿ ಶ್ರೀಲಂಕಾದಂತಹ ಅರಾಜಕ ಪರಿಸ್ಥಿತಿ ನಿರ್ಮಾಣವಾಗುತ್ತಿತ್ತು.

ತಮಿಳ್ನಾಡಿನ ಮುಖ್ಯಮಂತ್ರಿಯಾಗಿದ್ದ ದಿ. ಜಯಲಲಿತಾರವರು ದೇಶದಲ್ಲಿ ಪ್ರಥಮ ಬಾರಿಗೆ ಮತದಾರರಿಗೆ ಸರಕಾರದ ಬೊಕ್ಕಸದಿಂದ ವಾಷಿಂಗ್ ಮೆಷಿನ್, ಟಿವಿ ಸೆಟ್ ಮೊದಲಾವುಗಳನ್ನು ಉಚಿತವಾಗಿ ನೀಡುವ ಆಮಿಷ ಒಡ್ಡಿ ಯಶಸ್ವಿಯಾದರು. ಭವಿಷ್ಯದಲ್ಲಿ ದೇಶದಲ್ಲಿ ಸರಕಾರ ರಚಿಸುವಲ್ಲಿ ಈ ರೀತಿಯ ಮುಕ್ತ ಯೋಜನೆಗಳು ನಿರ್ಣಾಯಕವಾಗಬಹುದೆಂದು ಪ್ರಾಯಶಃ ದಿ. ಜಯಲಲಿತಾ ಅಂದು ಭಾವಿಸಿರಲಿಕ್ಕಿಲ್ಲ. ಅದುವರೆಗೆ ರಾಜಕೀಯ ಪಕ್ಷಗಳು, ಅಭ್ಯರ್ಥಿಗಳು ಮತದಾರರಿಗೆ ಹಣ, ಮದ್ಯ, ಸೀರೆ ಹಂಚುತ್ತಿದ್ದುದು ಸಾರ್ವಜನಿಕ ರಹಸ್ಯವಾಗಿತ್ತು. ಇತ್ತೀಚಿನ ವರ್ಷಗಳಲ್ಲಿ ರಾಜಕೀಯ ಪಕ್ಷಗಳು ಚುನಾವಣಾ ಪ್ರಣಾಳಿಕೆಗಳಲ್ಲಿ ಮುಕ್ತ ನೀಡುವ ಯೋಜನೆಗಳನ್ನು ಪ್ರಕಟಿಸುವಲ್ಲಿ ಪರಸ್ಪರ ಸ್ಪರ್ಧೆಗಿಳಿದಿವೆ.

2015ರಲ್ಲಿ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಆಮ್ ಆದ್ಮಿ ಪಾರ್ಟಿಯು (AAP) ಮತದಾರರಿಗೆ ಉಚಿತವಾಗಿ ನೀರು, ವಿದ್ಯುತ್, ಬಸ್ ಪ್ರಯಾಣದ ಆಮಿಷ ತೋರಿ ಭರ್ಜರಿ ಜಯಗಳಿಸಿತು. ಈ ವರ್ಷ ಪಂಜಾಬ್‌ನಲ್ಲೂ AAPಗೆ ಮುಕ್ತ ನೀಡುವ ಯೋಜನೆಗಳು ಅಧಿಕಾರ ನೀಡಿದೆ. 2019ರ ಸಾರ್ವತ್ರಿಕ ಚುನಾವಣೆಯಲ್ಲಿ ಕೇರಳದ ಎಡರಂಗವು ಭಾರೀ ಸೋಲನುಭವಿಸಿತು. ಎರಡು ವರ್ಷದ ನಂತರ ಕೇರಳ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಎಡರಂಗವು ಉಚಿತ ಆಹಾರದ ಕಿಟ್, ಅಕ್ಕಿ ನೀಡುವ ಆಮಿಷ ಒಡ್ಡಿ ಭರ್ಜರಿ ಜಯಗಳಿಸಿ ಮತ್ತೆ ಅಧಿಕಾರಕ್ಕೇರಿತು.

ಇತ್ತೀಚೆಗೆ ಮುಕ್ತಾಯಗೊಂಡ ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ AAPಯು 300 ಯೂನಿಟ್‌ವರೆಗೆ ಉಚಿತ ವಿದ್ಯುತ್, 18 ವರ್ಷವಾದ ಪ್ರತಿ ಮಹಿಳೆಗೆ ಮಾಸಿಕ ರೂ. 1000 ನೀಡುವುದಾಗಿ ತಿಳಿಸಿತ್ತು. ಚುನಾವಣಾ ಆಶ್ವಾಸನೆ ಪೂರೈಸಲು ಸಬ್ಸಿಡಿ ಬಿಲ್ ಮತ್ತೆ ರೂ. 5000 ಕೋಟಿ ಏರಿಕೆಯಾಗಲಿದೆ. ಮಹಿಳೆಯರಿಗೆ ನೀಡುವ ಹಣದ ಪ್ರಮಾಣ ಸರಕಾರದ ಬೊಕ್ಕಸಕ್ಕೆ ಪ್ರತಿ ವರ್ಷ ರೂ. 15,600 ಕೋಟಿ ಹೆಚ್ಚುವರಿ ಹೊರೆಯಾಗಲಿದೆ. ಪಂಜಾಬ್ ಸರಕಾರ ಈಗಾಗಲೇ 2.82 ಲಕ್ಷ ಕೋಟಿ ಸಾಲದಲ್ಲಿದೆ.

ಭಗವಂತ ಮಾನ್ ಮುಖ್ಯಮಂತ್ರಿಯಾಗುತ್ತಿದ್ದಂತೆ ಪ್ರಧಾನಿಯವರನ್ನು ಭೇಟಿಯಾಗಿ ರಾಜ್ಯದ ಆರ್ಥಿಕತೆ ಸುಧಾರಿಸಲು ರೂ. 50 ಸಾವಿರ ಕೋಟಿಯ ವಿಶೇಷ ಆರ್ಥಿಕ ಪ್ಯಾಕೇಜ್‌ನ ಬೇಡಿಕೆ ಇರಿಸಿದರು. ಈ ರೀತಿ ಪ್ಯಾಕೇಜ್ ನೀಡಿದಲ್ಲಿ ಅದು ಉಚಿತ ಯೋಜನೆಗಳಿಗೆ ವ್ಯಯವಾಗಿ ಈಗಾಗಲೇ ಹದಗೆಟ್ಟಿರುವ ರಾಜ್ಯದ ಆರ್ಥಿಕತೆ ಸಂಪೂರ್ಣ ನಾಶವಾಗುವುದನ್ನು ಗ್ರಹಿಸಿ ಪ್ರಧಾನಿ ಮೋದಿ, ಮಾನ್ ಬೇಡಿಕೆಗೆ ಸ್ಪಂದಿಸಲಿಲ್ಲ.

ಕರ್ನಾಟಕದ ಪರಿಸ್ಥಿತಿಯು ದಿಲ್ಲಿ, ಪಂಜಾಬ್‌ಗಿಂತ ಭಿನ್ನವಾಗಿಲ್ಲ. ಕರ್ನಾಟಕದಲ್ಲಿ ಹಿಂದೆ ಮುಖ್ಯಮಂತ್ರಿಗಳಾಗಿದ್ದವರಲ್ಲಿ ಎಸ್.ಎಂ. ಕೃಷ್ಣ ಮಾಡಿದ ಸಾಲ ರೂ. 3590 ಕೋಟಿಯಾಗಿತ್ತು. ಧರಂಸಿಂಗ್ ರೂ. 15635 ಕೋಟಿ, ಹೆಚ್.ಡಿ. ಕುಮಾರಸ್ವಾಮಿ, ರೂ. 3545 ಕೋಟಿ, ಬಿ.ಎಸ್.ಯಡಿಯೂರಪ್ಪ ರೂ. 25653, ಸದಾನಂದಗೌಡ ರೂ. 9464 ಕೋಟಿ, ಜಗದೀಶ್ ಶೆಟ್ಟರ್ ಮಾಡಿದ ಸಾಲ ರೂ. 13464 ಕೋಟಿಯಾಗಿತ್ತು. ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾಗ ರಾಜ್ಯದಲ್ಲಿ ಮೂಲ ಸೌಕರ್ಯಗಳ ಅಭಿವೃದ್ಧಿಯಾಗಲೀ, ಉದ್ಯೋಗ ಸೃಷ್ಟಿಯಾಗಲೀ, ಬೃಹತ್ ಕೈಗಾರಿಕೆ, ಉದ್ದಿಮೆಗಳ ಸ್ಥಾಪನೆ ಗಮನಾರ್ಹ ಪ್ರಮಾಣದಲ್ಲಿ ಆಗಲಿಲ್ಲ. ಆದರೆ ಸಿದ್ದರಾಮಯ್ಯನವರು ಹಿಂದಿನ ಎಲ್ಲ ಮುಖ್ಯಮಂತ್ರಿಗಳು ಮಾಡಿದ ಸಾಲಕ್ಕಿಂತ ಮೂರು ಪಟ್ಟು ಹೆಚ್ಚು ರೂ. 2.42 ಲಕ್ಷ ಕೋಟಿ ಸಾಲವನ್ನು ಮಾಡಿದರು. ಪ್ರಾಯಶಃ ಅವರು ಪ್ರಾರಂಭಿಸಿದ ಬಿಟ್ಟಿ ಭಾಗ್ಯಗಳಿಗೆ, ಇನ್ನಿತರ ಜನಪ್ರಿಯ ಯೋಜನೆಗಳಿಗೆ ಬಹುಪಾಲು ಖರ್ಚು ಮಾಡಿರಬೇಕು. ರಾಜಕೀಯ ಪಕ್ಷಗಳು ಅಧಿಕಾರಕ್ಕಾಗಿ ಮತದಾರರನ್ನು ಭ್ರಷ್ಟಗೊಳಿಸುವ ಯೋಜನೆಗಳನ್ನು ರೂಪಿಸುತ್ತಿರುವುದು ದೇಶದ ಹಿತದೃಷ್ಟಿಯಿಂದ ಅಪಾಯಕಾರಿ ಬೆಳವಣಿಗೆಯಾಗಿದೆ. ಕೇಂದ್ರ–ರಾಜ್ಯ ಸರಕಾರಗಳು ಪ್ರತಿ ವರ್ಷ ಬಜೆಟ್ ಸಿದ್ಧಪಡಿಸಿ ಅಭಿವೃದ್ಧಿ ಯೋಜನೆಗಳಿಗಾಗಿ ಸಂಪನ್ಮೂಲ ಕ್ರೋಢಿಕರಿಸುತ್ತವೆ. ಆದರೆ ಈ ಸಂಪನ್ಮೂಲಗಳು ಜನಪ್ರಿಯ ಉಚಿತ ಯೋಜನೆಗಳಿಗೆ ಖರ್ಚಾದಲ್ಲಿ ಅಭಿವೃದ್ಧಿ ಯೋಜನೆಗಳು ಸ್ಥಗಿತವಾಗುತ್ತವೆ. ಇದರಿಂದ ಆರ್ಥಿಕ ಬೆಳವಣಿಗೆಯಾಗದೇ, ಜನರ ಜೀವನ ಮಟ್ಟ ಸುಧಾರಿಸದೆ ಸಮಾಜದಲ್ಲಿ ಅಶಾಂತಿಯ ವಾತಾವರಣ ಮೂಡುವ ಸಾಧ್ಯತೆ ಹೆಚ್ಚಾಗಲಿದೆ. ಉಚಿತ ಯೋಜನೆಗಳ ಪರಿಣಾಮ ವಿನಾಶಕಾರಿಯಾಗುತ್ತದೆ. ಹರಿಯಾಣ, ಪಂಜಾಬ್ ಸರಕಾರಗಳು ರೈತರಿಗೆ ನೀಡಿದ ಉಚಿತ ವಿದ್ಯುತ್‌ನಿಂದಾಗಿ ರೈತರು ನೀರನ್ನು ಭಾರೀ ಪ್ರಮಾಣದಲ್ಲಿ ಪೋಲು ಮಾಡುತ್ತಿದ್ದರು. ಇದರ ಪರಿಣಾಮ ಈ ರಾಜ್ಯಗಳಲ್ಲಿ ಅಂತರ್ಜಲ ಪಾತಾಳಕ್ಕಿಳಿದಿದೆ.

ಉಚಿತ ಯೋಜನೆಗಳು ಕಲ್ಯಾಣ ರಾಜ್ಯದ (welfare state) ತತ್ವಕ್ಕೆ ವಿರುದ್ಧವಾಗಿದೆ. ವಾಸ್ತವವಾಗಿ ಅಭಿವೃದ್ಧಿ ಯೋಜನೆಗಳು ಕಡುಬಡವರಿಗೆ ಮೂಲಭೂತ ಅವಶ್ಯಕತೆಗಳ ಪೂರೈಕೆಗೆ ಮಾತ್ರ ಸೀಮಿತವಾಗಿರಬೇಕು. ಆದರೆ ಉದ್ಯಮವಾಗಿರುವ ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷಗಳು ಸಂವಿಧಾನದ ಮೂಲ ಕಲ್ಪನೆಗಳನ್ನೇ ನಾಶಪಡಿಸುತ್ತಿವೆ. AAP ಮಹಿಳೆಯರಿಗೆ ನೀಡಿರುವ ಕೆಲವು ಉಚಿತಗಳು ಮಹಿಳಾ ಮತದಾರರನ್ನು ಭ್ರಷ್ಟಗೊಳಿಸಿದಂತಾಗುವುದು. ಅದೇ ರೀತಿ ಆರ್ಥಿಕವಾಗಿ ದುರ್ಬಲವಾಗಿರುವ ಹಾಗೂ ಬಸ್‌ನಲ್ಲೇ ಪಯಣಿಸಬೇಕಾದ ಅನಿವಾರ್ಯತೆ ಇರುವ ಪುರುಷ ವರ್ಗಕ್ಕೆ ಈ ಸೌಲಭ್ಯ ನೀಡದಿರುವುದು ಸಂವಿಧಾನದ ಸಮಾನತೆಯ ತತ್ವದ ಉಲ್ಲಂಘನೆಯಾಗುವುದು.

ಮುಕ್ತ ಯೋಜನೆಗಳ ಪರಿಣಾಮ: ಉಚಿತ ಯೋಜನೆಗಳಿಂದ ವೆನೆಜುವೆಲಾ, ಶ್ರೀಲಂಕಾ ದೇಶಗಳು ಸಂಕಷ್ಟದಲ್ಲಿವೆ. ಕಚ್ಚಾ ತೈಲದಿಂದ ಸಮೃದ್ಧವಾಗಿದ್ದ ವೆನೆಜುವೆಲಾ ದೇಶವು ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯಲ್ಲಾದ ಏರಿಕೆಯಿಂದ 1980 ರವರೆಗೆ ಸಮೃದ್ಧವಾಗಿತ್ತು ಅಧಿಕಾರಕ್ಕೆ ಬಂದ ಎಲ್ಲ ಸರಕಾರಗಳು ಜನರಿಗೆ ಆಹಾರದಿಂದ ಸಾರ್ವಜನಿಕ ಸಾರಿಗೆವರೆಗೆ ಎಲ್ಲವನ್ನೂ ಉಚಿತವಾಗಿ ನೀಡಿದ ಪರಿಣಾಮ ಜನರು ಸೋಮಾರಿಗಳಾದ ಕಾರಣ ಶೇ. 70ರಷ್ಟು ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳುತ್ತಿತ್ತು. ತೈಲ ಬೆಲೆ ಇಳಿಕೆಯಾಗುತ್ತಿದ್ದಂತೆ ದೇಶದ ಆದಾಯ ಕುಸಿದು ಆರ್ಥಿಕ ಸಂಕಷ್ಟ ಪ್ರಾರಂಭವಾದವು. ಭ್ರಷ್ಟಾಚಾರ ವ್ಯಾಪಕವಾಯಿತು. ರೈತರ ಸಾಲ ಮನ್ನಾ ಮುಂದುವರಿಕೆ ಆರ್ಥಿಕತೆಗೆ ಇನ್ನಷ್ಟು ಹೊಡೆತ ನೀಡಿತು. ಬಿಟ್ಟಿ ಯೋಜನೆಗಳಿಂದಾಗಿ ನಾಲ್ಕು ದಶಕಗಳ ನಂತರವೂ ಆ ರಾಷ್ಟ್ರದ ಆರ್ಥಿಕತೆ ಇನ್ನೂ ಚೇತರಿಸಿಕೊಂಡಿಲ್ಲ.

ಶ್ರೀಲಂಕಾದಲ್ಲಿಯೂ ಅಧ್ಯಕ್ಷ ರಾಜಪಕ್ಸೆಯವರು ತೆರಿಗೆಯಲ್ಲಿ ಮಾಡಿದ ಭಾರೀ ಕಡಿತದಿಂದ ಸರಕಾರದ ಆದಾಯ ಕುಸಿದು ದೇಶ ದಿವಾಳಿಯಾಯಿತು. ಇಂದು ಶ್ರೀಲಂಕಾದಲ್ಲಿ ಅವಶ್ಯಕ ವಸ್ತುಗಳ ತೀವ್ರ ಅಭಾವದಿಂದಾಗಿ ಜನರು ಬೀದಿಗಿಳಿದಿದ್ದಾರೆ. ದೇಶದಲ್ಲಿ ಅರಾಜಕತೆ ಉಂಟಾಗಿದೆ. ಓರ್ವ ಸಂಸದನ ಹತ್ಯೆಯೂ ಆಗಿದೆ.

ಭಾರತದ ನೀತಿ ಆಯೋಗದ ಸದಸ್ಯರಾದ ರಮೇಶ್‌ಚಂದರವರು, ಕೆಲವು ಹಿರಿಯ ಅಧಿಕಾರಿಗಳು ಮುಕ್ತ ಯೋಜನೆಗಳ ವಿರುದ್ಧ ಕೇಂದ್ರ ಸರಕಾರವನ್ನು ಎಚ್ಚರಿಸಿದ್ದಾರೆ. ವಿಭಿನ್ನ ಕ್ಷೇತ್ರಗಳಿಗೆ ನೀಡುವ ಸಬ್ಸಿಡಿಗಳು, ಉಚಿತಗಳು ಶ್ರೀಲಂಕಾದಂತಹ ಪರಿಸ್ಥಿತಿ ತರುವ ಸಾಧ್ಯತೆ ಇದೆಯೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಉಚಿತ ಯೋಜನೆಗಳು ದೇಶಗಳ ಹಣಕಾಸು ಸ್ಥಿತಿ ನಾಶಗೊಳಿಸಿ ಆರ್ಥಿಕತೆಯನ್ನು ಪ್ರಪಾತಕ್ಕೆ ತಳ್ಳುತ್ತವೆ.

ಭರವಸೆಯ ಕಿರಣ: 2019ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ರಾಹುಲ್ ಗಾಂಧಿಯವರು 'ನ್ಯಾಯ್' ಹೆಸರಿನ ಯೋಜನೆ ಪ್ರಕಟಿಸಿದರು. ಈ ಯೋಜನೆಯಂತೆ ಕಾಂಗ್ರೆಸ್ ಅಧಿಕಾರಕ್ಕೆ ಬಂದಲ್ಲಿ ದೇಶದ ಐದು ಕೋಟಿ ಕುಟುಂಬಗಳಿಗೆ ವಾರ್ಷಿಕ ತಲಾ ರೂ. 72,000/– ನೀಡುವ ಘೋಷಣೆ ಮಾಡಿದರು. ಈ ಯೋಜನೆ ಅನುಷ್ಠಾನಗೊಂಡಲ್ಲಿ ಸರಕಾರವು ಪ್ರತಿ ವರ್ಷ ರೂ. 3.60 ಲಕ್ಷ ಕೋಟಿ ಅನುತ್ಪಾದಕ ಉದ್ದೇಶಕ್ಕೆ ವ್ಯಯಿಸಬೇಕಾಗುತ್ತಿತ್ತು. ಈ ಯೋಜನೆಯಿಂದ ದೇಶದಲ್ಲಿ ಸೋಮಾರಿತನ ವೃದ್ಧಿಯಾಗಿ ನಿರುದ್ಯೋಗ ಹೆಚ್ಚುತ್ತಿತ್ತು. ಅವಶ್ಯಕ ವಸ್ತುಗಳ ಉತ್ಪಾದನೆ ಕುಸಿದು ಬೆಲೆ ಏರಿಕೆಯಾಗುತ್ತಿತ್ತು. ಹಣದುಬ್ಬರ ಭಾರೀ ಪ್ರಮಾಣದಲ್ಲಿ ಏರಿಕೆಯಾಗಿ ದೇಶದಲ್ಲಿ ಶ್ರೀಲಂಕಾದಂತಹ ಅರಾಜಕ ಪರಿಸ್ಥಿತಿ ನಿರ್ಮಾಣವಾಗುತ್ತಿತ್ತು. ಆದರೆ ಭಾರತದ ಪ್ರಬುದ್ಧ ಮತದಾರರು ಕಾಂಗ್ರೆಸ್‌ನ ಈ ಆಮಿಷಕ್ಕೆ ಬಲಿಯಾಗದೇ ವಿವೇಚನೆಯಿಂದ ಮತ ಚಲಾಯಿಸಿದರು. ಜನರು ಕಾಂಗ್ರೆಸ್‌ನ್ನು ಮತ್ತೊಮ್ಮೆ ತಿರಸ್ಕರಿಸಿ ದೇಶವನ್ನು ಆರ್ಥಿಕ ವಿನಾಶದ ಸಂಭಾವ್ಯತೆಯಿಂದ ರಕ್ಷಿಸಿದರು.

ಜಗತ್ತಿನಲ್ಲಿರುವ ಪ್ರಸ್ತುತ ಪರಿಸ್ಥಿತಿ, ಕಲಿತ ಪಾಠಗಳು ಹಾಗೂ ಪಡಕೊಂಡ ಅನುಭವಗಳಿಂದ ಜನಪ್ರಿಯ ಮುಕ್ತ ಯೋಜನೆಗಳು ಯಾವುದೇ ದೇಶದ ಬೊಕ್ಕಸಕ್ಕೆ ಹೊರೆ ಹಾಗೂ ಪ್ರಜಾಸತ್ತೆಗೆ ಅಪಾಯಕಾರಿಯಾಗಿದೆ. ಆದ್ದರಿಂದ ಈ ಪಿಡುಗನ್ನು ತಡೆಯಲು ದೇಶದ ರಾಜಕೀಯ ನಾಯಕರು, ಆರ್ಥಿಕ ತಜ್ಞರು, ಕಾನೂನು ತಜ್ಞರು, ಪ್ರಜ್ಞಾವಂತರು, ಸ್ವಯಂಸೇವಾ ಸಂಸ್ಥೆಗಳು ಸಾಮಾಜಿಕ ಕಾರ್ಯಕರ್ತರು ಹಾಗೂ ತೆರಿಗೆ ಪಾವತಿಸುವವರು ಒಂದಾಗಿ ಜನಜಾಗೃತಿ ಆರಂಭಿಸುವ ಕಾಲ ಸನ್ನಿಹಿತವಾಗಿದೆ.

ತಂದೆಗೂ ಮಿಗಿಲು ಗುರು; ಅವರಿಂದಲೇ ಮುಕ್ತಿ

ಆದಿಚುಂಚನಗಿರಿ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಗಳಿಂದ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರಿಗೆ ಜನ್ಮದಿನದ ಶುಭಾಶಯ ಕೋರಿಕೆ

ಮೈಸೂರು, ಜೂ.10(ಎಸ್‌ಬಿಡಿ)– ಗುರು ಆತ್ಮಜ್ಞಾನ ಧಾರೆ ಎರೆದು ಸನ್ಮಾರ್ಗದಲ್ಲಿ ಮುನ್ನಡೆಸುತ್ತಾರೆ ಎಂದು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠಾಧೀಶರಾದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ನುಡಿದರು.

ಮೈಸೂರು–ನಂಜನಗೂಡು ಮುಖ್ಯರಸ್ತೆ ಶ್ರೀ ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ಜನ್ಮದಿನೋತ್ಸವದ ಅಂಗವಾಗಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಭಾಗಿಯಾಗಿ ಶ್ರೀಗಳಿಗೆ ಶುಭಕಾಮನೆ ಸಮರ್ಪಿಸಿದ ಬಳಿಕ ಆಶೀರ್ವಚನ ನೀಡಿದರು.



ಅಲೆಗ್ಸಾಂಡರ್ ಹೇಳಿರುವಂತೆ ತಂದೆಗಿಂತ ಗುರು ಮೇಲು. ಗುರು ನಮಗೆ ಆತ್ಮಜ್ಞಾನ ನೀಡುತ್ತಾರೆ ಗುರುವಿಲ್ಲದೆ ನಾವು ಯಾವ ಮಾರ್ಗ ಅನುಸರಿಸಿದರೂ ಮುಕ್ತಿ ದೊರಕುವುದಿಲ್ಲ. ಅಜ್ಞಾನದಿಂದ ಸುಜ್ಞಾನದೆಡೆಗೆ ಮಾರ್ಗದರ್ಶನ ನೀಡುತ್ತಾರೆ. ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಇಂತಹ ಗುರು ಶ್ರೇಷ್ಠರು. ಇವರಂತಹ ಗುರುವಿನ ಬಳಿ ನಾವು ಆತ್ಮವಿದ್ಯೆ ಪಡೆಯಬೇಕು. ನಾವು ಇಂದು ಏನು ಆಗಿದ್ದೇವೋ ಅದೆಲ್ಲಾ ಹಿಂದಿನ ಕರ್ಮಫಲ ಎಂಬುದನ್ನು ಅರಿತು ಒಳ್ಳೆಯ ರೀತಿ ಜೀವನ ನಡೆಸಬೇಕು ಎಂದರು.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಅನುಗ್ರಹ ಸಂದೇಶ ನೀಡಿ, ಮನುಷ್ಯ ಜನ್ಮ ಅತ್ಯಂತ ಶ್ರೇಷ್ಠವಾದುದು. ನಾವಿರುವುದು ಕೆಲವೇ ದಿನಗಳು ಮಾತ್ರ ಎನ್ನುವುದನ್ನು ಅರಿತುಕೊಂಡು ಬೇಡದ ಚಿಂತೆಗಳಿಂದ ದೂರವಿರಬೇಕು. ನಾಲ್ಕಾರು ಜನರಿಗೆ ಒಳಿತು ಮಾಡಬೇಕು. ನಮಗೆ ಮಾನವ ಜನ್ಮ ಸಿಕ್ಕಿರುವುದೇ ಸುಯೋಗ. ಭಗವಂತ ಕರುಣಿಸಿರುವ ಮನುಷ್ಯ ಜನ್ಮವನ್ನು ಸದುಪಯೋಗಪಡಿಸಿಕೊಳ್ಳಿ, ಪ್ರತಿ ಹುಟ್ಟುಹಬ್ಬದಂದು ಈ ಒಂದು ವರ್ಷದಲ್ಲಿ ನಾವು ಎಷ್ಟು ಒಳ್ಳೆಯ ಕೆಲಸ ಮಾಡಿದ್ದೇವೆ ಎಂದು ಡೈರಿಯಲ್ಲಿ ಬರೆಯುವ ಹವ್ಯಾಸ ರೂಢಿಸಿಕೊಳ್ಳಿ ಎಂದು ಕಿವಿಮಾತು ಹೇಳಿದರು.

ಈ ವೇಳೆ ಶ್ರೀದ್ವಯರಿಗೆ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಗೌರವ ಸಮರ್ಪಿಸಿದರು. ಅರುಣಾಚಲ ಆತ್ಮವಿದ್ಯಾಮಂದಿರದ ಶ್ರೀ ರಮಣ ಸ್ವರೂಪಾನಂದ ಸ್ವಾಮೀಜಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರಿಗೆ ಶುಭಕಾಮನೆ ಸಲ್ಲಿಸಿ, ಭಕ್ತರಿಗೆ ಆಶೀರ್ವಚನ ನೀಡಿದರು. ಆಂಧ್ರಪ್ರದೇಶ ಶ್ರೀ ಪೀಠದ ಶ್ರೀ ಪರಿಪೂರ್ಣಾನಂದ ಸರಸ್ವತಿ ಸ್ವಾಮೀಜಿ, ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ, ತೆಲಂಗಾಣ ವಿಧಾನ ಪರಿಷತ್ ಸದಸ್ಯ ಸಾರಯ್ಯ ಇತರರು ಉಪಸ್ಥಿತರಿದ್ದರು.

ಹೆಚ್.ಕೆ.ರಾಮುಗೆ ಮತ ನೀಡುವಂತೆ ಪದವೀಧರ ಮತದಾರರಲ್ಲಿ ಜೆಡಿಎಸ್ ಯುವ ಘಟಕ ಮನವಿ

ಮೈಸೂರು, ಜೂ.10(ಆರ್‌ಕೆಬಿ)– ದಕ್ಷಿಣ ಪದವೀಧರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಅವರಿಗೆ ಮತ ನೀಡುವಂತೆ ಜೆಡಿಎಸ್ ಯುವ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿ.ಎಂ. ಕ್ರಾಂತಿಸಿಂಹ ಮನವಿ ಮಾಡಿದ್ದಾರೆ.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಮು ಅವರು ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷರಾಗಿ ನೌಕರರ ಏಳಿಗೆಗೆ ಶ್ರಮಿಸಿದ್ದಾರೆ. ಪದವೀಧರರ, ಶಿಕ್ಷಕರ ಒಡನಾಟದಲ್ಲಿದ್ದು, ಅವರ ಸಮಸ್ಯೆಗಳನ್ನು ಅರಿತಿದ್ದಾರೆ. ಅವರು ಪರಿಷತ್‌ಗೆ ಆಯ್ಕೆಯಾದರೆ ಪದವೀಧರರ ಪರವಾಗಿ ದನಿ ಎತ್ತಲಿದ್ದಾರೆ. ಹೀಗಾಗಿ ರಾಮು ಅವರಿಗೆ ಮೊದಲ ಪ್ರಾಶಸ್ತ್ಯದ ಮತ ನೀಡುವ ಮೂಲಕ ಗೆಲ್ಲಿಸಬೇಕೆಂದು ಕೋರಿದರು.

ಸುದ್ದಿಗೋಷ್ಠಿಯಲ್ಲಿ ಯುವ ಜೆಡಿಎಸ್ ಘಟಕದ ರಾಜ್ಯ ಸಂಘಟನಾ ಕಾರ್ಯದರ್ಶಿ ಕೆ.ಪಿ.ಕಾಂತರಾಜಗೌಡ, ಕಾರ್ಮಿಕ ಘಟಕದ ಜಿಲ್ಲಾಧ್ಯಕ್ಷ ಸಿದ್ದೇಶ್ವರ್ ಉಪಸ್ಥಿತರಿದ್ದರು.

ಸುಂದರ ಹುಡುಗಿಯರ ಸಹವಾಸದ ಆಮಿಷ ತೋರಿ ಯುವಕರಿಗೆ ವಂಚನೆ: ಆರೋಪಿ ಸೆರೆ

ಮೈಸೂರು, ಜೂ.10(ಆರ್‌ಕೆ)– ಲೊಕ್ಯಾಂಟೋ ಡೇಟಿಂಗ್ ಎಂಬ ಆ್ಯಪ್ ಮೂಲಕ ಆನ್‌ಲೈನ್‌ನಲ್ಲಿ ಸ್ಪಾ ಸರ್ವಿಸ್ ನೀಡುವುದಾಗಿ ನಂಬಿಸಿ ಹಣ ಪಡೆದು ಯುವಕರನ್ನು ವಂಚಿಸುತ್ತಿದ್ದ ಆರೋಪಿಯನ್ನು ಮೈಸೂರಿನ ಸೆನ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಡೇಟಿಂಗ್ ಆ್ಯಪ್ ಮೂಲಕ ಜಾಹಿರಾತು ನೀಡಿ ಸ್ಪಾ ಸೇವೆ ನೀಡುವುದಾಗಿ ಹೇಳಿ, ಫೋನ್ ಪೇ ಮೂಲಕ 3,000 ರೂ. ಹಣ ವರ್ಗಾಯಿಸಿಕೊಂಡು ಮೋಸ ಮಾಡಲಾಗಿದೆ ಎಂದು ವ್ಯಕ್ತಿಯೊಬ್ಬರು ದೂರು ನೀಡಿದ ಹಿನ್ನೆಲೆಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದ ಸಿಇಎನ್ ಕ್ರೈಂ ಠಾಣೆ ಪೊಲೀಸರು, 24 ಗಂಟೆಯೊಳಗಾಗಿ ಆರೋಪಿಯನ್ನು ಬಂಧಿಸಿ ಆತನಿಂದ ಕೃತ್ಯಕ್ಕೆ ಬಳಸುತ್ತಿದ್ದ ಲ್ಯಾಪ್‌ಟಾಪ್ ಹಾಗೂ 4 ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಲೊಕ್ಯಾಂಟೋ ಡೇಟಿಂಗ್ ಆ್ಯಪ್‌ನಲ್ಲಿ ಆ್ಯಡ್ ಮಾಡಿದ ಆತ, ಸುಂದರ ಹುಡುಗಿಯರ ಫೋಟೋ ಹಾಕಿ, ಸಿಂಗಲ್ ಹುಡುಗಿಯರಿದ್ದಾರೆ, ಕಾಲೇಜು ಹುಡುಗಿಯರ ನಗ್ನ ವಿಡಿಯೋ ಕಾಲ್ ಸರ್ವಿಸ್ ಇದೆ ಹಾಗೂ ಹುಡುಗಿಯರೇ ನೇರವಾಗಿ ಮೀಟ್ ಮಾಡುತ್ತಾರೆ ಎಂದು ಹೇಳಿ, ಮೊದಲು ಶೇ.50 ಹಣ ಪಾವತಿಸಬೇಕೆಂದು ಕೇಳಿ ಆನ್‌ಲೈನ್ ಪೇಮೆಂಟ್ ಮೂಲಕ ತನ್ನ ಖಾತೆಗೆ ಹಣ ವರ್ಗಾಹಿಸಿಕೊಂಡು ವಂಚಿಸುತ್ತಿದ್ದುದು ಬಯಲಾಗಿದೆ.

ಆರೋಪಿಯು ಈಗ 80ರಿಂದ 100 ಯುವಕರಿಂದ ಸುಮಾರು 8 ಲಕ್ಷ ರೂ. ಹಣ ವಸೂಲಿ ಮಾಡಿ ವಂಚಿಸಿದ್ದಾನೆ ಎಂದು ತಿಳಿದುಬಂದಿದೆ. ಡಿಸಿಪಿ ಪ್ರದೀಪ್ ಗುಂಟಿಯವರ ಮಾರ್ಗದರ್ಶನ, ದೇವರಾಜ ಉಪವಿಭಾಗದ ಎಂ.ಎನ್. ಶಶಿಧರ ಉಸ್ತುವಾರಿಯಲ್ಲಿ ನಡೆದ ಪತ್ತೆ ಕಾರ್ಯದಲ್ಲಿ ಸಿಇಎನ್ ಠಾಣೆ ಇನ್ಸ್‌ಪೆಕ್ಟರ್ ಎನ್. ಜಯಕುಮಾರ್, ಸಬ್‌ಇನ್ಸ್‌ಪೆಕ್ಟರ್ ಸಿದ್ದೇಶ್ ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.

ಎಚ್ಚರ ವಹಿಸಿ: ಹುಡುಗಿಯರ ಫೋಟೋ, ವಿಡಿಯೋ ತೋರಿಸಿ ಆನ್‌ಲೈನ್ ಮೂಲಕ ಹಣ ಹಾಕಿಸಿಕೊಂಡು ವಂಚಿಸುವವರ ಬಗ್ಗೆ ಯುವಕರು ಜಾಗೃತರಾಗಿರಬೇಕು, ಅಪರಿಚಿತರ ಬ್ಯಾಂಕ್ ಖಾತೆಗೆ ಫೋನ್ ಪೇ ಅಥವಾ ಗೂಗಲ್ ಪೇ ಮೂಲಕ ಹಣ ವರ್ಗಾಯಿಸಬೇಡಿ ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಎಚ್ಚರಿಸಿದ್ದಾರೆ.

ಆಟೋ ಗ್ಯಾರೇಜ್ ಮಾಲೀಕನ ಮನೆಯಲ್ಲಿ ಚಿನ್ನಾಭರಣ ಕಳವು

ಶ್ರೀರಂಗಪಟ್ಟಣ, ಜೂ.10–ಆಟೋ ಗ್ಯಾರೇಜ್ ಮಾಲೀಕನ ಮನೆ ಬಾಗಿಲು ಮೀಟಿ ನಗದು ಹಾಗೂ ಚಿನ್ನಾಭರಣ ಕಳವು ಮಾಡಿರುವ ಘಟನೆ ಶ್ರೀರಂಗಪಟ್ಟಣ ತಾಲೂಕು ಬಸ್ತಿಪುರ ಗ್ರಾಮದಿಂದ ವರದಿಯಾಗಿದೆ.

ಪಾಂಡವಪುರ ತಾಲೂಕು ಎಲೆಕೆರೆ ಹ್ಯಾಂಡ್‌ಪೋಸ್ಟ್‌ನಲ್ಲಿ ಆಟೋ ಗ್ಯಾರೇಜ್ ಹೊಂದಿರುವ ಹೆಚ್.ಆರ್. ಶ್ಯಾಮ್(38) ಅವರು ಬಸ್ತಿಪುರ ಗ್ರಾಮದಲ್ಲಿ ವಾಸವಿದ್ದರು. ಅವರ ಪತ್ನಿ ಶೃತಿ ಮೈಸೂರಿನ ಬೆಸ್ಟ್ ಕಾಟನ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ಈ ದಂಪತಿ ಜೂನ್ 6ರಂದು ಬೆಳಗ್ಗೆ ಮನೆಯಿಂದ ಕೆಲಸಕ್ಕೆ ಹೊರಟು ಅಂದು ರಾತ್ರಿ ಶೃತಿಯವರ ತವರೂರಾದ ದೊಡ್ಡೇಗೌಡನಕೊಪ್ಪಲಿಗೆ ಹೋಗಿ ಅಲ್ಲೇ ವಾಸ್ತವ್ಯ ಹೂಡಿದ್ದರು. ಜೂನ್ 8ರಂದು ಅಲ್ಲಿಂದಲೇ ಕೆಲಸಕ್ಕೆ ಹೋಗಿ ಸಂಜೆ ಮನೆಗೆ ಹಿಂತಿರುಗಿದಾಗ ಬಾಗಿಲು ಮೀಟಿ ಕಳವು ನಡೆದಿರುವುದು ಗೊತ್ತಾಗಿದೆ. ಖದೀಮರು ಮನೆಯ ಡ್ರಾನಲ್ಲಿದ್ದ 40 ಸಾವಿರ ರೂ. ನಗದು ಹಾಗೂ 12 ಸಾವಿರ ರೂ. ಮೌಲ್ಯದ ಚಿನ್ನದ ಓಲೆಯನ್ನು ಕಳವು ಮಾಡಿದ್ದು, ಈ ಸಂಬಂಧ ಕೆಆರ್‌ಎಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಿಯಕರ ಸೇರಿ ಇತರರಿಂದ ಹಣಕ್ಕಾಗಿ ಒತ್ತಡ: ಮನನೊಂದು ಯುವತಿ ಆತ್ಮಹತ್ಯೆ

ಸಂತ್ರಸ್ತೆ ತಾಯಿಯಿಂದ ಪೊಲೀಸರಿಗೆ ದೂರು

ಮೈಸೂರು, ಜೂ.10– ಯುವತಿಯೋರ್ವಳು ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದು, ಪ್ರಿಯಕರ ಮತ್ತು ಆತನ ಸ್ನೇಹಿತರು ಹಣಕ್ಕಾಗಿ ಒತ್ತಾಯ ಮಾಡಿದ್ದರಿಂದ ಮಾನಸಿಕವಾಗಿ ನೊಂದು ಈಕೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ಆರೋಪಿಸಲಾಗಿದೆ.

ಕ್ರೈಂ ಬಾಕ್ಸ್

ಮೈಸೂರಿನ ಎನ್‌ಆರ್ ಮೊಹಲ್ಲಾ ನಿವಾಸಿ ಸಂಗೀತಾ(22) ಆತ್ಮಹತ್ಯೆಗೆ ಶರಣಾದವಳಾಗಿದ್ದು, ಈಕೆ ಎನ್‌ಆರ್ ಮೊಹಲ್ಲಾ ಒಡಿ ಬ್ಲಾಕ್‌ನ ಆಕಾಶ್ ಎಂಬಾತನನ್ನು ಪ್ರೀತಿಸುತ್ತಿದ್ದಳು ಎಂದು ದೂರಿನಲ್ಲಿ ತಿಳಿಸಲಾಗಿದೆ. ಕೆಫೆ ಅಂಗಡಿ ತೆರೆಯಲು ಈಕೆಯ ತಾಯಿ ಹೆಸರಿನಲ್ಲಿರುವ ಮನೆ ಮೇಲೆ ಸಾಲ ಪಡೆದು ಹಣ ಕೊಡುವಂತೆ ಆಕಾಶ್ ಒತ್ತಡ ಹೇರುತ್ತಿದ್ದನು ಎನ್ನಲಾಗಿದೆ.

ತನ್ನ ಮಗಳು ಮೇ 7ರಂದು ಈ ವಿಚಾರ ತನಗೆ ತಿಳಿಸಿದ್ದು, ಹಣಕಾಸಿನ ವಿಚಾರವಾಗಿ ಮಾತನಾಡುತ್ತಿರುವ ಸಂದರ್ಭದಲ್ಲಿ ಮಗಳ ಪ್ರಿಯಕರ ಆಕಾಶ್, ಆತನ ಸ್ನೇಹಿತ ಸತ್ಯ ಮತ್ತು ಸ್ನೇಹಿತೆ ಟೀನಾ ಅವರು ಮಗಳಿಗೆ ಕರೆ ಮಾಡಿ ಹಣಕ್ಕಾಗಿ ಒತ್ತಡ ಹೇರಿದ್ದಾರೆ. ಈ ವೇಳೆ ತಾನು ಇವರಿಂದ ಮಾನಸಿಕ ಹಿಂಸೆಗೆ ಒಳಗಾಗಿದ್ದು, ನಾನು ಸತ್ತರೆ ಅವರೇ ಕಾರಣ ಎಂದು ಮಗಳು ತನ್ನ ಜೊತೆ ಹೇಳಿಕೊಂಡಿದ್ದಳು ಎಂದು ಆತ್ಮಹತ್ಯೆಗೆ ಶರಣಾದ ಸಂಗೀತಾಳ ತಾಯಿ ಭಾಗ್ಯ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಮೇ 8ರಂದು ಸಂಜೆ ಮಗಳು ಮನೆಯ ರೂಂನಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದು, ಈಕೆಯ ಸಾವಿಗೆ ಪ್ರಿಯಕರ ಆಕಾಶ್, ಆತನ ಸ್ನೇಹಿತ ಸತ್ಯ, ಸ್ನೇಹಿತೆ ಟೀನಾ ಕಾರಣರೆಂದು ನೀಡಿದ ದೂರಿನನ್ವಯ ಎನ್‌ಆರ್ ಠಾಣೆ ಪೊಲೀಸರು ಈ ಮೂವರ ವಿರುದ್ಧ ಆತ್ಮಹತ್ಯೆಗೆ ಪ್ರಚೋದನೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಪ್ರವಾದಿ ಕುರಿತ ಹೇಳಿಕೆ: ನೂಪುರ್ ಶರ್ಮಾ ಬಂಧನಕ್ಕೆ ಒತ್ತಾಯಿಸಿ ದೇಶದ ಹಲವೆಡೆ ಪ್ರತಿಭಟನೆ

ಹಿಂಸಾಚಾರ; ಅಶ್ರುವಾಯು ಪ್ರಯೋಗ



ನವದೆಹಲಿ, ಜೂ.10– ಪ್ರವಾದಿ ಮೊಹಮ್ಮದ್ ಪೈಗಂಬರರ ಕುರಿತು ವಿವಾದಾತ್ಮಕ ಹೇಳಿಕೆ ಹಿನ್ನೆಲೆಯಲ್ಲಿ ಬಿಜೆಪಿಯಿಂದ ಅಮಾನತುಗೊಂಡಿರುವ ನೂಪುರ್ ಶರ್ಮಾ ಹಾಗೂ ನವೀನ್ ಜಿಂದಾಲ್ ಅವರನ್ನು ಬಂಧಿಸುವಂತೆ ಒತ್ತಾಯಿಸಿ, ರಾಷ್ಟ್ರ ರಾಜಧಾನಿ ನವದೆಹಲಿ, ಉತ್ತರ ಪ್ರದೇಶ, ಕೊಲ್ಕತ್ತಾ, ಪಂಜಾಬ್, ಕರ್ನಾಟಕ ಸೇರಿದಂತೆ ದೇಶದ ಹಲವೆಡೆ ಇಂದು ಮುಸ್ಲಿಂರು ಭಾರಿ ಪ್ರತಿಭಟನೆ ನಡೆಸಿದ್ದಾರೆ.

ಕೆಲವೆಡೆ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿದ್ದು, ಕಲ್ಲು ತೂರಾಟ, ಪೊಲೀಸರೊಂದಿಗೆ ಘರ್ಷಣೆ, ಅಶ್ರುವಾಯು ಪ್ರಯೋಗ ನಡೆದಿದೆ. ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನ ಅಟಲಾ ಪ್ರದೇಶದಲ್ಲಿ ಶುಕ್ರವಾರದ ಪ್ರಾರ್ಥನೆ ಸಲ್ಲಿಸಿದ ನಂತರ ಮುಸ್ಲಿಂರು ನೂಪುರ್ ಶರ್ಮಾ ಅವರ ಬಂಧನಕ್ಕಾಗಿ ಪ್ರತಿಭಟನೆ ನಡೆಸಿದರು. ಈ ವೇಳೆ ಪೊಲೀಸರು ಹಾಗೂ ಪ್ರತಿಭಟನಾಕಾರರ ನಡುವೆ ಘರ್ಷಣೆ ನಡೆದಿದ್ದು, ಕಲ್ಲು ತೂರಾಟ ನಡೆಯಿತು. ಎಡಿಜಿಪಿ ಕಾರಿನ ಮೇಲೆ ಕಲ್ಲು ತೂರಾಟ ನಡೆದಿದ್ದು, ಕಾರಿನ ಗಾಜುಗಳು ಪುಡಿಪುಡಿಯಾಗಿವೆ. ಪ್ರತಿಭಟನೆಯನ್ನು ಹತ್ತಿಕ್ಕುವಂತೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಪೊಲೀಸರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಜಾರ್ಖಂಡ್‌ನ ರಾಂಚಿಯಲ್ಲೂ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿದ್ದು, ಎಸ್‌ಪಿಗೆ ಗಾಯವಾಗಿದೆ. ಉದ್ರಿಕ್ತರನ್ನು ನಿಯಂತ್ರಿಸಲು ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸಿದ್ದಾರೆ. ಪಶ್ಚಿಮ ಬಂಗಾಳದಲ್ಲೂ ಬೃಹತ್ ಪ್ರತಿಭಟನೆ ನಡೆಸಲಾಗಿದೆ. ಕೋಲ್ಕತ್ತಾದ ಪಾರ್ಕ್ ಸರ್ಕಸ್‌ನಲ್ಲಿ ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಮುಸ್ಲಿಂರು, ನೂಪುರ್ ಶರ್ಮಾ ಹಾಗೂ ನವೀನ್ ಜಿಂದಾಲ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಹೌರಾದಲ್ಲಿಯೂ ಪ್ರತಿಭಟನೆ ನಡೆಯಿತು.

ದೆಹಲಿಯ ಜಾಮಾ ಮಸೀದಿಯ ಮೆಟ್ಟಿಲುಗಳ ಮೇಲೆ ಭಿತ್ತಿಪತ್ರ ಹಿಡಿದು ಕುಳಿತಿದ್ದ ನೂರಾರು ಪ್ರತಿಭಟನಾಕಾರರು, ಪ್ರವಾದಿ ಮೊಹಮ್ಮದ್ ಪೈಗಂಬರರ ಕುರಿತು ಅವಹೇಳನಾಕಾರಿ ಹೇಳಿಕೆಯನ್ನು ಖಂಡಿಸಿದರು. ಪಂಜಾಬಿನ ಲೂದಿಯಾನ ಜಾಮಾ ಮಸೀದಿ ಕರೆ ನಂತರ ಪಂಜಾಬಿನಾದ್ಯಂತ ಪ್ರತಿಭಟನೆ ನಡೆದಿದೆ. ಮಹಾರಾಷ್ಟ್ರದ ಸೊಲ್ಲಾಪುರದಲ್ಲಿ ಮುಸ್ಲಿಮರು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು. ಬಿಜೆಪಿಯಿಂದ ಅಮಾನತುಗೊಂಡಿರುವ ನೂಪುರ್ ಶರ್ಮಾ ಅವರನ್ನು ಬಂಧಿಸುವಂತೆ ಆಗ್ರಹಿಸಿ ಕಲಬುರಗಿಯ ಮುಸ್ಲಿಂ ಚೌಕದಲ್ಲಿ ಭಾರೀ ಪ್ರತಿಭಟನೆ ನಡೆಸಲಾಯಿತು.

ಅಧಿಕಾರ ದೊರೆತರೆ ಹೋರಾಟಕ್ಕೆ ದೊಡ್ಡ ಶಕ್ತಿ

ಪಕ್ಷೇತರ ಅಭ್ಯರ್ಥಿ ಪ್ರಸನ್ನ ಎನ್. ಗೌಡ ವಿಶ್ವಾಸ

ಮೈಸೂರು,ಜೂ 10(ಜಿಎ)– ಚಳುವಳಿಯೊಂದಿಗೆ ಅಧಿಕಾರ ದೊರೆತರೆ ಅದೊಂದು ದೊಡ್ಡ ಶಕ್ತಿಯಾಗುತ್ತದೆ ಎಂದು ದಕ್ಷಿಣ ಪದವೀಧರ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಪ್ರಸನ್ನ ಎನ್. ಗೌಡ ಹೇಳಿದರು.



ಇಲ್ಲಿವರೆಗೂ 90 ಸಾವಿರ ಪದವೀಧರರನ್ನು ನೇರವಾಗಿ ಭೇಟಿ ಮಾಡಿದ್ದೇನೆ ಹಾಗೂ ಎಲ್ಲಾ ಜಿಲ್ಲೆಗಳಿಗೆ ಭೇಟಿ ನೀಡಿ ಪ್ರಚಾರ ನಡೆಸಿದ್ದೇನೆ. ನನಗೆ ಸಿಪಿಎಂ, ಆಮ್ ಆದ್ಮಿ, ಸ್ವರಾಜ್ ಇಂಡಿಯಾ ಪಕ್ಷಗಳು ಬೆಂಬಲ ಸೂಚಿಸಿದ್ದು, ಅಲ್ಲಿನ ಮುಖಂಡರು ನನ್ನ ಪರವಾಗಿ ಪ್ರಚಾರವನ್ನು ನಡೆಸುತ್ತಿದ್ದಾರೆ ಎಂದರು.

ಸಂವಿಧಾನ ಆಶಯಗಳನ್ನು ತಳ ಸಮುದಾಯಕ್ಕೆ ತಲುಪಿಸಬೇಕು ಹಾಗೂ ಸುಸ್ಥಿತರ ಅಭಿವೃದ್ಧಿಯೇ ನಮ್ಮ ಪ್ರಮುಖ ಅಜೆಂಡವಾಗಿದ್ದು, ಅದಕ್ಕೆ ಅನೇಕರು ಒಲವು ತೋರಿ ಬದಲಾವಣೆ ಬಯಸುತ್ತಿರುವವರು ನಮ್ಮ ಪರವಾಗಿ ನಿಲುತ್ತಾರೆ ಎಂಬ ವಿಶ್ವಾಸವಿದೆ ಎಂದ ಅವರು ರೈತ ಸಂಘ, ಡಿಎಸ್‌ಎಸ್‌ನಿಂದ ಹೆಚ್ಚು ನೋಂದಣಿಯಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಶೇ.74ರಷ್ಟು ಪದವೀಧರರಿದ್ದು, ಅವರ ಬಗ್ಗೆ ಹೆಚ್ಚು ಗಮನಹರಿಸಿದ್ದೇನೆ ಎಂದರು.

ಬದಲಾವಣೆ ಜಗದ ನಿಯಮವಾಗಿದ್ದು ನಮ್ಮ ಅಜೆಂಡಾಗಳನ್ನೂ ಪದವೀಧರರು ಗಮನಿಸಿ ಕೈಹಿಡಿಯುತ್ತಾರೆ ಎಂಬ ಆಶಯವಿದ್ದು, ಇತ್ತೀಚಿನ ದಿನಗಳಲ್ಲಿ ಪದವೀಧರರಿಂದ ಉತ್ತಮ ಪ್ರತಿಕ್ರಿಯೆ ದೊರೆಯುತ್ತಿದ್ದು, ಮೊದಲನೇ ಪ್ರಾಶಸ್ತ್ಯ ಮತದೊಂದಿಗೆ ಜಯ ಗಳಿಸುತ್ತೇನೆ ಎಂಬ ಭರವಸೆ ಇದೆ ಎಂದು ತಿಳಿಸಿದ್ದಾರೆ.



ದಕ್ಷಿಣ ಪದವೀಧರರ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಪ್ರಸನ್ನ ಎನ್. ಗೌಡ ಅವರ ಪರವಾಗಿ ಹಿರಿಯ ಸಾಹಿತಿ ದೇವನೂರು ಮಹದೇವ್ ಅವರು ಶುಕ್ರವಾರ ಸಂಜೆ ಮಾನಸಗಂಗೊತ್ರಿ ಆವರಣದಲ್ಲಿ ಪ್ರಚಾರ ಸಭೆ ನಡೆಸಿದರು.

ಮೂರನೇ ಪುಟದಿಂದ

ಖದೀಮ ಉತ್ತರ ಪ್ರದೇಶದಲ್ಲಿ ಬಂಧನ

ಒಳಗೊಂಡಂತೆ 8 ಮಂದಿಯ ವಿಶೇಷ ತಂಡವನ್ನು ರಚಿಸಿದ್ದರು. ಈ ತಂಡಕ್ಕೆ ಜಿಲ್ಲಾ ಪೊಲೀಸ್ ಕಚೇರಿಯ ತಾಂತ್ರಿಕ ವಿಭಾಗದ ರವಿಕಿರಣ್ ಮತ್ತು ಲೋಕೇಶ್ ಅವರನ್ನು ಕೂಡ ಸೇರ್ಪಡೆಗೊಳಿಸಲಾಗಿತ್ತು. ಕಾರಿನ ಬಣ್ಣ ಮತ್ತು ಇಂಡಿಕೇಟರ್ ಹೊರತುಪಡಿಸಿ ಬೇರೆ ಯಾವುದೇ ಸುಳಿವು ಇಲ್ಲದ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಇನ್ಸ್‌ಪೆಕ್ಟರ್ ಹರೀಶ್ ನೇತೃತ್ವದ ತಂಡ ಕಾರು ಮೈಸೂರು ಕಡೆ ಚಲಿಸಿದೆ ಎಂಬ ಸುಳಿವನ್ನಾಧರಿಸಿ ಮದ್ದೂರಿನಿಂದ ಮೈಸೂರಿನವರೆಗೆ ಸುಮಾರು 150 ಸಿಸಿ ಕ್ಯಾಮರಾಗಳನ್ನು ಪರಿಶೀಲನೆ ನಡೆಸಿದರೂ ಕೂಡ ಯಾವುದೇ ಸುಳಿವು ಲಭ್ಯವಾಗಿಲ್ಲ. ತನಿಖೆ ಆರಂಭಿಸಿ 15 ದಿನದ ನಂತರ ಸದರಿ ಕಾರು ಮದ್ದೂರಿನ ಎಳನೀರು ಮಾರುಕಟ್ಟೆ ಹಿಂಭಾಗ ಚಲಿಸಿದೆ ಎಂಬ ಸುಳಿವು ದೊರೆತಾಗ ವಿಶೇಷ ತಂಡವು ಆ ಭಾಗದಲ್ಲಿ ವಿಚಾರಣೆ ಆರಂಭಿಸಿತು. ಅಲ್ಲಿನ 1 ಮನೆಯನ್ನು ಬಾಡಿಗೆಗೆ ಪಡೆದಿದ್ದ ಐವರ ತಂಡ ಏ.12ರಂದು ಮುಂಜಾನೆ ಮನೆ ಖಾಲಿ ಮಾಡಿತ್ತು. ಈ ತಂಡ ಎಳನೀರು ವ್ಯಾಪಾರ ಮಾಡುತ್ತಿದ್ದೇವೆ ಎಂದು ಹೇಳಿಕೊಂಡು ಮನೆ ಬಾಡಿಗೆಗೆ ಪಡೆದು ಕೇವಲ 10 ದಿನ ಮಾತ್ರ ವಾಸವಿತ್ತು ಎಂಬ ಮಾಹಿತಿ ಲಭಿಸಿದಾಗ ಈ ತಂಡದ ಬಗ್ಗೆ ಮತ್ತಷ್ಟು ವಿವರಗಳನ್ನು ಪೊಲೀಸರ ವಿಶೇಷ ತಂಡ ಕಲೆ ಹಾಕಿದಾಗ ಅವರಿಗೆ 1 ಮೊಬೈಲ್ ನಂಬರ್ ಮಾತ್ರ ದೊರೆಯಿತು.

ಕೇವಲ ಮೊಬೈಲ್ ನಂಬರ್ ವಿಳಾಸ ಹಾಗೂ ಅದರ ಟವರ್ ಲೋಕೇಶನ್ ಜಾಡು ಹಿಡಿದು ಪೊಲೀಸರ ತಂಡ ದೆಹಲಿ, ಉತ್ತರ ಪ್ರದೇಶ, ಉತ್ತರ ಖಂಡ ರಾಜ್ಯಗಳಲ್ಲಿ ಕಾರ್ಯಾಚರಣೆ ನಡೆಸಿತು. ಕೊನೆಗೆ ಉತ್ತರ ಪ್ರದೇಶದ ಗಾಜಿಯಾಬಾದ್‌ನಲ್ಲಿ ಟವರ್ ಲೋಕೇಶನ್ ಲಭ್ಯವಾದಾಗ 10 ದಿನಗಳ ಕಾಲ ಆ ವ್ಯಾಪ್ತಿಯಲ್ಲೇ ಬೀಡು ಬಿಟ್ಟಿದ್ದ ಇನ್ಸ್‌ಪೆಕ್ಟರ್ ಹರೀಶ್ ನೇತೃತ್ವದ ತಂಡ ಕೊನೆಗೂ ಮೇ 29ರಂದು ಡಕಾಯಿತರಲ್ಲೊಬ್ಬನಾದ ದೀಪಕ್ ತೋಮರ್‌ನನ್ನು ಬಂಧಿಸುವಲ್ಲಿ ಯಶಸ್ವಿಯಾಯಿತು. ನಂತರ ಸ್ಥಳೀಯ ನ್ಯಾಯಾಲಯಕ್ಕೆ ಹಾಜರುಪಡಿಸಿ ತಮ್ಮ ವಶಕ್ಕೆ ಪಡೆದ ಮದ್ದೂರು ನ್ಯಾಯಾಲಯದಲ್ಲೂ ಹಾಜರು ಪಡಿಸಿ ಹೆಚ್ಚಿನ ವಿಚಾರಣೆಗಾಗಿ 3 ದಿನಗಳ ಕಾಲ ತಮ್ಮ ವಶಕ್ಕೆ ಪಡೆದು ವಿಚಾರಣೆ ನಡೆಸಿ ಆತನಿಂದ ಇತರೆ ಆರೋಪಿಗಳ ಬಗ್ಗೆ ವಿವರಗಳನ್ನು ಪಡೆದಿದ್ದಾರೆ. ದರೋಡೆ ಮಾಡಿದ ಹಣ ಉಳಿದ ಆರೋಪಿಗಳ ಬಳಿ ಇರುವುದಾಗಿ ಸೆರೆ ಸಿಕ್ಕಿರುವ ದೀಪಕ್ ತೋಮರ್ ತಿಳಿಸಿದ್ದಾನೆ.

ಈ ಕಾರ್ಯಾಚರಣೆಯಲ್ಲಿ ಮದ್ದೂರು ಠಾಣೆ ಇನ್ಸ್‌ಪೆಕ್ಟರ್ ಹರೀಶ್ ನೇತೃತ್ವದಲ್ಲಿ ಮದ್ದೂರು ಸಂಚಾರ ಠಾಣೆ ಎಸ್‌ಐ ಐಯ್ಯನಗೌಡ, ಕಾನೂನು ಸುವ್ಯವಸ್ಥೆ ಎಸ್‌ಐ ಆರ್.ಬಿ.ಉಮೇಶ್, ಅಪರಾಧ ವಿಭಾಗದ ಎಸ್‌ಐ ಪಿ.ರವಿ. ಬೆಸಗರಹಳ್ಳಿ ಠಾಣೆ ಎಸ್‌ಐ ಮಹೇಶ್, ಸಿಬ್ಬಂದಿಗಳಾದ ಮಹೇಶ್, ರಿಯಾಜ್ ಪಾಷ, ಗುರು ಪ್ರಸಾದ್, ಪ್ರಶಾಂತ್, ಓಂಕಾರಪ್ಪ, ಶರತ್, ಗಿರೀಶ್, ಜಿಲ್ಲಾ ಪೊಲೀಸ್ ಕಚೇರಿಯ ತಾಂತ್ರಿಕ ವಿಭಾಗದ ರವಿಕಿರಣ್ ಮತ್ತು ಲೋಕೇಶ್ ಭಾಗವಹಿಸಿದ್ದರು. ಈ ತಂಡದ ಸಾಹಸ ಕಾರ್ಯವನ್ನು ಜಿಲ್ಲಾ ಎಸ್ಪಿ ಎನ್.ಯತೀಶ್ ಶ್ಲಾಘಿಸಿದ್ದಾರೆ.

ಅರಣ್ಯಾಧಿಕಾರಿಗಳಿಂದ ಮರಗಳಿಗಿಲ್ಲ ಉಳಿಗಾಲ

ಚಾಮರಾಜನಗರ, ಜೂ.10– ಕಾಯುವವರೇ ಕೊಂದರೆ ರಕ್ಷಿಸುವವರು ಯಾರು? ಇದು ಅರಣ್ಯಾಧಿಕಾರಿಗಳಿಂದಲೇ ಹನನವಾದ ಹಳೆಯ ಮರಗಳ ಅಂತಿಮ ನುಡಿ.



ಬಿಳಿಗಿರಿ ರಂಗನಾಥ ಟೆಂಪಲ್(ಬಿಆರ್‌ಟಿ) ಹುಲಿ ಸಂರಕ್ಷಿತ ಪ್ರದೇಶ ವಲಯ ಅರಣ್ಯಾಧಿಕಾರಿಗಳ ಕಚೇರಿ ಸುತ್ತಲೂ ಕಾಂಪೌಂಡ್ ನಿರ್ಮಿಸಲಾಗುತ್ತಿದೆ. ಇದಕ್ಕಾಗಿ ಸುಮಾರು ಏಳೆಂಟು ದಶಕಗಳ ಹಳೆಯದಾದ ಹಲವು ಮರಗಳನ್ನು ನಿರ್ದಾಕ್ಷಿಣ್ಯವಾಗಿ ಕಡಿದುರುಳಿಸಲಾಗಿದೆ. ಇನ್ನೂ ಅನೇಕ ಮರಗಳ ಹನನಕ್ಕಾಗಿ ಯೋಜನೆ ರೂಪಿಸಿದ್ದಾರೆಂದು ತಿಳಿದುಬಂದಿದೆ.

ಇದು ಬೇಲಿಯೇ ಎದ್ದು ಹೊಲ ಮೇಯ್ದಂತಾಯ್ತು. ಒಣಗಿ ಇನ್ನೇನು ಬೀಳಬಹುದಾದ ಮರ ಕಡಿಯಲು, ಅಪಾಯಕ್ಕೆ ಕಾರಣವಾಗಬಹುದಾದ ಒಂದು ಕೊಂಬೆ ತೆಗೆಯಲು ಅನುಮತಿಗಾಗಿ ಅರಣ್ಯಾಧಿಕಾರಿಗಳ ಬಳಿ ಅಲೆದಾಡಬೇಕು. ಮನವಿ ನೀಡಿ ಅದೆಷ್ಟೋ ದಿನಗಳ ನಂತರ ಅನುಮತಿ ನೀಡಬಹುದು ಇಲ್ಲವೇ ಆ ಪತ್ರವೇ ಕಸದ ಬುಟ್ಟಿ ಸೇರಬಹುದು. ಆದರೆ ಇಲಾಖೆ ಅಧಿಕಾರಿಯೊಬ್ಬರ ಕಚೇರಿ ಕಾಂಪೌಂಡ್ ನಿರ್ಮಾಣಕ್ಕಾಗಿ ಹಳೆಯ ಮರಗಳನ್ನು ಕತ್ತರಿಸಿ ಹಾಕಿರುವುದು ಯಾವ ನ್ಯಾಯ? ಎಂದು ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.





ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನಪರಿಷತ್ ಚುನಾವಣೆ ಬಿಜೆಪಿ ಅಭ್ಯರ್ಥಿ ಎಂ.ವಿ.ರವಿಶಂಕರ್ ಪರ ಪ್ರವಾಸೋದ್ಯಮ ನಿಗಮದ ಅಧ್ಯಕ್ಷ ಕಾಪು ಸಿದ್ದಲಿಂಗಸ್ವಾಮಿ, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮೈಮುಲ್ ನಿರ್ದೇಶಕ ಎಸ್.ಸಿ.ಅಶೋಕ್ ಮತ್ತಿತರರು ವರುಣಾ ಕ್ಷೇತ್ರದ ಸುತ್ತೂರು ಹಾಗೂ ಹೊಸಕೋಟೆ ಶಾಲೆಗಳಲ್ಲಿ ಮತಯಾಚಿಸಿದರು. ಜೆಎಸ್‌ಎಸ್ ಶಾಲೆ ಪ್ರಾಂಶುಪಾಲ ತ್ರಿಪುರಾಂತಕ ಹಾಗೂ ಅಧ್ಯಾಪಕ ವೃಂದದವರು ಚಿತ್ರದಲ್ಲಿದ್ದಾರೆ.

ನಾಡಗೀತೆ ಅವಧಿ ಇಳಿಕೆ ವಿಚಾರ

15 ದಿನಗಳಲ್ಲಿ ಸರ್ಕಾರ ನಿರ್ಧಾರ

ಬೆಂಗಳೂರು, ಜೂ.10– ನಾಡಗೀತೆ ಅವಧಿ ಮೊಟಕುಗೊಳಿಸುವ ಕುರಿತು ರಾಜ್ಯ ಸರ್ಕಾರ 15 ದಿನಗಳ ಒಳಗಾಗಿ ನಿರ್ಧಾರ ಪ್ರಕಟಿಸಲಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ವಿ.ಸುನಿಲ್ ಕುಮಾರ್ ಹೇಳಿದ್ದಾರೆ.




ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾಡಗೀತೆ ಅವಧಿ ಮೊಟಕುಗೊಳಿಸುವ ಕುರಿತು ಅನಂತಸ್ವಾಮಿ ಹಾಗೂ ಸಿ.ವಿಶ್ವನಾಥ್ ನೇತೃತ್ವದ ಎರಡು ಸಮಿತಿಗಳು ಒಂದೇ ರೀತಿಯ ಅಭಿಪ್ರಾಯ ಹಾಗೂ ಶಿಫಾರಸುಗಳನ್ನು ನೀಡಿದೆ. 2.40 ನಿಮಿಷಗಳಲ್ಲಿ ನಾಡಗೀತೆ ಪೂರ್ಣಗೊಳ್ಳಲಿದೆ. ಈ ಕುರಿತು ಸುದೀರ್ಘ ಚರ್ಚೆಗಳು ನಡೆಯುತ್ತಿವೆ ಎಂದು ಹೇಳಿದರು.

ಈ ಕುರಿತು ಪ್ರತಿಕ್ರಿಯಿಸಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ, ಕೆಲ ಪದಗಳ ತೆಗೆದರೂ ಪರವಾಗಿಲ್ಲ. ಪದಗಳು ಪದೇ ಪದೆ ಪುನರಾವರ್ತನೆಗೊಳ್ಳುವುದು ಬೇಡ. ಪುವರಾವರ್ತನೆಗಳು ಹಾಗೂ ಟ್ಯೂನ್‌ಗಳ ತೆಗೆದು ಹಾಕಿದರೆ ನಾಡಗೀತೆ 2.30 ನಿಮಿಷಕ್ಕೆ ಕಡಿಮೆಯಾಗಲಿದೆ. ರಾಗಗಳು ಹಾಳಾಗುವುದನ್ನು ತಪ್ಪಿಸಲು ನಾಡಗೀತೆಯನ್ನು ವೇಗವಾಗಿ ಹಾಡುವ ಅಗತ್ಯವೂ ಇಲ್ಲ ಎಂದು ಹೇಳಿದರು.

ನಾಡಗೀತೆ ಹಾಡುವಂತೆ ಜನರಿಗೆ ವೆಬ್‌ಸೈಟ್ ಮೂಲಕ ಮನವಿ ಮಾಡಿಕೊಳ್ಳಲಾಗಿದ್ದು, ಈ ಮೂಲಕ ಕೆಲವು ಅಭಿಪ್ರಾಯಗಳನ್ನು, ಅನುಭವಗಳನ್ನು ಪಡೆದುಕೊಳ್ಳಲಾಗುತ್ತಿದೆ ಜನರು 2.30 ನಿಮಿಷಗಳಲ್ಲಿ ನಾಡಗೀತೆ ಹಾಡುತ್ತಿದ್ದಾರೆಂದು ತಿಳಿಸಿದ್ದಾರೆ. ಈ ಹಿಂದೆ, ಪ್ರಾಧಿಕಾರದ ಸದಸ್ಯರು ಮತ್ತು ಕೆಲವು ತಜ್ಞರು ನಾಡ ಗೀತೆಯನ್ನು 2.10– 2.15 ನಿಮಿಷಗಳಿಗೆ ಕಡಿಮೆ ಮಾಡಲು ಶಿಫಾರಸು ಮಾಡಿದ್ದರು. ಈ ಶಿಫಾರಸ್ಸನ್ನು ಹಲವು ಒಪ್ಪಿಕೊಂಡಿದ್ದಾರೆ.

ವೃದ್ಧೆ ನಾಪತ್ತೆ



ಮೈಸೂರು, ಜೂ.10–ಕಳೆದ ಜೂನ್ 1 ರಂದು ಬೆಳಗ್ಗೆ 9 ಗಂಟೆಗೆ ಮೈಸೂರಿನ ಬೆಲವತ್ತ ನಿವಾಸಿ ದಿವಂಗತ ಚಿನ್ನಪ್ಪ ಅವರ ಪತ್ನಿ ಸಣ್ಣಮ್ಮ(90) ಅವರು ಮನೆಯಿಂದ ಹೊರ ಹೋದವರು ವಾಪಸ್ಸಾಗಿಲ್ಲ. ಇವರು 4 ಅಡಿ ಎತ್ತರವಿದ್ದು, ಗುಂಡಗಿನ ಮುಖ, ತೆಳು ಶರೀರ, ಕನ್ನಡ, ತಮಿಳು ಮಾತನಾಡಲಿದ್ದು, ಮನೆಯಿಂದ ಹೋಗುವಾಗ ಕೆಂಪು ಸ್ಯಾರಿ ಧರಿಸಿದ್ದಾರೆ. ಇವರ ಬಗ್ಗೆ ಮಾಹಿತಿ ಇದ್ದಲ್ಲಿ ಮೇಟಗಳ್ಳಿ ಪೊಲೀಸ್ ಠಾಣೆ, ದೂರವಾಣಿ: 0821–2418115 ಅಥವಾ ಕಂಟ್ರೋಲ್ ರೂಂ. ದೂರವಾಣಿ: 0821–2418339 ಸಂಪರ್ಕಿಸಲು ಕೋರಲಾಗಿದೆ.

ಮೂರನೇ ಪುಟದಿಂದ

ಲೆಹರ್‌ಸಿಂಗ್, ಜೈರಾಮ್ ರಮೇಶ್

ತೆಗೆದುಕೊಂಡ ವಿಧಾನ ಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ತಮ್ಮ ಎರಡನೇ ಅಭ್ಯರ್ಥಿ ಸೋತರೂ ಸರಿ, ಕುಮಾರಸ್ವಾಮಿ ಅಭ್ಯರ್ಥಿ ಸೋತರು ಎಂದು ನಗೆಬೀರಿದ್ದಾರೆ. ವಿಧಾನಸಭೆ ಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಇಂದು ನಡೆದ ದ್ವೈವಾರ್ಷಿಕ ಚುನಾವಣೆಯಲ್ಲಿ ಬಿಜೆಪಿಯ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ (46), ಚಿತ್ರನಟ ಜಗ್ಗೇಶ್ (44) ಹಾಗೂ ಉದ್ಯಮಿ ಲೆಹರ್‌ಸಿಂಗ್ ಸಿರೋಯಾ (33) ಪ್ರಥಮ ಪ್ರಾಶಸ್ತ್ಯದ ಮತ ಪಡೆದರು. ಇವರಲ್ಲಿ ನಿರ್ಮಲಾ ಸೀತಾರಾಮನ್ ಮತ್ತು ಜಗ್ಗೇಶ್ ನಿರಾಯಾಸವಾಗಿ ಗೆಲುವು ಸಾಧಿಸಿದ್ದು, ಲೆಹರ್‌ಸಿಂಗ್ ಎರಡನೇ ಪ್ರಾಶಸ್ತ್ಯದ ಮತಗಳಿಂದ ವಿಜಯದ ನಗೆ ಬೀರಿದರು. ಕಾಂಗ್ರೆಸ್‌ನ ಜೈರಾಮ್ ರಮೇಶ್ ನಿರೀಕ್ಷೆಯಂತೆ 46 ಮತ ಪಡೆದು ರಾಜ್ಯದಿಂದ ಎರಡನೇ ಬಾರಿಗೆ ರಾಜ್ಯಸಭೆ ಪ್ರವೇಶಿಸಿದ್ದರೆ, ನಾಲ್ಕನೇ ಸ್ಥಾನಕ್ಕೆ ಪೈಪೋಟಿ ನಡೆಸಿದ ಜೆಡಿಎಸ್‌ನ ಕುಪೇಂದ್ರ ರೆಡ್ಡಿ 30 ಮತ ಪಡೆದು ಸೋಲನುಭವಿಸಿದರೆ, ಕಾಂಗ್ರೆಸ್‌ನ ಮನ್ಸೂರ್ ಅಲಿ ಖಾನ್ ನಾಲ್ಕನೇ ಸ್ಥಾನಕ್ಕೆ ಸ್ಪರ್ಧಿಸಿ ಕೇವಲ 26 ಮತಗಳನ್ನು ಪಡೆದು ಜೆಡಿಎಸ್‌ನ ಗೆಲುವಿಗೆ ಅಡ್ಡಲಾಗಿದ್ದಲ್ಲದೆ, ಬಿಜೆಪಿಯ ಮೂರನೇ ಅಭ್ಯರ್ಥಿ ಆಯ್ಕೆಗೊಳ್ಳಲು ಸಹಕರಿಸಿದರು.

ವಿಧಾನಸಭೆಯಲ್ಲಿ ಜೆಡಿಎಸ್ 32 ಸದಸ್ಯ ಬಲ ಹೊಂದಿತ್ತು. ಆ ಪಕ್ಷದ ಕೋಲಾರ ಕ್ಷೇತ್ರದ ಶಾಸಕ ಶ್ರೀನಿವಾಸಗೌಡ ವಿಪ್ ಉಲ್ಲಂಘಿಸಿ ಕಾಂಗ್ರೆಸ್ ಅಭ್ಯರ್ಥಿಗೆ ಮತ ನೀಡಿದರು. ಆದರೆ ಜೆಡಿಎಸ್‌ನ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ, ಅರಸೀಕೆರೆ ಕ್ಷೇತ್ರದ ಶಾಸಕ ಶಿವಲಿಂಗೇಗೌಡ ಹಾಗೂ ಗುಬ್ಬಿ ಕ್ಷೇತ್ರದ ಶಾಸಕ ಶ್ರೀನಿವಾಸ್ ತಮ್ಮ ನಾಯಕರ ಬಗ್ಗೆ ಅಸಮಾಧಾನವಿದ್ದರೂ ಪಕ್ಷದ ಅಭ್ಯರ್ಥಿಗೆ ಮತ ಚಲಾಯಿಸಿದರು. ಜೆಡಿಎಸ್ ಶಾಸಕರು ಚಲಾಯಿಸಿರುವ ಮತಗಳ ಪೈಕಿ 1 ಮತ ಕುಲಗೆಟ್ಟದ್ದಾಗಿದ್ದು, ಇದನ್ನು ಗುಬ್ಬಿ ಶ್ರೀನಿವಾಸ್ ಅವರೇ ಚಲಾಯಿಸಿದ್ದಾರೆ ಎಂಬ ಅನುಮಾನ ವ್ಯಕ್ತವಾಗಿದೆ.

ವಿಧಾನಸಭೆಯಲ್ಲಿ 120 ಸದಸ್ಯ ಬಲ ಹೊಂದಿರುವ ಬಿಜೆಪಿಗೆ ಮೂವರು ಪಕ್ಷೇತರರು ಬೆಂಬಲ ನೀಡಿದ್ದರಿಂದ ಮೂರನೇ ಅಭ್ಯರ್ಥಿ ಗೆಲುವಿಗೆ ಸಹಕಾರಿಯಾಯಿತು. ಬಿಎಸ್‌ಪಿ ಎನ್. ಮಹೇಶ್, ಪಕ್ಷೇತರ ಸದಸ್ಯ ನಾಗೇಶ್ ಬಿಜೆಪಿ ಕೈ ಹಿಡಿದರೆ, ಶರತ್ ಬಚ್ಚೇಗೌಡ ಕಾಂಗ್ರೆಸ್ ಅಭ್ಯರ್ಥಿಗೆ ಮತಚಲಾಯಿಸಿದರು. ಇತ್ತೀಚೆಗಷ್ಟೇ ಶರತ್ ಬಚ್ಚೇಗೌಡ ಬಿಜೆಪಿಯ ಸಹ ಸದಸ್ಯತ್ವ ಪಡೆದಿದ್ದರು. ತಮ್ಮ ಮತವನ್ನು ಬಿಜೆಪಿಯ ಲೆಹರ್‌ಸಿಂಗ್‌ಗೆ ಚಲಾವಣೆ ಮಾಡಿದ್ದಾರೆ. ಚುನಾವಣೆಯಲ್ಲಿ ಜೆಡಿಎಸ್ ಗೆಲ್ಲದಂತೆ ನೋಡಿಕೊಳ್ಳಬೇಕು. ಆ ಮೂಲಕ ಕಾಂಗ್ರೆಸ್ ಪಕ್ಷವೇ ಬಿಜೆಪಿಗೆ ಪರ್ಯಾಯ ಶಕ್ತಿ ಎಂದು ತೋರಿಸಲು ಕಾಂಗ್ರೆಸ್ ನಾಯಕ ಸಿದ್ಧರಾಮಯ್ಯ ಹೂಡಿದ ತಂತ್ರ ಬಿಜೆಪಿಯ ಮೂರನೇ ಅಭ್ಯರ್ಥಿ ನಿರಾಯಾಸವಾಗಿ ಗೆಲ್ಲಲು ದಾರಿ ಮಾಡಿಕೊಟ್ಟಿತು.

ಅಡ್ಡ ಮತದಾನ ಮಾಡಿದ ಜೆಡಿಎಸ್‌ನ ಶ್ರೀನಿವಾಸಗೌಡ ಹಿಂದೆ ಕಾಂಗ್ರೆಸ್‌ನಲ್ಲಿದ್ದಾಗ ಸಚಿವನಾಗಿದ್ದೆ. ಈಗಲೂ ಆ ಪಕ್ಷವನ್ನು ಪ್ರೀತಿಸುತ್ತೇನೆ. ಮತ್ತು ಇಂದು ಮತದಾನ ಮಾಡುವಾಗ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗೇ ಮತ ಕೊಟ್ಟಿದ್ದೇನೆ ಎಂದು ಬಹಿರಂಗವಾಗಿ ಹೇಳಿದರು. ಇದರಿಂದ ಕುಮಾರಸ್ವಾಮಿ ಸಿಟ್ಟು ಮಾಡಿಕೊಳ್ಳುವುದಾದರೆ ಮಾಡಿಕೊಳ್ಳಲಿ, ರಾಜಕೀಯದಲ್ಲಿ ಅದು ಕಾಮನ್ ಎಂದರು. ಈ ಮಧ್ಯೆ ಪಕ್ಷದ ಅಭ್ಯರ್ಥಿಯ ವಿರುದ್ಧವಾಗಿ ಕಾಂಗ್ರೆಸ್‌ಗೆ ಮತ ನೀಡಿದ ಶಾಸಕ ಶ್ರೀನಿವಾಸ ಗೌಡ ಅವರ ಬಗ್ಗೆ ಕೆಂಡಾಮಂಡಲರಾದ ಕುಮಾರಸ್ವಾಮಿ ನಾಚಿಕೆ, ಮಾನ-ಮರ್ಯಾದೆ ಇದ್ದರೆ ಜೆಡಿಎಸ್ ಕಾರ್ಯಕರ್ತರ ಬೆಂಬಲದಿಂದ ಗೆದ್ದ ಶ್ರೀನಿವಾಸಗೌಡ, ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಕಾಂಗ್ರೆಸ್ ಕಡೆ ಹೋಗಬೇಕಿತ್ತು ಎಂದರು. ನಮ್ಮ ಪಕ್ಷದ ಒಬ್ಬರ ಮತವನ್ನು ಹಾಕಿಸಿಕೊಂಡು ಕಾಂಗ್ರೆಸ್ ಪಕ್ಷಕ್ಕಾದ ಲಾಭವೇನು ಎಂದು ಪ್ರಶ್ನಿಸಿದ ಅವರು, ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸಲೇ ಬೇಕೆಂಬ ಸಿದ್ದರಾಮಯ್ಯ ಅವರ ಉದ್ದೇಶ ಇಡೀ ನಾಡಿಗೆ ಅರಿವಾಗಿದೆ ಎಂದರು.

ಜನರೇ ತೀರ್ಮಾನಿಸುತ್ತಾರೆ

ಅವರು ಸಮಕಾಲೀನರು. ನಮ್ಮ ತಂದೆ 28 ವರ್ಷ ಕಾಂಗ್ರೆಸ್ ಮುಖಂಡರಾಗಿದ್ದವರು. ಕುಮಾರ ಸ್ವಾಮಿ ಅವರಷ್ಟೇ ರಾಜಕೀಯ ಅನುಭವ ನನಗೂ ಇದೆ. ಯಾರೂ ಏನು ಮಾಡುತ್ತಿದ್ದಾರೆ ಎಂದು ಜನತೆ ನೋಡುತ್ತಲೆ ಇದ್ದಾರೆ ಎಂದರು. ಬೆಳಗ್ಗೆ ನಾನು ಖಾಲಿ ಬ್ಯಾಲೆಟ್ ಪೇಪರ್ ಹಾಕಿದ್ದೇನೆ ಎಂದು ಹೇಳಿದರು. ಅದು ಇಲ್ಲ ಎಂದಾದ ಮೇಲೆ ಬಿಜೆಪಿಗೆ ಮತ ಹಾಕಿದ್ದೇನೆ ಎಂದು ಹೇಳುತ್ತಿದ್ದಾರೆ. ಕುಮಾರಸ್ವಾಮಿ ಅವರ ಮಾತಿನಲ್ಲಿ ಸ್ವಲ್ಪವಾದರೂ ಸ್ಥಿರತೆ ಇದೆಯೇ? ಎಂದು ಪ್ರಶ್ನಿಸಿದರಲ್ಲದೇ ಗುಬ್ಬಿ ಮತದಾರರಲ್ಲಿ ನನಗೆ ಕೆಟ್ಟ ಹೆಸರು ತರಬೇಕೆಂಬ ಉದ್ದೇಶದಿಂದ ತೋಚಿದ್ದನ್ನೆಲ್ಲಾ ಮಾತನಾಡುತ್ತಿದ್ದಾರೆ. ಆದರೆ ಜನರು ಎಲ್ಲವನ್ನೂ ಅರಿತು ತೀರ್ಮಾನ ಕೈಗೊಳ್ಳುತ್ತಾರೆ ಎಂದು ಶ್ರೀನಿವಾಸ್ ಹೇಳಿದರು.

ಮರ್ಯಾದೆ ಇದ್ರೆ ರಾಜೀನಾಮೆ ಕೊಡ್ಲಿ

ಸಂಜೆ ಆ ಇಬ್ಬರು ಶಾಸಕರ ಬಣ್ಣ ಬಯಲಾಗುತ್ತೆ, ಖಾಲಿ ಬ್ಯಾಲೆಟ್ ಪೇಪರ್ ಮತಪೆಟ್ಟಿಗೆಗೆ ಹಾಕಿ ಬರ್ತಾರೆ. ಹೊರಗೆ ಬಂದು ನಾನು ಜೆಡಿಎಸ್‌ಗೆ ಮತ ಹಾಕಿದ್ದೀನಿ ಅಂತಾರೆ, ಅವರನ್ನು ಮಂತ್ರಿ ಮಾಡಿದ್ದೇ ದೊಡ್ಡ ಅನ್ಯಾಯ ಎಂದು ಗುಬ್ಬಿ ಶ್ರೀನಿವಾಸ್ ಮೇಲೆ ಹೆಚ್‌ಡಿಕೆ ವಾಗ್ದಾಳಿ ನಡೆಸಿದ್ದಾರೆ. ಈ ಇಬ್ಬರು ಶಾಸಕರಿಗೆ ಜನರೇ ಬುದ್ಧಿ ಕಲಿಸ್ತಾರೆ, ಆಗ 8 ಜನರ ಕ್ರಾಸ್ ವೋಟ್ ಮಾಡಿಸಿ ಗೆಲ್ಲಿಸಿಕೊಂಡ್ರಲ್ಲಾ, ಇವತ್ತು ರಾಮಮೂರ್ತಿ ನಿಮ್ಮ ಜೊತೆ ಇದ್ದಾರಾ ಇವತ್ತು ಬಿಜೆಪಿ ಗೆದ್ದರೆ ಕಾಂಗ್ರೆಸ್‌ನಿಂದಲೇ, ನಮ್ಮನ್ನು ಬಿಜೆಪಿ ಬಿ-ಟೀಮ್ ಎಂದ ನಿಮ್ಮ ಬಣ್ಣ ಬಯಲಾಗಿದೆ. ಶ್ರೀನಿವಾಸ್ ಗೌಡಗೆ ಮಾನ ಮರ್ಯಾದೆ ಇದ್ರೆ ರಿಸೈನ್ ಮಾಡ್ಲಿ, ಶಾಸಕರ ಹೈಜಾಕ್ ಮಾಡೋ ಸಿದ್ದು ನಿಮಗೆ ನೈತಿಕತೆ ಇದೆಯಾ ಎಂದು ಸಿದ್ದರಾಮಯ್ಯ ವಿರುದ್ಧ ಕೂಡ ಕುಮಾರಸ್ವಾಮಿ ಆಕ್ರೋಶ ಹೊರ ಹಾಕಿದರು.

ಜೋತು ಬಿದ್ದಿದ್ದ ಕೇಬಲ್‌ಗಳಿಗೆ ಸರ್ಜರಿ

ವಿನೋಬಾ ರಸ್ತೆ, ನಾರಾಯಣಶಾಸ್ತ್ರಿ ರಸ್ತೆ, ಡಿ.ಸುಬ್ಬಯ್ಯ ರಸ್ತೆ ಸೇರಿದಂತೆ ವಿವಿಧ ರಸ್ತೆಗಳಲ್ಲಿ ಕಾರ್ಯಾಚರಣೆ ನಡೆಸಿ, ಕಂಬದಿಂದ ಕಂಬಕ್ಕೆ ಅಳವಡಿಸಲಾಗಿದ್ದ ಟಿವಿ ಕೇಬಲ್ ಹಾಗೂ ಇಂಟರ್‌ನೆಟ್ ಕೇಬಲ್ ವೈರ್‌ಗಳನ್ನು ತುಂಡರಿಸಿದರು. ನಗರದಲ್ಲಿ ಸಾವಿರಾರು ವಿದ್ಯುತ್ ಕಂಬಗಳಲ್ಲಿ ಹೀಗೆ ಕೇಬಲ್ ವೈರ್‌ಗಳನ್ನು ಅಳವಡಿಸಲಾಗಿದ್ದು, ಕೆಲವರನ್ನು ಹೊರತುಪಡಿಸಿ ಬಹುತೇಕರು ನಿಗಧಿತ ಶುಲ್ಕ ಪಾವತಿಸದೆ ಅಕ್ರಮವಾಗಿ ಕಂಬಗಳನ್ನು ತಮ್ಮ ಲಾಭಕ್ಕಾಗಿ ಬಳಸಿಕೊಂಡಿದ್ದಾರೆ. ಇಂತಹ 49 ಕೇಬಲ್ ನೆಟ್‌ವರ್ಕ್‌ದಾರರಿಗೆ ಒಂದು ತಿಂಗಳ ಹಿಂದೆಯೇ ನೋಟಿಸ್ ನೀಡಿ, ನಿಗಧಿತ ಶುಲ್ಕ ಪಾವತಿಗೆ ಗಡುವು ನೀಡಿ, ಎಚ್ಚರಿಕೆ ನೀಡಲಾಗಿತ್ತು.

ಶುಲ್ಕ ಎಷ್ಟು?: ನಗರ ಪ್ರದೇಶದಲ್ಲಿ ಒಂದು ಕಂಬಕ್ಕೆ 150 ರೂ. ಹಾಗೂ ಗ್ರಾಮೀಣ ಪ್ರದೇಶಲ್ಲಿ 100 ರೂ. ದರ ನಿಗಧಿ ಮಾಡಲಾಗಿದ್ದು, ಯಾವುದೇ ಕೇಬಲ್ ವೈರ್‌ಗಳನ್ನು ವಿದ್ಯುತ್ ಕಂಬಕ್ಕೆ ಅಳವಡಿಸುವ ಮುನ್ನ ಸೆಸ್ಕ್‌ಗೆ ಶುಲ್ಕ ಪಾವತಿಸಬೇಕಾಗಿದೆ. ಇದರಿಂದ ಸೆಸ್ಕ್‌ಗೆ(ಮೈಸೂರು ವಿಭಾಗದಲ್ಲಿ) ವಾರ್ಷಿಕ 50 ಕೋಟಿ ರೂ.ಗಿಂತ ಹೆಚ್ಚಿನ ಆದಾಯ ನಿರೀಕ್ಷಿಸಲಾಗಿದೆ. ಆದರೆ ಇದುವರೆಗೆ ಕೇಬಲ್‌ದಾರರು ನಿಗಧಿತ ಸಮಯದಲ್ಲಿ ಶುಲ್ಕ ಪಾವತಿಸುವುದಕ್ಕೆ ಹಿಂದೇಟು ಹಾಕುತ್ತಿದ್ದರು.

70 ತಂಡ: ಮೈಸೂರು ನಗರದಲ್ಲಿ ಶುಲ್ಕ ಪಾವತಿಸದ ಕೇಬಲ್ ವೈರ್‌ಗಳನ್ನು ತುಂಡರಿಸಲು ಮೈಸೂರಿನ ಕೇಂದ್ರ ಹಾಗೂ ಎನ್.ಆರ್.ಮೊಹಲ್ಲಾ ವಿಭಾಗದ ವ್ಯಾಪ್ತಿಗೆ ಬರುವ ಡಿ.ದೇವರಾಜ ಅರಸ್ ರಸ್ತೆ, ಚಾಮರಾಜ ಜೋಡಿ ರಸ್ತೆ, ಜೆಎಲ್‌ಬಿ ರಸ್ತೆ, ಶಿವರಾಮ ಪೇಟೆ, ವಿನೋಬಾ ರಸ್ತೆ, ಶಿವಾಜಿ ರಸ್ತೆ, ಬನ್ನಿಮಂಟಪ, ಹನುಮಂತನಗರ, ಎನ್.ಆರ್. ಮೊಹಲ್ಲಾ ಸೇರಿದಂತೆ ವಿವಿಧೆಡೆ ಕಾರ್ಯಾಚರಣೆ ನಡೆಸಲು ಅಧಿಕಾರಿಗಳ ನೇತೃತ್ವದ 70 ತಂಡ ರಚಿಸಲಾಗಿದೆ. ಈಗಾಗಲೇ ಕಾರ್ಯಾಚರಣೆ ಆರಂಭಿಸಿರುವ ತಂಡಗಳು, ಇನ್ನೆರಡು ದಿನದಲ್ಲಿ ಕೇಬಲ್‌ಗಳ ಸರ್ಜರಿ ಪೂರ್ಣಗೊಳಿಸುವ ಸಾಧ್ಯತೆ ಇದೆ.

ಕೇಬಲ್‌ದಾರರಿಗೆ ನಷ್ಟ: ಈ ಕಾರ್ಯಾಚರಣೆಯಿಂದಾಗಿ ಕೇಬಲ್ ನೆಟ್‌ವರ್ಕ್‌ದಾರರಿಗೆ ಭಾರೀ ನಷ್ಟವಾಗುತ್ತಿದೆ. ಮತ್ತೆ ಹೊಸದಾಗಿ ಸಂಪರ್ಕ ನೀಡಬೇಕಾದರೆ ಹೊಸ ವೈರ್ ಅಳವಡಿಸಬೇಕಾದ ಅನಿವಾರ್ಯತೆ ಬಂದೊದಗಿದೆ. ವೈರ್‌ಗಳನ್ನು ಮರು ಜೋಡಣೆ ಮಾಡುವುದಕ್ಕೂ ಆಗದ ರೀತಿ ಕತ್ತರಿಸಿರುವುದರಿಂದ ಹೊಸ ವೈರ್‌ಗೆ ಲಕ್ಷಾಂತರ ರೂ. ಭರಿಸಬೇಕಿದೆ.

ಅವೈಜ್ಞಾನಿಕ ಕಾರ್ಯಾಚರಣೆ: ವಿದ್ಯುತ್ ಕಂಬದಲ್ಲಿದ್ದ ಕೇಬಲ್ ವೈರ್‌ಗಳನ್ನು ತುಂಡರಿಸಿ ಕೆಳಗೆ ಬಿಸಾಡುತ್ತಿದ್ದು, ಇವು ಪಾದಚಾರಿ ಮಾರ್ಗದಲ್ಲಿ ಎಲ್ಲೆಂದರಲ್ಲಿ ಬಿದ್ದಿವೆ. ಇದರಿಂದ ಓಡಾಡುವ ಸಾರ್ವಜನಿಕರು ಎಡವಿ ಬೀಳುವ ಅಪಾಯವಿದೆ. ಅಲ್ಲದೆ ದ್ವಿಚಕ್ರ ವಾಹನಗಳ ಚಕ್ರಗಳಿಗೆ ಸುತ್ತಿಕೊಂಡರೆ ಅಪಘಾತ ಸಂಭವಿಸುವ ಸಾಧ್ಯತೆಯೂ ಇದೆ. ಹಾಗಾಗಿ ಕಾರ್ಯಾಚರಣೆ ಬೆನ್ನಲ್ಲೇ ವೈರ್‌ಗಳನ್ನು ತೆರವುಗೊಳಿಸುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

ಆಕ್ಷೇಪ: ವಿನೋಬಾ ರಸ್ತೆ ಹಾಗೂ ಶಿವರಾಮಪೇಟೆಯಲ್ಲಿ ಕೇಬಲ್ ವೈರ್‌ಗಳ ತುಂಡರಿಸುವಾಗ ಸ್ಥಳೀಯರು ಹಾಗೂ ಮಳಿಗೆದಾರರು ಆಕ್ಷೇಪ ವ್ಯಕ್ತಪಡಿಸಿದರು. ಇಂಟರ್‌ನೆಟ್ ವೈರ್ ಕಡಿತಗೊಳಿಸಿದರೆ ಕಚೇರಿ ಕೆಲಸ ಸ್ಥಗಿತಗೊಳ್ಳುತ್ತದೆ, ಕಾಲಾವಕಾಶ ನೀಡಿ ಎಂದು ಒತ್ತಾಯಿಸಿದರು. ಕೇಬಲ್ ಅಳವಡಿಸಿರುವವರು ವೈರ್‌ಗಳನ್ನು ತುಂಡರಿಸದಂತೆ ಮನವಿ ಮಾಡಿದರು. ಆದರೆ, ಸೆಸ್ಕ್ ಸಿಬ್ಬಂದಿ ಯಾವುದಕ್ಕೂ ಕಿವಿಗೊಡದೆ ಕಾರ್ಯಾಚರಣೆ ಮುಂದುವರೆಸಿದರಲ್ಲದೆ, ಕೆಲಸಕ್ಕೆ ಅಡ್ಡಿ ಮಾಡಿದರೆ ಕಾನೂನು ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಿದರು.

ಬೆಂಗಳೂರಿನಲ್ಲಿ ಮತ್ತೊಂದು ಆಸಿಡ್ ಪ್ರಕರಣ

ಒತ್ತಾಯಿಸುತ್ತಿದ್ದ. ಆದರೆ, ಸಂತ್ರಸ್ತೆ ತನಗೆ ಮಕ್ಕಳಿದ್ದು, ವಿಚ್ಛೇದನ ಪಡೆದಿಲ್ಲ ಎಂದು ನಿರಾಕರಿಸಿದ್ದಾಳೆ. ಈ ವಿಚಾರವಾಗಿ ಅವರು ಹಲವು ಬಾರಿ ಜಗಳವಾಡಿದ್ದರು.

ಶುಕ್ರವಾರ ಬೆಳಿಗ್ಗೆ, ಅವರು ಕೆಲಸಕ್ಕೆ ಹೋಗುತ್ತಿರುವಾಗ ಒಬ್ಬರನ್ನೊಬ್ಬರು ಭೇಟಿಯಾಗಿದ್ದು, ಇದೇ ವೇಳೆ ಆರೋಪಿ ಮತ್ತೆ ಮದುವೆ ವಿಷಯವನ್ನು ಪ್ರಸ್ತಾಪಿಸಿದ್ದಾನೆ. ಆದರೆ ಮತ್ತೆ ಸಂತ್ರಸ್ತೆ ಅವನನ್ನು ಮದುವೆಯಾಗಲು ಸಾಧ್ಯವಿಲ್ಲ ಎಂದು ಹೇಳಿದ್ದು, ಇದರಿಂದ ಕುಪಿತನಾದ ಆರೋಪಿ ಕೂಡಲೇ ಬಾಟಲಿ ತೆಗೆದು ಟಾಯ್ಲೆಟ್ ಕ್ಲೀನಿಂಗ್ ಲಿಕ್ವಿಡ್‌ನಲ್ಲಿ ಆಸಿಡ್ ಬೆರೆಸಿ ಆಕೆಯ ಮುಖಕ್ಕೆ ಎರಚಿ ಪರಾರಿಯಾಗಿದ್ದಾನೆ. ದಾಳಿಯಿಂದಾಗಿ ಮಹಿಳೆಯ ಬಲಗಣ್ಣಿಗೆ ಹಾನಿಯಾಗಿದ್ದು, ದೃಷ್ಟಿ ಮಂದವಾಗಿದೆ. ಕೂಡಲೇ ಅಕ್ಕಪಕ್ಕದಲ್ಲಿದ್ದವರು ಆಕೆಯನ್ನು ನೇತ್ರ ಚಿಕಿತ್ಸಾಲಯಕ್ಕೆ ಕರೆದೊಯ್ದರು, ಅಲ್ಲಿ ಕಣ್ಣಿನಲ್ಲಿರುವ ಆಸಿಡ್ ಅನ್ನು ಸ್ವಚ್ಛಗೊಳಿಸಿ ದೃಷ್ಟಿ ಪುನಃಸ್ಥಾಪಿಸಲಾಯಿತು. ಬಳಿಕ ಆಕೆಯನ್ನು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಯಿತು. ಘಟನೆಯಲ್ಲಿ ಮಹಿಳೆಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಶೀಘ್ರದಲ್ಲೇ ಡಿಸ್ಚಾರ್ಜ್ ಆಗುವ ನಿರೀಕ್ಷೆಯಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆ ನಡೆದ ಕೂಡಲೇ ಕಾರ್ಯಾಚರಣೆಗಿಳಿದ ಪೊಲೀಸರು ಆರೋಪಿಯನ್ನು ಪಶ್ಚಿಮ ಬೆಂಗಳೂರಿನಲ್ಲಿರುವ ಆತನ ಮನೆಯಲ್ಲಿ ಬಂಧಿಸಿದ್ದಾರೆ. ಈ ಬಗ್ಗೆ ಹೆಚ್ಚಿನ ತನಿಖೆ ನಡೆಯುತ್ತಿದೆ.

ಅಧಿಕ ಬೆಲೆಗೆ ರಸಗೊಬ್ಬರ ಮಾರಾಟ: ಮಳಿಗೆ ರಹದಾರಿ ರದ್ದು

ರೈತರ ವಾಟ್ಸಾಪ್ ದೂರಿಗೆ ಕೃಷಿ ಇಲಾಖೆ ತ್ವರಿತ ಕ್ರಮ

ಮೈಸೂರು,ಜೂ.10(ಎಂಟಿವೈ)- ನಿಗಧಿತ ಬೆಲೆಗಿಂತ ಅಧಿಕ ಬೆಲೆಗೆ ರಸಗೊಬ್ಬರ ಮಾರಾಟ ಮಾಡುತ್ತಿದ್ದ ರಸಗೊಬ್ಬರ ಮಾರಾಟ ಮಳಿಗೆ ಮೇಲೆ ಕೃಷಿ ಇಲಾಖೆಯ ಅಧಿಕಾರಿಗಳು ದಾಳಿ ನಡೆಸಿ, ಪರವಾನಗಿ ರದ್ದು ಮಾಡಿದ್ದಾರೆ.

ಮುಂಗಾರು ಆರಂಭವಾಗಿರುವ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಕೃಷಿ ಚಟುವಟಿಕೆ ಆರಂಭವಾಗಿದ್ದು, ಕೆಲವು ವ್ಯಾಪಾರಿಗಳು ಅಧಿಕ ಬೆಲೆಗೆ ರಸಗೊಬ್ಬರ ಮಾರಾಟ ಮಾಡುತ್ತಿರುವ ಆರೋಪ ಕೇಳಿ ಬಂದ ಹಿನ್ನೆಲೆಯಲ್ಲಿ ಶುಕ್ರವಾರ ಬೆಳಗ್ಗೆ ತಾಲೂಕು ಸಹಾಯಕ ಕೃಷಿ ನಿರ್ದೇಶಕಿ ಡಾ.ಹೆಚ್.ಬಿ.ಮಧುಲತಾ, ಕೃಷಿ ಅಧಿಕಾರಿ ಪಿ.ಎನ್.ಜೀವನ್ ಮತ್ತು ಸಿ.ಎಂ.ಕಾರ್ತಿಕ್ ತಂಡ ಮೈಸೂರು ತಾಲೂಕಿನ ಜಯಪುರ ಹೋಬಳಿಯ ವಿವಿಧ ರಸಗೊಬ್ಬರ ಅಂಗಡಿಗಳಲ್ಲಿ ಪರಿಶೀಲನೆ ನಡೆಸಿದರು. ಈ ವೇಳೆ ಜಯಪುರ ಬಳಿಯ ಮೈಸೂರು ಅಗ್ರಿ ಕೇರ್ ರಸಗೊಬ್ಬರ ಮಾರಾಟ ಮಳಿಗೆಯಲ್ಲಿ ಒಂದು ಮೂಟೆ 10:26:26 ರಸಗೊಬ್ಬರಕ್ಕೆ 180 ರೂ. ಹೆಚ್ಚಾಗಿ ಪಡೆಯುತ್ತಿರುವುದು ಬೆಳಕಿಗೆ ಬಂತು. ಒಂದು ಮೂಟೆ 10:26:26



ಮೈಸೂರು ತಾಲೂಕಿನ ಜಯಪುರ ಹೋಬಳಿಯಲ್ಲಿ ನಿಗದಿಗಿಂತ ಹೆಚ್ಚು ಬೆಲೆಗೆ ರಸಗೊಬ್ಬರ ಮಾರಾಟ ಮಾಡುತ್ತಿದ್ದ ಮಳಿಗೆಯೊಂದರ ಮೇಲೆ ಕೃಷಿ ಅಧಿಕಾರಿಗಳು ದಾಳಿ ನಡೆಸಿ, ರಹದಾರಿ ರದ್ದುಪಡಿಸಿದ್ದಾರೆ.

ರಸಗೊಬ್ಬರಕ್ಕೆ 1470 ರೂ. ಬೆಲೆ ನಿಗಧಿಯಾಗಿದ್ದು, ಈ ಮಳಿಗೆಯಲ್ಲಿ 1650 ರೂ. ಪಡೆಯಲಾಗುತ್ತಿರುವುದು ಖಚಿತವಾದ ಹಿನ್ನೆಲೆಯಲ್ಲಿ ಪರವಾನಗಿಯನ್ನು ರದ್ದು ಮಾಡಲಾಯಿತು.

ವಾಟ್ಸಾಪ್ ದೂರಿಗೆ ಮನ್ನಣೆ: ರಸಗೊಬ್ಬರ ಮಾರಾಟ ಮಳಿಗೆಗಳಲ್ಲಿ ನಿಗದಿತ ಬೆಲೆಗಿಂತ ಹೆಚ್ಚಿನ ಬೆಲೆಗೆ ರಸಗೊಬ್ಬರ ಮಾರಾಟ ಮಾಡಿ ರೈತರಿಂದ ಸುಲಿಗೆ ಮಾಡಲಾಗುತ್ತಿದೆ ಎಂದು ಜಯಪುರ ಹೋಬಳಿಯ ಬರಡನಪುರ ಗ್ರಾಮದ ರೈತ ಮುಖಂಡ ನಾಗರಾಜು, ಕೃಷಿ ಇಲಾಖೆಯ ವಾಟ್ಸಾಪ್ ಗ್ರೂಪ್‌ನಲ್ಲಿ ಅಳಲು ತೋಡಿಕೊಂಡಿದ್ದರು. ನಾನು ಒಂದು ಮೂಟೆ 10:26:26 ರಸಗೊಬ್ಬರ ಖರೀದಿಸಿದ್ದೆ. ಅದಕ್ಕೆ 1650 ರೂ. ಸಂಗ್ರಹಿಸಿ, ಕಂಪ್ಯೂಟರ್‌ನಲ್ಲಿ ಮುದ್ರಿತ ಬಿಲ್ ನೀಡದೆ ಹಳದಿ ಬಣ್ಣದ ರಶೀದಿ ನೀಡಿದ್ದಾರೆ ಎಂದು ಆರೋಪಿಸಿದ್ದರು. ಈ ದೂರನ್ನು ಆಲಿಸಿ ಇಂದು ದಾಳಿ ನಡೆಸಿ, ನಿಗದಿತ ಬೆಲೆಗಿಂತ ಹೆಚ್ಚಿನ ಹಣ ಪಡೆದು ರಸಗೊಬ್ಬರ ಮಾರಾಟ ಮಾಡುತ್ತಿದ್ದುದನ್ನು ಖಚಿತಪಡಿಸಿಕೊಂಡು ಕ್ರಮ ಕೈಗೊಂಡಿದ್ದಾರೆ.

ನಿರ್ದಾಕ್ಷಿಣ್ಯ ಕ್ರಮ: ಈ ಕುರಿತು ತಾಲೂಕು ಸಹಾಯಕ ಕೃಷಿ ನಿರ್ದೇಶಕಿ ಡಾ.ಹೆಚ್.ಬಿ.ಮಧುಲತಾ ಮಾತನಾಡಿ, ಕೃಷಿ ಚಟುವಟಿಕೆಗೆ ಬೇಕಾದ ಯಾವುದೇ ವಸ್ತುಗಳನ್ನು ನಿಗದಿಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡಿದರೆ ಅಂತಹವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುತ್ತದೆ. ಮಳಿಗೆಗಳಲ್ಲಿ ದಾಸ್ತಾನಿರುವ ರಸಗೊಬ್ಬರಗಳ ವಿವರ, ಬಿತ್ತನೆ ಬೀಜ, ಕೀಟನಾಶಕಗಳ ಪ್ರಮಾಣ ಹಾಗೂ ಮಾರಾಟ ದರ ಮತ್ತು ಮಾರಾಟಗಾರರ ಲೈಸೆನ್ಸ್‌ಗಳನ್ನು ಗ್ರಾಹಕರಿಗೆ ಕಾಣುವಂತೆ ಕಡ್ಡಾಯವಾಗಿ ಪ್ರದರ್ಶಿಸಬೇಕು. ಅಲ್ಲದೇ ರೈತರು ಯಾವುದೇ ವಸ್ತುಗಳನ್ನು ಖರಿದಿಸಿದರೂ ಕಡ್ಡಾಯವಾಗಿ ರೈತರಿಗೆ ಬಿಲ್ ನೀಡಬೇಕೆಂದು ಸೂಚಿಸಿದರು.

ರೈತರು ತಾವು ಪಾವತಿಸುವ ಹಣಕ್ಕೆ ಬಿಲ್ ಕೇಳಿ ಪಡೆಯಬೇಕು. ರಸಗೊಬ್ಬರ ಖರೀದಿಸಿದಾಗ, ಖರೀದಿಸಿದ ಚೀಲಗಳನ್ನು ತೂಕ ಮಾಡಿ, ಖಾತ್ರಿ ಪಡಿಸಿಕೊಳ್ಳಬೇಕು. ತಯಾರಕರ ಹೆಸರು ಮತ್ತು ವಿಳಾಸ ರಸಗೊಬ್ಬರದ ಚೀಲದ ಮೇಲೆ ಮುದ್ರಿತವಾಗಿರಬೇಕು. ಕನಿಷ್ಠ ಶೇಕಡಾವಾರು ಪೋಷಕಾಂಶಗಳ ವಿವರವಿರಬೇಕು. ಗರಿಷ್ಠ ಮಾರಾಟ ಬೆಲೆ ನಮೂದಾಗಿ, ಗರಿಷ್ಠ ಮತ್ತು ನಿವ್ವಳ ತೂಕವಿರಬೇಕು. ರಸಗೊಬ್ಬರಗಳ ಮಿಶ್ರಣಗಳು, ಸಿಂಗಲ್ ಸೂಪರ್ ಫಾಸ್ಫೇಟ್, ಲಘು ಪೋಷಕಾಂಶಗಳು ಮತ್ತು ಅವುಗಳ ಮಿಶ್ರಣಗಳ ಚೀಲ ಅಥವಾ ಡಬ್ಬಗಳ ಮೇಲೆ ಬ್ಯಾಚ್ ಸಂಖ್ಯೆ ಮತ್ತು ನೊಂದಣಿ ಸಂಖ್ಯೆ ನಮೂದಿಸಿರಬೇಕು. ರಸಗೊಬ್ಬರವನ್ನು ಖರೀದಿಸಿದ್ದಕ್ಕೆ ನಮೂನೆ "ಎಂ" ನಲ್ಲಿ ರಶೀದಿಯನ್ನು ಪಡೆಯಬೇಕು. ಖರೀದಿಸಿದ ರಶೀದಿಯಲ್ಲಿ ರಸಗೊಬ್ಬರಗಳ ವಿವರ, ಮಾರಾಟ ಮಾಡಿದ ದಿನಾಂಕ, ರೈತರ ಸಹಿ ಮತ್ತು ಮಾರಾಟಗಾರರ ಸಹಿ ಕಡ್ಡಾಯವಾಗಿರಬೇಕು. ಆಧಾರ್ ಆಧಾರಿತ ಪಿಓಎಸ್ ಯಂತ್ರಗಳ ಮೂಲಕ ಕಡ್ಡಾಯವಾಗಿ ಹೆಬ್ಬೆಟ್ಟು ಪಡೆದು, ಬಿಲ್ ನೀಡಬೇಕು. ಈ ಎಲ್ಲಾ ಅಂಶಗಳನ್ನು ರೈತರು ಗಮನದಲ್ಲಿಟ್ಟುಕೊಂಡು ರಸಗೊಬ್ಬರ ಮತ್ತು ಬಿತ್ತನೆ ಬೀಜ ಹಾಗೂ ಕೀಟನಾಶಕ ಮಾರಾಟಗಾರರೊಂದಿಗೆ ವ್ಯವಹರಿಸಬೇಕು ಎಂದು ಮನವಿ ಮಾಡಿದರು.

ಇಂದು, ನಾಳೆ 'ಮೈಗ್ರೀನ್-22' ಪರಿಸರ ಸ್ನೇಹಿ ವಸ್ತು ಪ್ರದರ್ಶನ



ಮೈಸೂರು, ಜೂ.10 (ಆರ್‌ಕೆಬಿ)- ವಿಶ್ವ ಪರಿಸರ ಮಾಸಾಚರಣೆ ಅಂಗವಾಗಿ ಮೈಸೂರು ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್ ಜಂಟಿಯಾಗಿ ಜೂ.11 ಮತ್ತು 12ರಂದು ಮೈಸೂರಿನ ವಿನೋಬಾ ರಸ್ತೆಯಲ್ಲಿರುವ ನಂಜರಾಜ ಬಹದ್ದೂರ್ ಛತ್ರದಲ್ಲಿ 'ಮೈಗ್ರೀನ್-22' ಆರನೇ ಅವೃತ್ತಿಯ ಪರಿಸರ ಸ್ನೇಹಿ ಪದಾರ್ಥಗಳ ವಸ್ತು ಪ್ರದರ್ಶನ ಆಯೋಜಿಸಲಾಗಿದೆ.

ಪರಿಸರ ಸ್ನೇಹಿ ಜೀವನ ಶೈಲಿ ಅನುಕರಣೀಯ ಉತ್ಪನ್ನಗಳನ್ನು, ಉತ್ಪಾದಿತ ಮರಳು, ನವೀಕರಿಸಿದ ಮರದ ಉತ್ಪನ್ನಗಳು, ಪರಿಸರ ಸ್ನೇಹಿ ಕಟ್ಟಡ ತಂತ್ರಜ್ಞಾನ ಮತ್ತು ಉತ್ಪನ್ನಗಳು, ಸೋಲಾರ್ ವಾಟರ್ ಹೀಟರ್, ಸೋಲಾರ್ ಲೈಟ್‌ಗಳು, ಮೈಕ್ರೋಗ್ರಿಡ್ ಕುಡಿಯುವ ನೀರಿನ ಸಂಸ್ಕರಣೆಯ ವಿಧಾನಗಳು ಮತ್ತು ಉತ್ಪನ್ನಗಳು, ಕೊಳಚೆ ನೀರಿನ ಸಂಸ್ಕರಿಸಿದ ಮತ್ತು ಮರು ಉಪಯೋಗ-ನವೀಕರಿಸಬಹುದಾದ ಇಂಧನ ಮೂಲಗಳ ಮಾಹಿತಿ, ಲಂಟಾನ ಗಿಡದ ಕಡ್ಡಿಗಳಿಂದ ತಯಾರಿಸಿದ ಪೀಠೋಪಕರಣಗಳು, ಕರಕುಶಲ ವಸ್ತುಗಳು, ನೀರು ರಹಿತ ವಾಹನ ಶುದ್ಧೀಕರಣ, ಬೀಜಗಳು, ಗಿಡಗಳ ನರ್ಸರಿಗಳು, ಸಾವಯವ ಆಹಾರ ಪದಾರ್ಥಗಳು, ಹಣ್ಣು ತರಕಾರಿಗಳನ್ನು ಪ್ರದರ್ಶಿಸಲಾಗುತ್ತದೆ ಎಂದು ವಿಶ್ವ ಮಾಸಾಚರಣೆ ಸಮಿತಿಯ ಅಧ್ಯಕ್ಷ ನಾಗರಾಜ ವಿ.ಬೈರಿ ಶುಕ್ರವಾರ ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜೂ.11ರಂದು ಬೆಳಗ್ಗೆ 10 ಗಂಟೆಗೆ ಮೆ. ಶವರನ್ ಲ್ಯಾಬೊರೇಟರೀಸ್ ಪ್ರೈವೇಟ್ ಲಿಮಿಟೆಡ್‌ನ ಸವವ್ ಚೆರಿಯನ್ ವಸ್ತು ಪ್ರದರ್ಶನವನ್ನು ಉದ್ಘಾಟಿಸಲಿದ್ದಾರೆ. ಉಚಿತ ಪ್ರವೇಶವಿದ್ದು, ಇದೇ ವೇಳೆ ಎನ್‌ಐಇ ಮತ್ತು ಕ್ರೆಸ್ಟ್ ಅವರು ತಮ್ಮ ತಂತ್ರಜ್ಞಾನದ ಮಾಹಿತಿಯನ್ನು ಸಾರ್ವಜನಿಕರಿಗೆ ಉಚಿತವಾಗಿ ನೀಡಲಿದ್ದಾರೆ. ಪ್ರತಿದಿನ ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ ವಸ್ತು ಪ್ರದರ್ಶನ ವೀಕ್ಷಣೆಗೆ ಲಭ್ಯವಿದೆ ಎಂದು ತಿಳಿಸಿದರು. ಹೆಚ್ಚಿನ ವಿವರಗಳಿಗಾಗಿ ಎ.ಎಸ್.ಯೋಗನರಸಿಂಹ ಮೊ: 99805-56777 ಅಥವಾ ಟಿ.ಎಸ್.ಗುರುದತ್ತ ಮೊ: 98803 93343 ಸಂಪರ್ಕಿಸಬಹುದಾಗಿದೆ. ಸುದ್ದಿಗೋಷ್ಠಿಯಲ್ಲಿ ಬಿಎಐ ಮೈಸೂರು ಕೇಂದ್ರದ ಅಧ್ಯಕ್ಷ ಆರ್.ರಘುನಾಥ್, ಪದಾಧಿಕಾರಿಗಳಾದ ಎ.ಎಸ್.ಯೋಗನರಸಿಂಹ, ವೆಂಕಟೇಶ್ ಪ್ರಸಾದ್ ಉಪಸ್ಥಿತರಿದ್ದರು.



ಮೈಸೂರು ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ ಹೂಟಗಳ್ಳಿ ಸರ್ಕಾರಿ ಶಾಲೆ, ಮಹಾರಾಣಿ ಮಹಿಳಾ ಕಾಲೇಜ್ ಹೂಟಗಳ್ಳಿ ಮತ್ತು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಚೇರಿಯಲ್ಲಿ ದಕ್ಷಿಣ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ ಮಾದೇಗೌಡರ ಪರವಾಗಿ ಮತಯಾಚನೆ ಮಾಡಲಾಯಿತು ಈ ವೇಳೆ ಮೈಸೂರು ಜಿಲ್ಲಾ ಪಂಚಾಯಿತಿಯ ಮಾಜಿ ಅಧ್ಯಕ್ಷ ಕೂರ್ಗಳ್ಳಿ ಮಹದೇವು, ಹೂಟಗಳ್ಳಿ ಮುಖಂಡರಾದ ಚಿಕ್ಕಣ್ಣ ಗೌಡ, ಮಹೇಶ್, ನಾಗರತ್ನ ಹಾಗೂ ಜೀವನ್ ಮಹದೇವು(ವಕೀಲರು), ಹರೀಶ್, ವಿನೋದ್, ನವೀನ್, ರಾಜಣ್ಣ ಉಪಸ್ಥಿತರಿದ್ದರು.

ಕೆಎಸ್‌ಎಟಿ ಸದಸ್ಯರಾಗಿ ನಿವೃತ್ತ ಐಪಿಎಸ್ ಅಧಿಕಾರಿ ರಾಘವೇಂದ್ರ ಔರಾದ್ಕರ್ ನೇಮಕ



ಬೆಂಗಳೂರು, ಜೂ.10- ನಿವೃತ್ತ ಐಪಿಎಸ್ ಅಧಿಕಾರಿ ರಾಘವೇಂದ್ರ ಔರಾದ್ಕರ್ ಅವರನ್ನು ಕರ್ನಾಟಕ ರಾಜ್ಯ ಆಡಳಿತಾತ್ಮಕ ನ್ಯಾಯಾಧೀಕರಣ (ಕೆಎಸ್‌ಎಟಿ) ಸದಸ್ಯರಾಗಿ 4 ವರ್ಷಗಳ ಅವಧಿಗೆ ನೇಮಕ ಮಾಡಿ ರಾಷ್ಟ್ರಪತಿ ರಮಾನಂದ್ ಕೋವಿಂದ್ ಆದೇಶ ಹೊರಡಿಸಿದ್ದಾರೆ.

ರಾಷ್ಟ್ರಪತಿ ಚುನಾವಣೆಗೆ ಮೈಸೂರಿನ ಅಳಿಸಲಾಗದ ಶಾಯಿ

ಮಾರ್ಕರ್ ಪೆನ್ ಪೂರೈಸುವಂತೆ ಮೈಸೂರು ಪೇಂಟ್ ಅಂಡ್ ವಾರ್ನಿಷ್ ಅಮಿಟೆಡ್‌ಗೆ ಚುನಾವಣಾ ಆಯೋಗ ಬೇಡಿಕೆ

ಮೈಸೂರು, ಜೂ. 10(ಆರ್‌ಕೆ)- ಜುಲೈ 18ರಂದು ನಡೆಯಲಿರುವ ರಾಷ್ಟ್ರಪತಿ ಚುನಾವಣೆಗೆ ಮೈಸೂರು ಪೇಂಟ್ಸ್ ಅಂಡ್ ವಾರ್ನಿಷ್‌ನಲ್ಲಿ ತಯಾರಾಗುವ ಅಳಿಸಲಾಗದ ಶಾಯಿ ಬಳಸಲಾಗುತ್ತದೆ.



2017ರ ರಾಷ್ಟ್ರಪತಿ ಚುನಾವಣೆಯಲ್ಲೂ ಇಲ್ಲಿಂದಲೇ ಶಾಯಿ ಪೂರೈಸಲಾಗಿತ್ತು ಈ ಬಾರಿಯೂ ಮೈಸೂರು ಪೇಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್ (MPVL) ಸಂಸ್ಥೆಯು ಅಳಿಸಲಾಗದ ಶಾಯಿಯುಳ್ಳ ಮಾರ್ಕರ್ ಪೆನ್‌ಗಳನ್ನು ಸರಬರಾಜು ಮಾಡಲಿದೆ. ಜುಲೈ 18ರಂದು ನಡೆಯಲಿರುವ ರಾಷ್ಟ್ರಪತಿ ಚುನಾವಣೆಗೆ ಮಾರ್ಕರ್ ಪೆನ್‌ಗಳನ್ನು ಪೂರೈಸುವಂತೆ ಕೇಂದ್ರ ಚುನಾವಣಾ ಆಯೋಗವು ಪತ್ರ ಬರೆದು, ಬೇಡಿಕೆ ಸಲ್ಲಿಸಿದೆ.

ಈ ಕುರಿತು ಪ್ರತಿಕ್ರಿಯಿಸಿದ ಎಂಪಿವಿಎಲ್ ವ್ಯವಸ್ಥಾಪಕ ನಿರ್ದೇಶಕ ಜಿ. ಕುಮಾರಸ್ವಾಮಿ, ರಾಷ್ಟ್ರಪತಿಗಳ ಚುನಾವಣೆಗೆ ಅಳಸಲಾಗದ ಶಾಯಿ ಹೊಂದಿರುವ ಮಾರ್ಕರ್ ಪೆನ್‌ಗಳನ್ನು ಪೂರೈಸುವಂತೆ ಚುನಾವಣಾ ಆಯೋಗ ಕೇಳಿಕೊಂಡಿದೆ. ಅವರ ಬೇಡಿಕೆಯನುಸಾರ ನಾವು ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ. ಯಾವ ಪ್ರಮಾಣದಲ್ಲಿ ಎಷ್ಟು ಪೆನ್‌ಗಳು ಬೇಕೆಂಬುದರ ಬಗ್ಗೆ ನಿಖರ ಮಾಹಿತಿ ನೀಡಿಲ್ಲ. ಆದರೆ ನಾವು ಪೂರ್ವ ತಯಾರಿ ಮಾಡಿಕೊಳ್ಳುತ್ತಿದ್ದೇವೆ ಎಂದರು.

ಭಾರತ ದೇಶದಲ್ಲಿ ನಡೆಯಲಿರುವ ಎಲ್ಲಾ ಚುನಾವಣೆಗಳಿಗೂ ನಮ್ಮಿಂದಲೇ ಅಳಿಸಲಾಗದ ಶಾಯಿ ಸರಬರಾಜಾಗುತ್ತದೆ. ಪ್ರಸ್ತುತ ಪದವೀಧರ ಕ್ಷೇತ್ರದ ಚುನಾವಣೆಗೂ ನಮ್ಮ ಸಂಸ್ಥೆಯ ಇಂಕ್ ಅನ್ನೇ ಬಳಸಲಾಗುತ್ತಿದೆ. ಅತೀ ಹಳೆಯ ಸಂಸ್ಥೆಯಾದ ಮೈಸೂರು ಪೇಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್ ಗುಣಮಟ್ಟದ ಇಂಕ್ ಅನ್ನು ತಯಾರಿಸಲಿದೆ ಎಂದು ಕುಮಾರಸ್ವಾಮಿ ತಿಳಿಸಿದರು.

ನ್ಯಾಷನಲ್ ಕೆಮಿಕಲ್ ಲ್ಯಾಬೋರೇಟರಿ, ನ್ಯಾಷನಲ್ ರೀಸರ್ಚ್ ಡೆವಲಪ್‌ಮೆಂಟ್ ಕಾರ್ಪೊರೇಷನ್, ನ್ಯಾಷನಲ್ ಫಿಸಿಕಲ್ ಲ್ಯಾಬೋರೇಟರಿಗಳಿಂದ ತಾಂತ್ರಿಕ ನೆರವು ಪಡೆದು ಮೈಸೂರು ಪೇಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್ ಪ್ರೊಟೋಟೈಪ್ ಮಾರ್ಕರ್ ಪೆನ್‌ಗಳನ್ನು ತಯಾರಿಸುತ್ತಿದೆ. 2022ರ ಜುಲೈ 18ರಂದು ನಡೆಯಲಿರುವ ರಾಷ್ಟ್ರಪತಿ ಚುನಾವಣೆಗೂ ಅದೇ ಪೆನ್‌ಗಳನ್ನು ಕಳುಹಿಸುವಂತೆ ಚುನಾವಣಾ ಆಯೋಗವು ಕೇಳಿಕೊಂಡಿದೆ. ಅದಕ್ಕಾಗಿ ಈಗಾಗಲೇ ಮಾರ್ಕರ್ ಪೆನ್‌ಗಳ ತಯಾರಿಸಲು ಪ್ರಕ್ರಿಯೆ ಆರಂಭಿಸಿರುವ ಎಂಪಿವಿಎಲ್ ಅಧಿಕಾರಿಗಳು ಈ ಸಂಬಂಧ ಆಯೋಗದೊಂದಿಗೆ ಸಂಪರ್ಕದಲ್ಲಿದ್ದು, ಬೇಡಿಕೆಗನುಸಾರವಾಗಿ ಪೆನ್‌ಗಳ ಪೂರೈಕೆಗೆ ಸಿದ್ಧತೆ ಮಾಡಿಕೊಳ್ಳುತ್ತಿದೆ.

ನಾಳೆ ಗ್ರಾಹಕರ ಹಿತ ಚಿಂತನಾ ಸಭೆ

ಮೈಸೂರು, ಜೂ.10-ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ವತಿಯಿಂದ ಗ್ರಾಹಕರ ಹಿತ ಚಿಂತನಾ ಸಭೆಯನ್ನು ಭಾನುವಾರ (ಜೂ.12) ಬೆಳಗ್ಗೆ 11 ಗಂಟೆಗೆ ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಮಾಧವ ಕೃಪಾದಲ್ಲಿ ಏರ್ಪಡಿಸಲಾಗಿದೆ. ಗ್ರಾಹಕ ಪಂಚಾಯತ್ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರಾದ ವಿಜಯ್ ಸಾಗರ್ ಜೀ ಅವರು ಸಭೆಯನ್ನು ಉದ್ಘಾಟಿಸುವರು. ಎಬಿಜಿಪಿ ಮೈಸೂರು ಜಿಲ್ಲೆಯ ಅಧ್ಯಕ್ಷ ರವಿಶಂಕರ್, ಸಂಘಟನಾ ಕಾರ್ಯದರ್ಶಿ ವಿಕ್ರಂ ಐಯ್ಯಂಗಾರ್, ಮೈಸೂರು ಜಿಲ್ಲೆಯ ಪದಾಧಿಕಾರಿಗಳು ಸಭೆಯಲ್ಲಿ ಭಾಗವಹಿಸಲಿದ್ದಾರೆ. ಸಮಾಜದ ಚಿಂತಕರು, ವ್ಯಾಪಾರಸ್ಥರು, ಸಭೆಯಲ್ಲಿ ಭಾಗವಹಿಸಬಹುದು. ಮಾಹಿತಿಗಾಗಿ ಮೊ: 63622 32741ರ ಮೂಲಕ ಸಂಪರ್ಕಿಸಬಹುದಾಗಿದೆ ಎಂದು ಪ್ರಚಾರ ಪ್ರಸಾರ ಪ್ರಮುಖ್ ಸುಮಾ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.06.2022 ಶನಿವಾರ, ಮಳೆ ನಕ್ಷತ್ರ : ಮೃಗಶಿರ 08.06.2022 ರಿಂದ 21.06.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ
ತಿಥಿ: ಏಕಾದಶಿ, ನಕ್ಷತ್ರ : ಚಿತ್ತ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನ ಚಾರಿಟಬಲ್ ಟ್ರಸ್ಟ್ :** 80ನೇ ಜಯಂತ್ಯುತ್ಸವ, ಬೆಳಗ್ಗೆ 9.30ಕ್ಕೆ ಲಕ್ಷಾರ್ಚನೆ ಹೋಮ, ಸ್ಥಳ: ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನ, ವಿ.ವಿ. ಮೊಹಲ್ಲಾ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ಜನ್ಮ ದಿನೋತ್ಸವ, ಲಕ್ಷ ಶ್ರೀಸೂಕ್ತ ಮಹಾಯಾಗ ಮತ್ತು ಕೋಟಿ ದತ್ತ ಹೋಮ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಊಟಿ ರಸ್ತೆ.

■ **ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ :** ವಿಮಾನ ಗೋಪುರ ಮತ್ತು ರಾಜಗೋಪುರ ಮಹಾ ಕುಂಭಾಭಿಷೇಕ ಮಹೋತ್ಸವ, ಶ್ರೀ ವಲ್ಲಿದೇವಸೇನಾ ಸಮೇತ ಶ್ರೀ ಸುಬ್ರಹ್ಮಣ್ಯಸ್ವಾಮಿಯವರಿಗೆ ರಾಜ ಬೀದಿಗಳಲ್ಲಿ ಮಹಾ ಉತ್ಸವ, ಸ್ಥಳ: ದೇವಸ್ಥಾನ, ವಿಶ್ವೇಶ್ವರನಗರ.

■ **ಮೈಸೂರು ಆರ್ಟ್ ಗ್ಯಾಲರಿ :** ಕಲಾವಿದ ಎಂ.ಆರ್. ಮನೋಹರ ಅವರು ಜಂಗಮ ವಾಣಿ (ಮೊಬೈಲ್) ಮೂಲಕ ಸೆರೆಹಿಡಿದ ವೈವಿಧ್ಯಮಯ ಛಾಯಾಚಿತ್ರ ಪ್ರದರ್ಶನ, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ಬೆಳಗ್ಗೆ 10 ರಿಂದ.

■ **ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಮೈಸೂರು ಸೆಂಟರ್, ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್ :** ಮೈಗ್ರೀನ್-2022, ಪರಿಸರ ಸ್ನೇಹಿ ಕಟ್ಟಡ ಸಾಮಗ್ರಿಗಳು ಮತ್ತು ಗ್ರೀನ್ ಲೈಫ್ ಸ್ಟೈಲ್ಸ್ ವಸ್ತುಪ್ರದರ್ಶನ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ಮೆಟ್ರೋಪೋಲ್ ಸರ್ಕಲ್, ಬೆಳಗ್ಗೆ 10 ರಿಂದ.

■ **ಮೈಸೂರು ಆರ್ಟ್ ಗ್ಯಾಲರಿ :** ಸಾಧಕರೊಂದಿಗೆ ಸಂವಾದ-68, ತಿಂಗಳ ಸಾಧಕರು ಮುಕ್ತಕ ಕವಿ ಎಸ್. ಪುಟ್ಟಪ್ಪ ಮುಡಿಗೊಂಡ, ಮುಖ್ಯ ಅತಿಥಿಗಳು : ಸಾರ್ವಜನಿಕ ಶಿಕ್ಷಣ ಇಲಾಖೆ ನಿವೃತ್ತ ಉಪನಿರ್ದೇಶಕ ಸ್ವಾಮಿ, ಅಧ್ಯಕ್ಷತೆ : ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಅಧ್ಯಕ್ಷ ಎಲ್. ಶಿವಲಿಂಗಪ್ಪ, ಸ್ಥಳ : ಮೈಸೂರು ಆರ್ಟ್ ಗ್ಯಾಲರಿ, ಬೆಳಗ್ಗೆ 11ಕ್ಕೆ.

■ **ಸಾಚಿರ ಟ್ರಸ್ಟ್, ಡಾ. ರಮೇಶ್ ಜೇವೂರ್ ಅಭಿನಂದನಾ ಸಮಿತಿ :** ಡಾ. ರಮೇಶ್ ಜೇವೂರ್ ಅವರಿಗೆ ಅಭಿನಂದನಾ ಸಮಾರಂಭ, ಸಾನ್ನಿಧ್ಯ : ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಯುಕ್ತೇಶಾನಂದ ಮಹಾರಾಜ್, ಅಭಿನಂದನಾ ಭಾಷಣ : ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಪ್ರೊ. ಜಿ. ವೆಂಕಟೇಶ್‌ಕುಮಾರ್, ಅತಿಥಿಗಳು : ನಿವೃತ್ತ ಐಎಎಸ್ ಅಧಿಕಾರಿ ಕೃಷ್ಣಪ್ರಸಾದ್, ಅಧ್ಯಕ್ಷತೆ : ಸಾಹಿತಿ ಪ್ರೊ. ಹೆಚ್. ಗೋವಿಂದಯ್ಯ, ಸ್ಥಳ: ಇಎಂಎಂಆರ್‌ಸಿ ಸಭಾಂಗಣ, ಮಾನಸಗಂಗೋತ್ರಿ, ಸಂಜೆ 4ಕ್ಕೆ.

■ **ಮೈಸೂರು ನಗರ ಶರಣ ಸಾಹಿತ್ಯ ಪರಿಷತ್ತು :** ದತ್ತಿ ಕಾರ್ಯಕ್ರಮದ ಅಂಗವಾಗಿ ಕಾಯಕ ದಿನಾಚರಣೆ ಹಾಗೂ ಕಾಯಕಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ : ಶ್ರೀಕುದೇರು ಮಠದ ಶ್ರೀ ಗುರುಶಾಂತ ಸ್ವಾಮಿಗಳು, ಉದ್ಘಾಟನೆ ಹಾಗೂ ಉಪನ್ಯಾಸ : ಕೆಪಿಟಿಸಿಎಲ್ ನಿವೃತ್ತ ಮುಖ್ಯ ಇಂಜಿನಿಯರ್ ಶಂಕರ್ ದೇವನೂರು ಅವರಿಂದ ಶರಣರ ಕಾಯಕತತ್ವ ಕುರಿತು ಉಪನ್ಯಾಸ, ಪ್ರಶಸ್ತಿ ಪುರಸ್ಕೃತರು : ಶ್ರೀಮತಿ ನಾಗರತ್ನಮ್ಮ, ಜಿ.ವಿ. ಸೋಮಶೇಖರ್, ಅಧ್ಯಕ್ಷತೆ : ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಪ್ರೊ. ಮಲೆಯೂರು ಗುರುಸ್ವಾಮಿ, ಸ್ಥಳ: ಶ್ರೀ ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಸಂಜೆ 4.30ಕ್ಕೆ.

■ **ಶ್ರೀ ಅರುಣಾಚಲ ರಮಣ ಆತ್ಮ ವಿದ್ಯಾಮಂದಿರ :** ಶ್ರೀ ಅರುಣಾಚಲ ರಮಣ ಆತ್ಮವಿದ್ಯಾ ಮಂದಿರದ ಆಚಾರ್ಯರಾದ ಸ್ವಾಮಿ ರಮಣ ಸ್ವರೂಪಾನಂದಜೀ ಅವರಿಂದ 'ಶ್ರೀ ರಮಣರವರ ಆತ್ಮ ವಿಚಾರಣೆಯ ಮಾರ್ಗದಲ್ಲಿ - 'ನಾನು ಯಾರು?' ಕುರಿತು ಆಂಗ್ಲ ಭಾಷೆಯಲ್ಲಿ ಆಧ್ಯಾತ್ಮಿಕ ಪ್ರವಚನ, ಸ್ಥಳ: ವಿವೇಕಾನಂದ ಸಭಾಂಗಣ, ಮಹಾಜನ ಪಿಯು ಕಾಲೇಜು ಆವರಣ, ಜಯಲಕ್ಷ್ಮಿಪುರಂ, ಸಂಜೆ 5.30 ರಿಂದ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಇಷನಾಥಾನಂದ ಅವರಿಂದ ಆತ್ಮಬೋಧ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀಕೃಷ್ಣಗಾನಸಭಾ :** ಮಹಾರಾಜ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 138ನೇ ಜನ್ಮ ಮಹೋತ್ಸವ ಮತ್ತು ಸಂಗೀತೋತ್ಸವ, ಮುಖ್ಯ ಅತಿಥಿಗಳು : ಸ್ಟಾರ್ ಆಫ್ ಮೈಸೂರ್ ಮತ್ತು ಮೈಸೂರು ಮಿತ್ರ ಸಂಸ್ಥಾಪಕ ಸಂಪಾದಕ ಕೆ.ಬಿ. ಗಣಪತಿ, ಅಧ್ಯಕ್ಷತೆ: ಶ್ರೀ ಕೃಷ್ಣ ಗಾನಸಭಾ ಅಧ್ಯಕ್ಷ ಬಿ.ಎಸ್. ಶ್ರೀಧರರಾಜೇ ಅರಸು, ಸಂಗೀತ ಕಾರ್ಯಕ್ರಮ, ವಿದುಷಿ ಮಾನಸಿ ಪ್ರಸಾದ್ ಅವರಿಂದ ಗಾಯನ, ವಿದ್ವಾನ್ ಎಂ. ಕೇಶವ (ಪಿಟೀಲು), ವಿದ್ವಾನ್ ಎ. ರಾದೇಶ್ (ಮೃದಂಗ), ಸ್ಥಳ: ಆಳ್ವಾರ್ ಕಲಾ ಭವನ, ಶ್ರೀ ಕೃಷ್ಣ ದೇವಸ್ಥಾನ, ಗೋಕುಲಂ 3ನೇ ಹಂತ, ಸಂಜೆ 6ಕ್ಕೆ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ :** ಸಂಗೀತ ವಿದುಷಿ ಕು. ಅರುಣಾ ಸಿ.ಟಿ. ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ಸಿ.ಎಸ್. ತ್ಯಾಗರಾಜನ್ (ಪಿಟೀಲು), ವಿದ್ವಾನ್ ವಿ.ಎಸ್. ರಮೇಶ್ (ಮೃದಂಗ), ಸ್ಥಳ: ಶ್ರೀರಾಮಮಂದಿರದ ಅವರಣ, ಶಿವರಾಂಪೇಟೆ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.30 ಮೈಸೂರಿನ ಯೋಗ ವಿದ್ಯಾ ಪರಂಪರೆ-ಮಾಲಿಕೆ, ಲೇಖನ ಪ್ರಸ್ತುತಿ- ಡಾ. ಎ.ಎಸ್.ಚಂದ್ರಶೇಖರ್, 6.35 ಭವದ ಬಯಲಿಗರು-ವಚನಕಾರರ ಪರಿಚಯಾತ್ಮಕ ಕಾರ್ಯಕ್ರಮ, ಲೇಖನ ಮತ್ತು ಪ್ರಸ್ತುತಿ- ಮೈಸೂರು ಉಮೇಶ್, 6.40 ಹಾಡು ಹೇಳಿದ ಕಥೆ, ಪ್ರಸ್ತುತಿ-ಡಾ. ಮೈಸೂರು ಉಮೇಶ್, 9.00ರಾಗಲಹರಿ-ಕರ್ನಾಟಕ ಶಾಸ್ತ್ರೀಯ ಸಂಗೀತದ ರಾಗಗಳ ಚಿತ್ತಾರ ವರ್ಷದ ಸಂಭ್ರಮ-ವಿಶೇಷ ಕಾರ್ಯಕ್ರಮ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ ಸ್ವಾತಂತ್ರ್ಯ ಚಳವಳಿಯ ಪಯಣ-ಆಕಾಶವಾಣಿಯೊಂದಿಗೆ, 10.00 ಸಿ.ಎಸ್. ಕೇಶವಚಂದ್ರ - ವೇಣುವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, 11.15 ಯೋಗದತ್ತ ಜಗತ್ತು-ವಿಶೇಷ ಸರಣಿ

ಮಧ್ಯಾಹ್ನ: 12.30ದೇವರ ನಾಮ-ಪಿ.ಸುರಭಿ, 12.45 ಜನಪದಗೀತೆ-ಮಾಯಮ್ಮ ಮತ್ತು ತಂಡ, 1.20 ಅಂತಾರಾಷ್ಟ್ರೀಯ ಯೋಗ ದಿನದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ, 3.35 ಮಕ್ಕಳ ಮಂಟಪ - ಪ್ರತಿಭಾ ಪಲ್ಲವ, "ಆರೋಹಿ ಶ್ರೀಹರಿ ತೋರ್ಗಲ್" ಪರಿಚಯ, ಪ್ರಸ್ತುತಿ- ಎಂ.ಎಸ್. ಭಾರತಿ, 4.30ನೆನಪಿನಂಗಳ-ಹಿರಿಯ ವಿದ್ವಾಂಸರಾದ ಡಾ.ಸಿ.ಪಿ.ಕೆ ಅವರೊಡನೆ ಜಿ.ಕೆ. ರವೀಂದ್ರಕುಮಾರ್ ನಡೆಸಿದ್ದ ಸಂವಾದ, ಪ್ರಸ್ತುತಿ- ಎಸ್. ಲಕ್ಷ್ಮೀನಾರಾಯಣ, 6.50 ಕೃಷಿರಂಗ-ಕಿಸಾನ್‌ವಾಣಿ, ತೋರಣ ಹೂರಣ-ಸಾಪ್ತಾಹಿಕ ಸರಣಿ ಕಾರ್ಯಕ್ರಮ, 9.00ಲಾಕ್‌ಡೌನ್-ಕಥಾನಾಟಕ. ಲಾಕ್‌ಡೌನ್ ಕಥೆಗಳನ್ನಾಧರಿಸಿದ ಸರಣಿ- "ಸಿದ್ದಪ್ಪಗಳು ಬೇಕಾಗಿದ್ದಾರೆ", ನಿರ್ಮಾಣ- ಪ್ರಭುಸ್ವಾಮಿ ಮಳಿಮಠ್, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ-ಮಹೇಂದ್ರ ತೋಕೆ - ಗಾಯನ, 11.00 ಸವಿನೆನಪು

ಮೈಸೂರು ಮಿತ್ರ ಶನಿವಾರ 11 ಜೂನ್ 2022

ಮಧುಗೆ ಮತ ನೀಡಿ: ಎಂಎಲ್‌ಸಿ ಮರಿತಿಬ್ಬೇಗೌಡ



ಮಂಡ್ಯ, ಜೂ.10(ಮೋಹನ್ ರಾಜ್)– ಜೆಡಿಎಸ್ ನಿಷ್ಠಾವಂತ ಕಾರ್ಯಕರ್ತ ಕೀಲಾರ ಜಯರಾಮು ಅವರಿಗೆ ಹೂವಿಲ್ಲ ಎಂಬ ಕಾರಣಕ್ಕೆ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಟಿಕೆಟ್ ತಪ್ಪಿಸಿದ್ದರಿಂದ ನಾನು ಅನಿವಾರ್ಯವಾಗಿ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡರನ್ನು ಬೆಂಬಿಸುತ್ತಿದ್ದು, ನನ್ನ ಬೆಂಬಲಿಗರು ಹಾಗೂ ದಕ್ಷಿಣ ಪದವೀಧರ ಕ್ಷೇತ್ರದ ಮತದಾರರು ಕಾಂಗ್ರೆಸ್ ಪರ ಮತ ಚಲಾಯಿಸುವಂತೆ ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಮನವಿ ಮಾಡಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಪದವೀಧರ ಕ್ಷೇತ್ರದಿಂದ 2 ಬಾರಿ ಆಯ್ಕೆಯಾಗಿದ್ದ ಕೆ.ಟಿ.ಶ್ರೀಕಂಠೇಗೌಡರು ಈ ಬಾರಿ ಸ್ಪರ್ಧೆಯಿಂದ ಹಿಂದೆ ಸರಿದು ತಮ್ಮ ಆಪ್ತ ಹೆಚ್.ಕೆ.ರಾಮು ಅವರಿಗೆ ಟಿಕೆಟ್ ಕೊಡಿಸಿದ್ದಾರೆ. ಪಕ್ಷಕ್ಕಾಗಿ ದುಡಿದ ವ್ಯಕ್ತಿ ಬಿಟ್ಟು ಹಣವಂತರಿಗೆ ಟಿಕೆಟ್ ಕೊಡುವ ಅವಶ್ಯಕತೆ ಏನಿತ್ತು. ಜಯರಾಮು ಶಿಕ್ಷಕರ ಹಾಗೂ ಪದವೀಧರರ ಸಮಸ್ಯೆಗಾಗಿ ಹೋರಾಟ ಮಾಡಿದ್ದಾರೆ. ರಾಮು ಕೊಡುಗೆ ಏನಿದೆ. ಪದವೀಧರ ಕ್ಷೇತ್ರ ಮಲಿನ ಮಾಡಲು ಬರುತ್ತಿರುವ ರಾಮುಗೆ ಬೆಂಬಲ ಅನವಶ್ಯಕ ಎಂದರು.

ನಾನು ಪದವೀಧರ ಕ್ಷೇತ್ರ ವ್ಯಾಪ್ತಿಯ 4 ಜಿಲ್ಲೆಯಲ್ಲೂ ಪ್ರಚಾರ ಮಾಡಿದ್ದೇನೆ. ಎಲ್ಲಾ ಕಡೆಗಳಲ್ಲೂ ದಿ.ಜಿ.ಮಾದೇಗೌಡರ ಪುತ್ರ ಮಧು ಜಿ.ಮಾದೇಗೌಡ ಪರ ಒಲವು ಹೆಚ್ಚಾಗಿದೆ. ಮಾದೇಗೌಡರು ಬದುಕಿನುದ್ದಕ್ಕೂ ಮಾಡಿದ ಹೋರಾಟವನ್ನು ಜನ ಸ್ಮರಿಸುತ್ತಿದ್ದಾರೆ. ಕಾವೇರಿ ಹೋರಾಟ ಸೇರಿದಂತೆ ಶಿಕ್ಷಣ, ವೈದ್ಯಕೀಯ, ಸಮಾಜ ಸೇವೆ ಕ್ಷೇತ್ರದಲ್ಲಿ ಅಪಾರ ಸಾಧನೆಗೈದಿದ್ದಾರೆ. ಗಾಂಧಿ ಭವನ ನಿರ್ಮಿಸಿ, ಮಂಡ್ಯದ ಗಾಂಧಿ ಎಂದು ಪ್ರಖ್ಯಾತಿ ಪಡೆದಿರುವ ಅವರು, ತಮ್ಮ ಹುಟ್ಟೂರಿನ ಮನೆಯನ್ನೇ ಗಾಂಧಿ ಸ್ಮಾರಕಕ್ಕೆ ಕೊಟ್ಟು ಸಾರ್ಥಕತೆ ಮೆರೆದಿರುವ ಗೌಡರ ಕುಟುಂಬದ ಕುಡಿ ಮಧು ಅವರನ್ನು ಗೆಲ್ಲಿಸಬೇಕೆಂದು ಮನವಿ ಮಾಡಿದರು.

ಕೀಲಾರ ಜಯರಾಮು ಟಿಕೆಟ್ ತಪ್ಪಿದಾಗ ಪಕ್ಷೇತರವಾಗಿ ಸ್ಪರ್ಧಿಸಲು ಸಿದ್ಧರಾಗಿದ್ದರು. ಆದರೆ ಮಾದೇಗೌಡರಂತಹ ಸಜ್ಜನ ಕುಟುಂಬದ ಕುಡಿ ಕಣದಲ್ಲಿರಬೇಕಾದರೆ ಅಂತಹವರಿಗೆ ಸಹಾಯ ಮಾಡಬೇಕೆಂಬ ಸದುದ್ದೇಶದಿಂದ ಜಯರಾಮು ಹಿಂದೆ ಸರಿದು ಮಾದೇಗೌಡರ ಪುತ್ರನಿಗೆ ಅವಕಾಶ ಮಾಡಿಕೊಟ್ಟಿದ್ದಾರೆ ಎಂದರು.

ಪ್ರಸ್ತುತ ಬಿಜೆಪಿ ಸರ್ಕಾರ ಶಿಕ್ಷಣ ಕ್ಷೇತ್ರದಲ್ಲಿ ಗೊಂದಲವನ್ನುಂಟು ಮಾಡಿದೆ. ಉನ್ನತ ಹಾಗೂ ಪ್ರಾಥಮಿಕ ಶಿಕ್ಷಣದಲ್ಲಿ ಗೊಂದಲ ಸೃಷ್ಟಿಸಿ, ವಿದ್ಯಾರ್ಥಿಗಳ ಜೀವನವನ್ನು ಕಂಗೆಡುವಂತೆ ಮಾಡಿದೆ ಬಿಜೆಪಿ ಸರ್ಕಾರದ ಅವೈಜ್ಞಾನಿಕ ನಿರ್ಧಾರದಿಂದ ಶಿಕ್ಷಣ ಕ್ಷೇತ್ರ ಅಶುದ್ಧಗೊಂಡಿದ್ದು, ಇದಕ್ಕೆ ಕಾರಣರಾದ ಬಿಜೆಪಿ ಸರ್ಕಾರಕ್ಕೆ ತಕ್ಕ ಪಾಠ ಕಲಿಸಲು ಆ ಪಕ್ಷದ ಅಭ್ಯರ್ಥಿ ಸೋಲಿಸಿ ಎಂದರು.

ಜೊತೆಗೆ ಪಠ್ಯ ಪುಸ್ತಕ ಪರಿಷ್ಕರಣೆ ಹೆಸರಲ್ಲಿ, ಬಸವ, ಅಂಬೇಡ್ಕರ್, ಕುವೆಂಪುರಂತಹ ಮಹನೀಯರಿಗೆ ಅಪಮಾನ ಎಸಗಿದ್ದಾರೆ. ದಲಿತ, ಅಲ್ಪಸಂಖ್ಯಾತರ ಸಾಹಿತ್ಯವನ್ನು ಪಠ್ಯದಿಂದ ಬಿಡುವ ಕೆಲಸ ನಡೆಯುತ್ತಿದೆ. ಜೊತೆಗೆ ಪದವೀಧರರಿಗೆ ಉದ್ಯೋಗ ಕೊಡಲು ಸಹ ವಿಫಲವಾಗಿದ್ದು, 3 ಸಾವಿರಕ್ಕೂ ಅಧಿಕ ಹುದ್ದೆಗಳು ಖಾಲಿ ಬಿದ್ದಿರುವುದೇ ಇದಕ್ಕೆ ಕಾರಣ ಎಂದರು. ಜೆಡಿಎಸ್ ವರಿಷ್ಠರು ನನ್ನ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಿ. ನಾನು ಹೆದರುವುದಿಲ್ಲ. ಅನ್ಯಾಯವಾದಾಗಲೆಲ್ಲಾ ಪ್ರಶ್ನೆ ಮಾಡುತ್ತಲೇ ಬಂದಿದ್ದು, ಈಗಲೂ ಪಕ್ಷದ ವಿರುದ್ಧ ದನಿ ಎತ್ತಿದ್ದೇನೆ. 2024ರ ಶಿಕ್ಷಕರ ಕ್ಷೇತ್ರದಿಂದ ನನ್ನ ಸ್ಪರ್ಧೆ ಖಚಿತ ಎಂದರು. ಗೋಷ್ಠಿಯಲ್ಲಿ ಕೀಲಾರ ಜಯರಾಮು ಸೇರಿದಂತೆ ಇತರರಿದ್ದರು.

> ಬಿಜೆಪಿ ಸರ್ಕಾರವನ್ನು ಹೀಗೆ ಬಿಟ್ಟರೆ ಎಲ್ಲವನ್ನೂ ತಿರುಚುತ್ತಾರೆ. ಸ್ವಾತಂತ್ರ್ಯ ಬಂದಿದ್ದು, 1947ರ ಬದಲಿಗೆ ಮೋದಿ ಪ್ರಧಾನಿಯಾದ 2014ನ್ನು ಹೆಸರಿಸುತ್ತಾರೆ. ಸಂವಿಧಾನ ಬರೆದಿದ್ದು ಅಂಬೇಡ್ಕರ್ ಅಲ್ಲ 2019ರಲ್ಲಿ ಮೋದಿ ಪ್ರಧಾನಿಯಾದಾಗ ಎಂದು ಹಾಗೂ ಗಾಂಧಿಯನ್ನು ಕೊಂದಿಲ್ಲ. ಆತ್ಮಹತ್ಯೆ ಮಾಡಿಕೊಂಡರು ಎಂದು ಪಠ್ಯಪುಸ್ತಕದಲ್ಲಿ ಬರೆಸುತ್ತಾರೆ. ಬಿಜೆಪಿ ದೇಶಕ್ಕೆ ಅಪಾಯಕಾರಿ.
> –ಮರಿತಿಬ್ಬೇಗೌಡ, ಎಂಎಲ್‌ಸಿ

ತಂದೆ ಹೆಸರೇ ನನಗೆ ಶ್ರೀರಕ್ಷೆ: ಮಧು ಜಿ.ಮಾದೇಗೌಡ



ಶ್ರೀರಂಗಪಟ್ಟಣ, ಜೂ.10(ವಿನಯ್ ಕಾರೇಕುರ)– ಜಿಲ್ಲೆಯ ಕಾವೇರಿ ಹೋರಾಟಕ್ಕೆ ಹೆಸರಾದ ನಮ್ಮ ತಂದೆ ಜಿ.ಮಾದೇಗೌಡರು ರೈತಪರ ಹೋರಾಟದಲ್ಲೂ ಮುಂಚೂಣಿಯಲ್ಲಿದ್ದರು. ಅವರ ಹೆಸರೇ ನನಗೆ ಶ್ರೀರಕ್ಷೆ ಎಂದು ದಕ್ಷಿಣ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ತಿಳಿಸಿದರು.

ಪಟ್ಟಣದ ಖಾಸಗಿ ಕಲ್ಯಾಣ ಮಂಟಪದಲ್ಲಿ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ ಅಂಗವಾಗಿ ಆಯೋಜಿಸಿದ್ದ ಕಾಂಗ್ರೆಸ್ ಕಾರ್ಯಕರ್ತರ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ರೈತ ಹಿತರಕ್ಷಣಾ ಸಮಿತಿ ಅಧ್ಯಕ್ಷರಾಗಿ, ಸಂಸದರಾಗಿ, ಸಚಿವರಾಗಿ ನಮ್ಮ ತಂದೆ ಸಲ್ಲಿಸಿದ ಸೇವೆ ಈ ಚುನಾವಣೆಯಲ್ಲಿ ನನಗೆ ವರವಾಗಲಿದೆ. ಪದವೀಧರ ಮತದಾರರು ಮೊದಲ ಪ್ರಾಶಸ್ತ್ಯ ಮತ ನೀಡಿ ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಮಾಜಿ ಶಾಸಕ ರಮೇಶ ಬಂಡಿಸಿದ್ದೇಗೌಡ ಮಾತನಾಡಿ, ಬಿಜೆಪಿ, ಜೆಡಿಎಸ್ ಪ್ರಚಾರದಲ್ಲಿ ಹೋರಾಟವನ್ನೇ ಆರಂಭಿಸಿದ್ದಾರೆ. ಜಿಲ್ಲೆಯ ರೈತ ಕುಟುಂಬದಿಂದ ಬಂದ ಮಧು ಜಿ.ಮಾದೇಗೌಡರು ಶಿಕ್ಷಣ ಸಂಸ್ಥೆ, ಶಿಕ್ಷಕರ ಕಷ್ಟಗಳಿಗೆ ಸ್ಪಂದಿಸುವ ಕೆಲಸ ಮಾಡಿದ್ದಾರೆ. ಜಿಲ್ಲೆಯ ಪದವೀಧರರು ಅವರಿಗೆ ಹೆಚ್ಚಿನ ಮತ ನೀಡಬೇಕು ಎಂದು ಮನವಿ ಮಾಡಿದರು. ಜಿಪಂ ಮಾಜಿ ಅಧ್ಯಕ್ಷ ಎಸ್.ಲಿಂಗಣ್ಣ, ಕೆಪಿಸಿಸಿ ಸದಸ್ಯ ಎನ್.ಗಂಗಾಧರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪ್ರಕಾಶ್, ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಿತ್ರ ರಮೇಶ್, ಕಾಂಗ್ರೆಸ್ ವಕ್ತಾರ ಸುಧೀಂದ್ರ, ಯುವ ಕಾಂಗ್ರೆಸ್ ಅಧ್ಯಕ್ಷ ಎಸ್.ಜಯಕುಮಾರ್, ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ಪಿ.ಎಸ್.ಚಂದ್ರಶೇಖರ್, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಬಿ.ಎಸ್.ಚಂದ್ರಶೇಖರ್, ಸಾಮಾಜಿಕ ಜಾಲತಾಣದ ಜಿಲ್ಲಾ ಘಟಕದ ಅಧ್ಯಕ್ಷ ಅನಿಲ್‌ಕುಮಾರ್, ಮುಖಂಡರಾದ ಎಂ.ಎಲ್. ದಿನೇಶ್, ದಯಾನಂದ್, ಸೋಮಸುಂದರ್ ಇತರರಿದ್ದರು.

ಕೃಷ್ಣ ಪ್ರತಿಷ್ಠಾನ ಸೇವಾ ಸಂಸ್ಥೆಗೆ 2.5 ಲಕ್ಷ ರೂ.ನೆರವು



ಕೆ.ಆರ್.ಪೇಟೆ, ಜೂ.10(ಶ್ರೀನಿವಾಸ್)– ವಿಧಾನಸಭೆ ಮಾಜಿ ಸ್ಪೀಕರ್ ಕೃಷ್ಣ ಹೆಸರಿನಲ್ಲಿ ಸ್ಥಾಪಿಸಿರುವ ಕೃಷ್ಣ ಪ್ರತಿಷ್ಠಾನ ಸೇವಾ ಸಂಸ್ಥೆಗೆ ಪುರ ಸಭಾ ಸದಸ್ಯ ಬಸ್ ಸಂತೋಷ್ ಕುಮಾರ್ 2,52,000 ರೂ ನೆರವು ನೀಡಿದರು.

ಮೈಸೂರಿನ ಕೃಷ್ಣ ಅವರ ನಿವಾಸಕ್ಕೆ ಭೇಟಿ ನೀಡಿದ ಸಂತೋಷ್ ಕುಮಾರ್, ಪ್ರತಿಷ್ಠಾನದ ಗೌರವಾಧ್ಯಕ್ಷರೂ ಆದ ಕೃಷ್ಣ ಅವರ ಪತ್ನಿ ಇಂದ್ರಮ್ಮ ಅವರಿಗೆ 2.5 ಲಕ್ಷ ರೂ. ನೆರವು ನೀಡಿ ಆಶೀರ್ವಾದ ಪಡೆದರು. ಅಲ್ಲದೇ ಕೆ.ಆರ್.ಪೇಟೆಗೆ ಕೃಷ್ಣ ಅವರು ನೀಡಿದ ಕೊಡುಗೆಗಳನ್ನು ಸ್ಮರಿಸಿ, ಮುಂದಿನ ದಿನಗಳಲ್ಲಿ ಕೃಷ್ಣ ಪ್ರತಿಷ್ಠಾನ ಸೇವಾ ಸಂಸ್ಥೆಗೆ ಮತ್ತಷ್ಟು ಕೊಡುಗೆ ನೀಡುವುದಾಗಿ ಭರವಸೆ ನೀಡಿದರು.

ನಂತರ ಮಾತನಾಡಿದ ಅವರು, 3 ಬಾರಿ ಶಾಸಕರಾಗಿ, ಸಂಸದರಾಗಿ, ಸಚಿವರಾಗಿ, ವಿಧಾನಸಭೆ ಸ್ಪೀಕರ್ ಆಗಿ ಉತ್ತಮ ಸೇವೆ ಸಲ್ಲಿಸುವ ಮೂಲಕ ಕೃಷ್ಣ ಅವರು ರಾಜ್ಯದಲ್ಲೇ ಉತ್ತಮ ಹೆಸರು ಮಾಡಿದ್ದಾರೆ. ಕೃಷ್ಣ ಅವರ ಹೆಸರನ್ನು ಚಿರಸ್ಥಾಯಿಯಾಗಿಸಲು ಅವರ ಅಭಿಮಾನಿ ಬಳಗ ಸ್ಥಾಪಿಸಿರುವ ಕೃಷ್ಣ ಪ್ರತಿಷ್ಠಾನ ಸೇವಾ ಸಂಸ್ಥೆ ಕೆ.ಆರ್. ಪೇಟೆ ತಾಲೂಕಿನಲ್ಲಿ ಹಲವು ಸಮಾಜ ಮುಖಿ ಕಾರ್ಯಗಳಲ್ಲಿ ತೊಡಗಿರುವುದು ಶ್ಲಾಘನೀಯ ಎಂದರು.

ಈ ವೇಳೆ ಕೃಷ್ಣ ಪ್ರತಿಷ್ಠಾನದ ಅಧ್ಯಕ್ಷ ಜವರಾಯಿಗೌಡ, ಮನ್‌ಮುಲ್ ಮಾಜಿ ಅಧ್ಯಕ್ಷ ಚನ್ನಿಂಗೇಗೌಡ, ಗ್ರಾಪಂ ಮಾಜಿ ಸದಸ್ಯ ರಮೇಶ್, ವಿಎಸ್‌ಎಸ್‌ಎನ್ ನಿರ್ದೇಶಕ ಕಾಯಿ ಸುರೇಶ್, ಮುಖಂಡರಾದ ಡಿ.ಪಿ.ಪರಮೇಶ್, ಶ್ರೀನಿವಾಸ್, ಜೆಸಿಬಿ ನಾಗೇಶ್, ಮುಖಂಡರಾದ ಪರಮೇಶ್, ವಿಷಕಂಠ ಸೇರಿದಂತೆ ಹಲವರಿದ್ದರು.

ನಿಷೇಧಾಜ್ಞೆ ಜಾರಿ

ಮಂಡ್ಯ,ಜೂ.10– ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನ ಇಂಜಿನಿಯರಿಂಗ್, ಕೃಷಿ ವಿಜ್ಞಾನ ಮುಂತಾದ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕಾಗಿ ಸಾಮಾನ್ಯ ಪರೀಕ್ಷೆ ಜೂ.16 ಮತ್ತು 17 ರಂದು ನಡೆಯಲಿದೆ. ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ಸುವ್ಯವಸ್ಥಿತವಾಗಿ ನಡೆಸಲು ಮಂಡ್ಯ ತಾಲೂಕಿನ 8 ಕೇಂದ್ರಗಳು ಹಾಗೂ ಕೆ.ಆರ್ ಪೇಟೆ ತಾಲೂಕಿನ 2 ಕೇಂದ್ರಗಳು ಒಟ್ಟು 10 ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಪರೀಕ್ಷಾ ದಿನಗಳಂದು 200 ಮೀಟರ್ ವ್ಯಾಪ್ತಿ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾಧಿಕಾರಿ ಎಸ್.ಅಶ್ವತಿ ಆದೇಶ ಹೊರಡಿಸಿದ್ದಾರೆ. ಈ ಅವಧಿಯಲ್ಲಿ ಸದರಿ ಪರೀಕ್ಷಾ ಕೇಂದ್ರಗಳ ಸುತ್ತ ಇರುವ ಜೆರಾಕ್ಸ್ ಅಂಗಡಿಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚುವುದು. ಈ ಆದೇಶದನ್ವಯ ಪರೀಕ್ಷಾರ್ಥಿಗಳು ಮತ್ತು ಪರೀಕ್ಷಾ ಕಾರ್ಯಕ್ಕೆ ನೇಮಕಗೊಂಡ ಅಧಿಕಾರಿಗಳು ಸಿಬ್ಬಂದಿಗಳನ್ನು ಹೊರತುಪಡಿಸಿ ಇತರರು ಯಾರು ನಿಷೇಧಿತ ಪ್ರದೇಶದೊಳಗೆ ಪ್ರವೇಶಿಸುವಂತಿಲ್ಲವೆಂದು ಆದೇಶದಲ್ಲಿ ತಿಳಿಸಿದ್ದಾರೆ.

ನಾಳೆ ವಿದ್ಯುತ್ ವ್ಯತ್ಯಯ

ಮಂಡ್ಯ, ಜೂ.10– ಮಂಡ್ಯ– ಬೆಂಗಳೂರು ಮುಖ್ಯರಸ್ತೆ ಅಗಲೀಕರಣ ಪ್ರಯುಕ್ತ ಲೈನ್ ಕಾಮಗಾರಿ ನಡೆಯುತ್ತಿರುವುದರಿಂದ ಕೆಐಎಡಿಬಿ ಎಂಯುಎಸ್‌ಎಸ್‌ನಿಂದ ಹೊರಹೊಮ್ಮುವ ಎಫ್–3 ಡೈರಿ ಫೀಡರ್, ಎಫ್–2 ಹನಕೆರೆ ಮತ್ತು ಎಫ್–7 ವೆಲ್‌ಫನ್ ಫೀಡರ್ ಅಡಿ ಬರುವ ಶ್ರೀನಿವಾಸಪುರಗೇಟ್, ಹೊಸ ಬೂದನೂರು, ಹಳೆ ಬೂದನೂರು, ಕಟ್ಟೆದೊಡ್ಡಿ, ಮಲ್ಲಯ್ಯನದೊಡ್ಡಿ, ಬಿ.ಗೌಡಗೆರೆ ಹಾಗೂ ಹನಕೆರೆ ಗ್ರಾಮಗಳಲ್ಲಿ ಜೂ.12ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಆತ್ಮಸಾಕ್ಷಿ ಮತದಾನ ಎಂದರೆ ಅಡ್ಡ ಮತದಾನವೇ?

ಎಂಎಲ್‌ಸಿ ಛಲವಾದಿ ನಾರಾಯಣಸ್ವಾಮಿ ಪ್ರಶ್ನೆ



ಚಾಮರಾಜನಗರ, ಜೂ.10(ಎಸ್‌ಎಸ್)– ಆತ್ಮಸಾಕ್ಷಿ ಮತದಾನ ಎಂದರೆ ಅಡ್ಡ ಮತದಾನಕ್ಕೆ ಪ್ರೇರಣೆಯೇ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯರನ್ನು ವಿಧಾನಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ ಪ್ರಶ್ನಿಸಿದ್ದಾರೆ.

ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ಮತ ಪ್ರಚಾರ ಹಿನ್ನೆಲೆಯಲ್ಲಿ ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾಜಿ ಸಿಎಂ ಸಿದ್ದರಾಮಯ್ಯರ ಆತ್ಮಸಾಕ್ಷಿ ಮತದಾನದ ಹೇಳಿಕೆ ಖಂಡಿಸಿದರು. ರಾಜ್ಯಸಭಾ ಸದಸ್ಯರ ಚುನಾವಣೆಯಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಮತದಾರರು ಆತ್ಮಸಾಕ್ಷಿಯಾಗಿ ಮತ ನೀಡಬೇಕು ಎಂದು ಹೇಳುವ ಮೂಲಕ ಅಡ್ಡ ಮತದಾನಕ್ಕೆ ಪ್ರೇರಣೆ ನೀಡಿದ್ದಾರೆ. ಈ ಹಿಂದೆ ಅವರದ್ದೇ ಪಕ್ಷದ ಶಾಸಕರು ಅಡ್ಡ ಮತದಾನ ಮಾಡಿದಾಗ ಅವರ ವಿರುದ್ಧ ಏನು ಕ್ರಮ ಕೈಗೊಂಡಿದ್ದಾರೆ ಎಂದು ಪ್ರಶ್ನಿಸಿದ ಛಲ ವಾದಿ ನಾರಾಯಣಸ್ವಾಮಿ, ಈಗ ಆತ್ಮ ಸಾಕ್ಷಿ ಮತದಾನ ಮಾಡುವಂತೆ ಹೇಳಿರುವುದು ಸರಿಯಲ್ಲ ಎಂದರು.

ಆರ್‌ಎಸ್‌ಎಸ್ ಚಡ್ಡಿ ಸುಡುತ್ತೇವೆ ಎಂದು ಹೇಳುವ ಮೂಲಕ ಸಿದ್ದರಾಮಯ್ಯ ರೈತಕುಲಕ್ಕೆ ಅಪಮಾನ ಮಾಡಿದ್ದಾರೆ. ಚಡ್ಡಿ ಸ್ವಾಭಿಮಾನದ ಸಂಕೇತ. ಈಗಾಗಲೇ ಆರ್‌ಎಸ್‌ಎಸ್ ಚಡ್ಡಿಯಿಂದ ಈಗ ಪ್ಯಾಂಟ್‌ಗೆ ಮೇಲ್ದರ್ಜೇಗೇರಿ ಬಹಳ ವರ್ಷಗಳಾಗಿದೆ. ಇದು ಪಾಪ ಸಿದ್ದರಾಮಯ್ಯ ಅವರಿಗೆ ಗೊತ್ತಿಲ್ಲ ಅವರು ಆರ್‌ಎಸ್‌ಎಸ್ ಕಚೇರಿಗೆ ಬಂದಿದ್ದರೆ ಗೊತ್ತಾಗುತ್ತಿತ್ತು. ಸಿದ್ದರಾಮಯ್ಯ ನೋಡುವ ಮನಸ್ಥಿತಿಯೇ ಬೇರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಾವು ಸ್ವಾಭಿಮಾನದ ದಲಿತರು, ನಮಗೆ ಪಾಠ ಹೇಳಿಕೊಡಲು ಸಿದ್ದರಾಮಯ್ಯ ಬರದಿದ್ದರೆ ಒಳ್ಳೆಯದು. 5 ವರ್ಷಗಳ ಅಧಿಕಾರಾವಧಿಯಲ್ಲಿ ದಲಿತ ನಾಯಕರನ್ನು ತುಳಿದು ಅವರ ಭವಿಷ್ಯ ಹಾಳು ಮಾಡಿದ ಸಿದ್ದರಾಮಯ್ಯ, ಕಾಂಗ್ರೆಸ್ ಮುಖಂಡರಿಗೆ ಸಿಗಬೇಕಿದ್ದ ವಿಪಕ್ಷ ನಾಯಕ ಪಟ್ಟವನ್ನು ಹೈಕಮಾಂಡ್‌ಗೆ ಬೆದರಿಕೆ ಹಾಕಿ ಪಡೆದುಕೊಂಡಿದ್ದಾರೆ. ಮಲ್ಲಿಕಾರ್ಜುನ ಖರ್ಗೆ, ವಿ.ಶ್ರೀನಿವಾಸಪ್ರಸಾದ್, ಡಾ.ಪರಮೇಶ್ವರ ಸೇರಿದಂತೆ ಅನೇಕ ದಲಿತರನ್ನು ಸಿದ್ದರಾಮಯ್ಯ ವ್ಯವಸ್ಥಿತವಾಗಿ ತುಳಿದು ಮುಖ್ಯಮಂತ್ರಿಯಾಗಿದ್ದಾರೆ. ಈಗ ಮತ್ತೆ ನಾನೇ ಮುಖ್ಯಮಂತ್ರಿ ಎಂದು ಹೇಳುವ ಮೂಲಕ ಕಾಂಗ್ರೆಸ್‌ನಲ್ಲಿ ದಲಿತರನ್ನು ಮೂಲೆಗುಂಪು ಮಾಡುತ್ತಿದ್ದಾರೆ ಎಂದು ದೂರಿದರು.

ರಾಜ್ಯಸಭಾ ಬಿಜೆಪಿ ಅಭ್ಯರ್ಥಿ ಮೈ.ವಿ. ಶಂಕರ್ ಕಳೆದ ಚುನಾವಣೆಯಲ್ಲಿ ಅಲ್ಪಮತಗಳ ಅಂತರದಲ್ಲಿ ಸೋತಿದ್ದರು. ಈ ಬಾರಿ ಅವರಿಗೆ ಕ್ಷೇತ್ರದಲ್ಲಿ ಉತ್ತಮ ವಾತಾವರಣವಿದ್ದು, ಗೆದ್ದೇ ಗೆಲ್ಲುತ್ತಾರೆ. ಆದ್ದರಿಂದ ಜೂ.13ರಂದು ನಡೆಯುವ ಚುನಾವಣೆಯಲ್ಲಿ ಮೈ.ವಿ.ರವಿಶಂಕರ್ ಅವರಿಗೆ ಮೊದಲ ಪ್ರಾಶಸ್ತ್ಯದ ಮತ ನೀಡಬೇಕು ಎಂದು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ, ಎಸ್‌ಸಿ ಮೋರ್ಚಾ ರಾಜ್ಯ ಕಾರ್ಯದರ್ಶಿ ಪರಮಾನಂದ, ಜಿಲ್ಲಾ ಬಿಜೆಪಿ ವಕ್ತಾರ ಅಯ್ಯನಪುರ ಶಿವಕುಮಾರ್, ಜಿಲ್ಲಾ ಕಾರ್ಯದರ್ಶಿ ಪದ್ಮ, ಎಸ್ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಮೂಡ್ಲಾಕೂಡು ಪ್ರಕಾಶ್, ರಾಜ್ಯ ಕಾರ್ಯಕಾರಿಣಿ ಸದಸ್ಯ ಮಹೇಶ್‌ಕುಮಾರ್ ಹಾಜರಿದ್ದರು.

ಕಾಂಗ್ರೆಸ್ ಅಭ್ಯರ್ಥಿ ಪರ ಎಂಎಲ್‌ಸಿ ತಿಮ್ಮಯ್ಯ ಮತಯಾಚನೆ



ಚಾಮರಾಜನಗರ, ಜೂ.10(ಎಸ್‌ಎಸ್)– ಜಾತ್ಯತೀತ ತತ್ವದಡಿ ಸ್ಥಾಪನೆಯಾಗಿರುವ ಕಾಂಗ್ರೆಸ್ ಸಾಮಾಜಿಕ ನ್ಯಾಯ ಕಲ್ಪಿಸುವ ಮೂಲಕ ಎಲ್ಲಾ ವರ್ಗದವರಿಗೆ ಸಮಾನ ಅವಕಾಶ ನೀಡುತ್ತಾ ಬಂದಿದ್ದು, ಕೋಮುವಾದಿಗಳನ್ನು ದೂರವಿಡಲು ಪ್ರಬುದ್ಧ ಮತದಾರರು ಪಕ್ಷದ ದಕ್ಷಿಣ ಪದವೀಧರ ಕ್ಷೇತ್ರ ಅಭ್ಯರ್ಥಿಯನ್ನು ಬೆಂಬಲಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ ಮನವಿ ಮಾಡಿದರು.

ನಗರದ ಉಪ್ಪಾರ ಬೀದಿಯ ಸರ್ಕಾರಿ ಉನ್ನತೀಕರಿಸಿದ ಪ್ರಾಥಮಿಕ ಶಾಲೆ, ಮಾದಾಪುರ ಬಳಿಯ ಕೇಂದ್ರೀಯ ವಿದ್ಯಾಲಯಕ್ಕೆ ಪಕ್ಷದ ಮುಖಂಡರೊಂದಿಗೆ ಭೇಟಿ ನೀಡಿ, ವಿಧಾನ ಪರಿಷತ್‌ಗೆ ದಕ್ಷಿಣ ಪದವೀಧರ ಕ್ಷೇತ್ರದ ಅಭ್ಯರ್ಥಿ ಮಧು ಜಿ.ಮಾದೇಗೌಡ ಪರ ಮತಯಾಚಿಸಿ ಅವರು ಮಾತನಾಡಿದರು.

ಶಿಕ್ಷಣತಜ್ಞ ಮಧು ಜಿ.ಮಾದೇಗೌಡ, ಮಂಡ್ಯ ಜಿಲ್ಲೆಯಲ್ಲಿ ಶೈಕ್ಷಣಿಕ ಸಂಸ್ಥೆ ಆರಂಭಿಸಿ, ಬಡ ಮಕ್ಕಳಿಗೆ ವಿದ್ಯಾದಾನ ಮಾಡುತ್ತಿದ್ದಾರೆ. ಶಿಕ್ಷಕರು ಹಾಗೂ ಪದವೀಧರರ ಬಗ್ಗೆ ಅಪಾರ ಕಾಳಜಿ ಹೊಂದಿದ್ದಾರೆ. ಶಿಕ್ಷಕರ ಸಮಸ್ಯೆಗಳ ಬಗ್ಗೆ ಸ್ವತಃ ಅರಿವು ಹೊಂದಿದ್ದಾರೆ. ಅಲ್ಲದೆ ನೀರಾವರಿ ಹೋರಾಟದಲ್ಲಿ ತಂದೆ ಜಿ.ಮಾದೇಗೌಡ ಅವರೊಂದಿಗೆ ಭಾಗಿಯಾಗಿ, ನಾಡು, ಜಲ ವಿಚಾರದಲ್ಲಿ ನ್ಯಾಯ ಕಲ್ಪಿಸಿದವರು. ಇಂಥ ವ್ಯಕ್ತಿತ್ವವುಳ್ಳ ಮಧು ಮಾದೇಗೌಡರು ಪರಿಷತ್‌ಗೆ ಆಯ್ಕೆಯಾದರೆ, ತಮ್ಮೆಲ್ಲರ ಸಮಸ್ಯೆಗಳ ಪರಿಹಾರಕ್ಕೆ ಹೋರಾಡುತ್ತಾರೆ. ಹೀಗಾಗಿ ಅವರನ್ನು ಮತ ನೀಡಿ ಗೆಲ್ಲಿಸಬೇಕು ಎಂದು ಡಾ.ತಿಮ್ಮಯ್ಯ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿ, ಮಧು ಜಿ.ಮಾದೇಗೌಡರು ಪ್ರಥಮ ಪ್ರಾಶಸ್ತ್ಯದ ಮತಗಳಲ್ಲಿ ಗೆಲುವು ಸಾಧಿಸಿದ್ದಾರೆ. ಮಂಡ್ಯ, ಮೈಸೂರು, ಹಾಸನ ಜಿಲ್ಲೆಯಲ್ಲಿಯೂ ಉತ್ತಮ ವಾತಾವರಣದ್ದು, ಜಿಲ್ಲೆಯ ಮತದಾರರು ಹೆಚ್ಚಿನ ರೀತಿಯಲ್ಲಿ ಬೆಂಬಲಿಸಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎ.ಎಸ್.ಗುರುಸ್ವಾಮಿ, ಮಹಮದ್ ಅಸ್ಗರ್, ಜಿಪಂ ಮಾಜಿ ಅಧ್ಯಕ್ಷ ಸಿ.ಎ.ಮಹದೇವಶೆಟ್ಟಿ, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಎಂ.ಶಿವಮೂರ್ತಿ, ಹುಣಸೂರು ಬಸವಣ್ಣ, ಪಿ.ಶೇಖರ್ ಹಾಜರಿದ್ದರು.

ದಕ್ಷಿಣ ಪದವೀಧರ ಕ್ಷೇತ್ರ ಚುನಾವಣೆ

ಮತದಾರರ ಸೆಳೆಯಲು ಎಣ್ಣೆ–ಬಾಡೂಟ

ಚಾಮರಾಜನಗರ, ಜೂ.10–ವಿಧಾನ ಪರಿಷತ್‌ಗೆ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ ಹಿನ್ನೆಲೆಯಲ್ಲಿ ಪದವೀಧರ ಮತದಾರರಿಗೆ ಎಣ್ಣೆ–ಬಾಡೂಟ ನೀಡುವ ಮೂಲಕ ತಮ್ಮತ್ತ ಮತವನ್ನು ಸೆಳೆಯಲು ರಾಜಕೀಯ ಪಕ್ಷಗಳು ಮುಂದಾಗಿವೆ.

ನಗರದ ಖಾಸಗಿ ಹೋಟೆಲ್‌ವೊಂದರಲ್ಲಿ ಗುರುವಾರ ರಾತ್ರಿ ಪಕ್ಷವೊಂದು ಪದವೀಧರ ಮತದಾರರಿಗೆ ಪಾರ್ಟಿಯನ್ನು ಆಯೋಜಿಸಿತ್ತು ಎನ್ನಲಾಗಿದೆ. ಇದರಲ್ಲಿ ಅನೇಕ ಪದವೀಧರ ಮತದಾರರು ಪಾಲ್ಗೊಂಡು ಆತಿಥ್ಯ ಸ್ವೀಕರಿಸಿದರು ಎಂದು ತಿಳಿದು ಬಂದಿದೆ.

ಪದವೀಧರ ಮತದಾರರು ಮದ್ಯ ಸೇವಿಸುತ್ತಾ, ಬಾಡೂಟ ಸೇವಿಸುತ್ತಿರುವ ವಿಡಿಯೋ ವೈರಲ್ ಆಗಿದ್ದು, ಈ ಪಾರ್ಟಿಯಲ್ಲಿ ಪಕ್ಷವೊಂದರ ಕೆಲ ಮುಖಂಡರು ಪಾಲ್ಗೊಂಡಿರುವುದು ಬಹಿರಂಗವಾಗಿದೆ. ಪದವೀಧರ ಮತದಾರರು ಆಸೆ–ಆಮಿಷಗಳಿಗೆ ಒಳಗಾಗುತ್ತಿರುವುದು ಚರ್ಚೆಗೆ ಗ್ರಾಸವಾಗಿದೆ. ವಿದ್ಯಾವಂತ ಮತದಾರರೇ ಹೀಗೆ ನಡೆದುಕೊಂಡರೇ ಹೇಗೆ? ಎಂದು ನಾಗರಿಕ ವಲಯದಲ್ಲಿ ಪ್ರಶ್ನೆ ಎದ್ದಿದೆ.

ಪದವೀಧರರ ಕ್ಷೇತ್ರ ಚುನಾವಣೆ: ಸಾಂದರ್ಭಿಕ ರಜೆ

ಚಾಮರಾಜನಗರ, ಜೂ.10–ಕರ್ನಾಟಕ ವಿಧಾನ ಪರಿಷತ್‌ಗೆ ದಕ್ಷಿಣ ಪದವೀಧರ ಕ್ಷೇತ್ರದಿಂದ ಜೂ.13ರಂದು ನಡೆಯಲಿರುವ ಚುನಾವಣೆಗೆ ಮತದಾನ ಮಾಡಲು ಅರ್ಹ ಪದವೀಧರ ಮತದಾರರಿಗೆ ವಿಶೇಷ ಸಾಂದರ್ಭಿಕ ರಜೆ ಮಂಜೂರು ಮಾಡಲಾಗಿದೆ. ಸರ್ಕಾರದ ಅಧಿಸೂಚನೆಯಲ್ಲಿ ಮತ ಕ್ಷೇತ್ರಗಳಲ್ಲಿನ ಸರ್ಕಾರಿ ಹಾಗೂ ಖಾಸಗಿ ಶಾಲಾ–ಕಾಲೇಜುಗಳು, ಅನುದಾನಿತ ಹಾಗೂ ಅನುದಾನರಹಿತ ವಿದ್ಯಾಸಂಸ್ಥೆಗಳು, ಎಲ್ಲಾ ಶೈಕ್ಷಣಿಕ ಸಂಸ್ಥೆಗಳು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಕಚೇರಿಗಳು, ರಾಷ್ಟ್ರೀಕೃತ ಹಾಗೂ ಇತರ ಬ್ಯಾಂಕುಗಳು, ಕೈಗಾರಿಕಾ ಹಾಗೂ ಸಹಕಾರಿ ರಂಗದ ಸಂಘ ಸಂಸ್ಥೆಗಳು, ಎಲ್ಲಾ ವ್ಯವಹಾರಿಕ, ಔದ್ಯಮಿಕ ಸಂಸ್ಥೆ ಕೆಲಸ ನಿರ್ವಹಿಸುತ್ತಿರುವ ಪದವೀಧರರಿಗೆ ಅಂದು ವಿಶೇಷ ಸಾಂದರ್ಭಿಕ ರಜೆ ಮಂಜೂರು ಮಾಡಿ ಆದೇಶಿಸಲಾಗಿದೆ ಎಂದು ಕರ್ನಾಟಕ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣಾಧಿಕಾರಿಗಳು ಹಾಗೂ ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆನೆ ದಂತ ಸಂಗ್ರಹಿಸಿದ್ದ ಕೇರಳದ ವ್ಯಕ್ತಿ ಬಂಧನ



ಚಾಮರಾಜನಗರ, ಜೂ.10–ಆನೆದಂತ ಸಂಗ್ರಹಿಸಿದ್ದ ಕೇರಳ ಮೂಲ ವ್ಯಕ್ತಿಯೋರ್ವನನ್ನು ಬಂಧಿಸುವಲ್ಲಿ ಚಾಮರಾಜನಗರ ಪೊಲೀಸ್ ಅರಣ್ಯ ಸಂಚಾರಿ ದಳ ಸಿಬ್ಬಂದಿ ಯಶಸ್ವಿಯಾಗಿದ್ದಾರೆ.

ಕೇರಳದ ಸುಲ್ತಾನ್ ಬತ್ತೇರಿಯ ಬಾಲನ್(56) ಬಂಧಿತನಾಗಿದ್ದು, ಈತ ಗುಂಡ್ಲುಪೇಟೆ ತಾಲೂಕಿನ ಕಣಿಯನಪುರ ಕಾಲೋನಿ ಸಮೀಪ ಆನೆದಂತವನ್ನು ಸಂಗ್ರಹಿಸಿ ಬಚ್ಚಿಟ್ಟಿದ್ದ. ಈ ಬಗ್ಗೆ ಅರಿತ ಚಾಮರಾಜನಗರ ಪೊಲೀಸ್ ಅರಣ್ಯ ಸಂಚಾರಿ ದಳದ ಪಿಎಸ್‌ಐ ದೀಕ್ಷಿತ್ ಕುಮಾರ್ ನೇತೃತ್ವದ ತಂಡ ಗುರುವಾರ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಆನೆ ದಂತದ ಸಮೇತ ವಶಕ್ಕೆ ಪಡೆದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಬೆಂಗಳೂರಿನ ಅರಣ್ಯ ಕೇಂದ್ರ ಕಚೇರಿಯ ಎಡಿಜಿಪಿ ಶರತ್ ಚಂದ್ರ, ಸಿಐಡಿ ಎಸ್ಪಿ ಚಂದ್ರಕಾಂತ್ ಅವರ ಮಾರ್ಗದರ್ಶನ ಹಾಗೂ ಡಿವೈಎಸ್ಪಿ ಶ್ರೀನಿವಾಸ್ ರೆಡ್ಡಿ ಅವರ ಮೇಲ್ವಿಚಾರಣೆಯಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಸಿಬ್ಬಂದಿ ನವೀನ್‌ಕುಮಾರ್, ವೀರಭದ್ರಪ್ಪ, ಮಾದೇಶ್‌ಕುಮಾರ್, ಸ್ವಾಮಿ, ಗೋವಿಂದು, ಬಸವರಾಜು ಹಾಗೂ ಚಾಲಕ ರಾಜು ಭಾಗವಹಿಸಿದ್ದರು.

ಅಕ್ರಮ ಬೀಟೆ ಮರ ಸಾಗಣೆ: ಓರ್ವನ ಬಂಧನ



ಮಡಿಕೇರಿ,ಜೂ.10– ಬೀಟೆ ಮರದ ನಾಟಾಗಳನ್ನು ಅಕ್ರಮವಾಗಿ ಸಾಗಿಸುತ್ತಿದ್ದ ಪ್ರಕರಣವನ್ನು ಪತ್ತೆ ಹಚ್ಚಿರುವ ಕುಶಾಲನಗರ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ವಾಹನ ಸಹಿತ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ನಾಪೋಕ್ಲು ಮೂಲದ ಕೆ.ಅಪ್ಪಣ್ಣ(31) ಬಂಧಿತ ಆರೋಪಿ. ಬೀಟೆ ಮರ ಸಹಿತ ವಾಹನದ ಒಟ್ಟು ಮೌಲ್ಯ 2.50 ಲಕ್ಷ ರೂ.ಗಳಾಗಿದೆ ಎಂದು ಅರಣ್ಯ ಇಲಾಖಾಧಿಕಾರಿಗಳು ತಿಳಿಸಿದ್ದಾರೆ.

ಗುರುವಾರ ರಾತ್ರಿ 11 ಗಂಟೆಯ ವೇಳೆಗೆ ನಾಪೋಕ್ಲು–ಮೈಸೂರು ಮಾರ್ಗವಾಗಿ ಮಾರುತಿ ಓಮ್ನಿ ವಾಹನ(ಕೆಎ.02–ಪಿ–7118) ಕುಶಾಲನಗರ ತನಿಖಾ ಠಾಣೆಯ ಬಳಿ ಆಗಮಿಸಿದೆ. ಈ ವೇಳೆ ಅರಣ್ಯ ಇಲಾಖೆ ಅಧಿಕಾರಿಗಳು ವಾಹನ ತಪಾಸಣೆಗೆ ಮುಂದಾದಾಗ ಚಾಲಕ ವಾಹನವನ್ನು 20 ಮೀಟರ್ ಮುಂದೆ ಕೊಂಡೊಯ್ದು ನಿಲ್ಲಿಸಿ ಪರಾರಿಯಾಗಲು ಯತ್ನಿಸಿದ್ದಾನೆ. ತಕ್ಷಣ ಆತನನ್ನು ವಶಕ್ಕೆ ಪಡೆದು ಪರಿಶೀಲಿಸಿದಾಗ ಓಮ್ನಿಯಲ್ಲಿ 5 ಬೀಟೆ ಮರದ ನಾಟಾಗಳು ಪತ್ತೆಯಾಗಿದೆ. ಬಳಿಕ ಆರೋಪಿ ಸಹಿತ ವಾಹನವನ್ನು ವಶಕ್ಕೆ ಪಡೆಯಲಾಯಿತು ಎಂದು ಅರಣ್ಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಡಿಎಫ್‌ಓ ಎ.ಟಿ. ಪೂವಯ್ಯ ಮಾರ್ಗದರ್ಶನದಲ್ಲಿ ನಡೆಸಲಾದ ಕಾರ್ಯಾಚರಣೆಯಲ್ಲಿ ಎಸಿಎಫ್ ನೆಹರು, ಕುಶಾಲನಗರ ಆರ್‌ಎಫ್‌ಓ ಶಿವರಾಮ್, ಎಆರ್‌ಎಫ್‌ಓ ಕೆ.ಎನ್. ದೇವಯ್ಯ, ಅನಿಲ್ ಡಿಸೋಜಾ, ಕೆ.ಎಸ್. ಸುಬ್ರಾಯ, ಕೆ.ಪಿ.ರಂಜನ್, ಕೆ.ಐ. ವಿಲಾಸ್, ಅರಣ್ಯ ರಕ್ಷಕರಾದ ಮಂಜೇಗೌಡ, ಸಿದ್ದರಾಮ ನಾಟಿಕರ್ ಮತ್ತು ಆರ್‌ಆರ್‌ಟಿ ಸಿಬ್ಬಂದಿ ಧರ್ಮ ಪಾಲ್ಗೊಂಡಿದ್ದರು.

ಮನೆಗೆ ನುಗ್ಗಿ ನಗದು ದರೋಡೆ

ಸಿದ್ದಾಪುರ,ಜೂ.10– ವೃದ್ಧ ದಂಪತಿಯನ್ನು ಕೋಣೆಯಲ್ಲಿ ಕೂಡಿಹಾಕಿ ಸಿನಿಮೀಯ ರೀತಿಯಲ್ಲಿ ದರೋಡೆ ಮಾಡಿರುವ ಘಟನೆ ಸಿದ್ದಾಪುರ ಸಮೀಪದ ಮಾಲ್ದಾರೆಯಲ್ಲಿ ಬುಧವಾರ ರಾತ್ರಿ ನಡೆದಿದೆ.ವಿರಾಜಪೇಟೆ ತಾಲೂಕಿನ ಮಾಲ್ದಾರೆಯ ಬಾಡಗ ಗ್ರಾಮ ನಿವಾಸಿ ತಂಗಪ್ಪಣ್ಣ ಹಾಗೂ ಜಾನಕಿ ದಂಪತಿ ಮನೆಗೆ ಬುಧವಾರ ರಾತ್ರಿ 9 ಗಂಟೆ ವೇಳೆಗೆ ಮೂವರು ಮುಸುಕುಧಾರಿಗಳು ದಾಳಿ ಮಾಡಿದ್ದಾರೆ. ಮನೆಯ ಹಿಂಬದಿಯ ಬಾಗಿಲು ಮೂಲಕ ಒಳಗೆ ಪ್ರವೇಶಿಸಿದ ದರೋಡೆಕೋರರು, ಚಿನ್ನ ಹಾಗೂ ನಗದು ಎಲ್ಲಿಟ್ಟಿದ್ದೀರಿ ಎಂದು ಬೆದರಿಸಿ ದಂಪತಿಯನ್ನು ಮನೆಯ ಕೋಣೆಯೊಂದರಲ್ಲಿ ಕೂಡಿ ಹಾಕಿದರು.

ಬಳಿಕ ಮನೆಯಲ್ಲಿದ್ದ ಅಂದಾಜು 2 ಲಕ್ಷ ರೂ.ಹಣವನ್ನು ದೋಚಿದ್ದಾರೆ. ಅಲ್ಲದೆ ಜಾನಕಿ ಅವರ ಕುತ್ತಿಗೆಯಲ್ಲಿದ್ದ ಚಿನ್ನದ ಸರವನ್ನು ಎಳೆದಾಡಿದ್ದಾರೆ. ಪರಿಣಾಮ ಅರ್ಧ ಭಾಗ ಸರ ದರೋಡೆಕೋರರ ಕೈ ಸೇರಿದೆ. ಘಟನಾ ಸ್ಥಳಕ್ಕೆ ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ.ಅಯ್ಯಪ್ಪ, ಡಿವೈಎಸ್‌ಪಿ ಗಜೇಂದ್ರ ಪ್ರಸಾದ್, ಸಿಐ ವೆಂಕಟೇಶ್, ಪಿಎಸ್‌ಐ ಮೋಹನ್ ರಾಜ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ತನಿಖೆಯನ್ನು ಚುರುಕುಗೊಳಿಸಿದ್ದಾರೆ. ಸಿದ್ದಾಪುರ ಠಾಣೆಯಲ್ಲಿ ದರೋಡೆ ಪ್ರಕರಣ ದಾಖಲಾಗಿದೆ.

ಪ್ರಾಕೃತಿಕ ವಿಕೋಪ ನಿರ್ವಹಣೆಗೆ ಕೊಡಗಿಗೆ ಎನ್‌ಡಿಆರ್‌ಎಫ್ ತಂಡ



ಮಡಿಕೇರಿ,ಜೂ.10– ಕೊಡಗು ಜಿಲ್ಲೆ ಮಳೆಗಾಲದ ಪ್ರಾಕೃತಿಕ ವಿಕೋಪಗಳಿಗೆ ಸಿಲುಕುತ್ತಿದ್ದು, ಈ ಹಿನ್ನೆಲೆಯಲ್ಲಿ ಮುಂಗಾರು ಪೂರ್ವದಲ್ಲೇ ಮುಂಜಾಗ್ರತಾ ಕ್ರಮವಾಗಿ ಜಿಲ್ಲಾಡಳಿತದ ಕೋರಿಕೆಯ ಮೇರೆಗೆ ರಾಜ್ಯ ಸರಕಾರ ಮಡಿಕೇರಿಗೆ ಎನ್.ಡಿ.ಆರ್.ಎಫ್ ತಂಡವನ್ನು ನಿಯೋಜಿಸಿದೆ. ಎನ್‌ಡಿಆರ್‌ಎಫ್ 10ನೇ ಬೆಟಾಲಿಯನ್‌ನ 24 ಮಂದಿ ಯೋಧರನ್ನು ಕೊಡಗು ಜಿಲ್ಲೆಗೆ ಕಳುಹಿಸಲಾಗಿದ್ದು, ಗುರುವಾರ ರಾತ್ರಿ ಮಡಿಕೇರಿಗೆ ಆಗಮಿಸಿದ್ದು, ಈ ರಕ್ಷಣಾ ಯೋಧರ ತಂಡ ನಗರದ ಪೊಲೀಸ್ ಸಮುದಾಯ ಭವನ ಮೈತ್ರಿಯಲ್ಲಿ ಬೀಡು ಬಿಟ್ಟಿದ್ದು, ಮಳೆಗಾಲ ಮುಕ್ತಾಯವಾಗುವವರೆಗೆ ಜಿಲ್ಲೆಯಲ್ಲಿರಲಿದೆ.

ರ್‍ಯಾಫ್ಟಿಂಗ್ ಬೋಟ್, ಸ್ಪೀಡ್ ಬೋಟ್, ಮರ ಕಟಾವು ಯಂತ್ರಗಳು, ಹೈಡ್ರಾಲಿಕ್ ಕಟ್ಟರ್‌ಗಳು, ಜನರೇಟರ್, ಆಕ್ಸಿಜನ್ ಸಿಲಿಂಡರ್‌ಗಳು, ಫ್ಲೋಟಿಂಗ್ ಟ್ಯೂಬ್‌ಗಳು, ಲೈಫ್ ಜಾಕೆಟ್‌ಗಳು, ನೈಲಾನ್ ಹಗ್ಗಗಳು, ಸ್ಟ್ರೆಚರ್, ಮೆಡಿಕಲ್ ಕಿಟ್ ಸೇರಿದಂತೆ ಭೂ ಕುಸಿತ, ಕಟ್ಟಡ ಧ್ವಂಸ ಮಾತ್ರವಲ್ಲದೇ, ಪ್ರವಾಹ ಪರಿಸ್ಥಿತಿ ಎದುರಾದ ಸಂದರ್ಭ ಜನ–ಜಾನುವಾರು ರಕ್ಷಣೆಗೆ ಬೇಕಾದ ಎಲ್ಲಾ ಅಗತ್ಯ ರಕ್ಷಣಾ ಪರಿಕರಗಳನ್ನು ತಂದಿದ್ದಾರೆ.

ಕೊಡಗಿಗೆ ಬಂದಿರುವ ಆಂಧ್ರ ಪ್ರದೇಶದ ವಿಜಯವಾಡ 10ನೇ ಎನ್‌ಡಿಆರ್‌ಎಫ್ ತಂಡವನ್ನು ಆಫೀಸರ್ ಕಮಾಂಡಿಂಗ್ ಇನ್ಸ್‌ಪೆಕ್ಟರ್ ರಾಮ್‌ಬಾಗ್ ಮುನ್ನಡೆಸಲಿದ್ದು, ಅವರ ನೇತೃತ್ವದಲ್ಲಿ ರಕ್ಷಣಾ ಕಾರ್ಯಾಚರಣೆಗಳು ನಡೆಯಲಿದೆ. ಅವರೊಂದಿಗೆ ಸಹಾಯಕ ಅಧಿಕಾರಿಯಾಗಿ ಎಎಸ್‌ಐ ರಾಜ್ ಕುಮಾರ್ ಇದ್ದು, ಪ್ರತ್ಯೇಕ ತಂಡಗಳಾಗಿ ಕಾರ್ಯಾಚರಣೆ ನಡೆಸಲಿದ್ದಾರೆ. ಈ ಯೋಧರ ತಂಡ ಪ್ರಾಕೃತಿಕ ವಿಕೋಪದ ಸಂದರ್ಭ ರಕ್ಷಣಾ ಕಾರ್ಯ ನಡೆಸುವಲ್ಲಿ ಪರಿಣಿತಿ ಪಡೆದಿದೆ. ಕೊಡಗು ಜಿಲ್ಲಾಡಳಿತ, ಜಿಲ್ಲಾ ಪೊಲೀಸ್ ಇಲಾಖೆ, ಅಗ್ನಿ ಶಾಮಕ ದಳ, ಗೃಹ ರಕ್ಷಕ ದಳ, ಕಂದಾಯ ಇಲಾಖೆ, ಅರಣ್ಯ ಇಲಾಖೆ, ಚೆಸ್ಕಾಂ, ಆರೋಗ್ಯ ಇಲಾಖೆ, ಜಲ ಕ್ರೀಡೆಯ ರ್‍ಯಾಫ್ಟರ್‌ಗಳು, ಸ್ಥಳೀಯ ಗ್ರಾಮ ಪಂಚಾಯಿತಿಗಳು ಸೇರಿದಂತೆ ವಿವಿಧ ಇಲಾಖೆಗಳು ಎನ್‌ಡಿಆರ್‌ಎಫ್ ತಂಡದೊಂದಿಗೆ ಜಂಟಿಯಾಗಿ ರಕ್ಷಣಾ ಕಾರ್ಯಾಚರಣೆಗೆ ಕೈ ಜೋಡಿಸಲಿವೆ.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಎನ್‌ಡಿಆರ್‌ಎಫ್ ಯೋಧ ನಾಗರಾಜು, ನಮ್ಮ ತಂಡವನ್ನು ಕೊಡಗು ಜಿಲ್ಲೆಯಲ್ಲಿ ನಿಯೋಜನೆ ಮಾಡಲಾಗಿದೆ. ಕಳೆದ 4 ವರ್ಷಗಳಿಂದ ಎನ್‌ಡಿಆರ್‌ಎಫ್ ತಂಡ ಕೊಡಗು ಜಿಲ್ಲೆಗೆ ಬರುತ್ತಿದೆ. ಮೊದಲಿಗೆ ಪ್ರಾಕೃತಿಕ ವಿಕೋಪ ಸಂಭವಿಸುವ ಸಾಧ್ಯತೆ ಇರುವ ಸೂಕ್ಷ್ಮ ಪ್ರದೇಶಗಳನ್ನು ಸರ್ವೆ ನಡೆಸುತ್ತೇವೆ. 24 ಗಂಟೆಗಳ ಕಾಲ ನಮ್ಮ ಎನ್‌ಡಿಆರ್‌ಎಫ್ ತಂಡ ರಕ್ಷಣಾ ಕಾರ್ಯಕ್ಕೆ ಸಿದ್ಧವಿದೆ ಎಂದು ಹೇಳಿದರು.

ಕೊಡಗು ಜಿಲ್ಲಾ ವಿಪತ್ತು ನಿರ್ವಹಣಾ ಘಟಕದ ಅನನ್ಯ ವಾಸುದೇವ್ ಮಾತನಾಡಿ, ಈಗಾಗಲೇ ಜಿಲ್ಲಾಡಳಿತದ ವತಿಯಿಂದ ಭೂ ಕುಸಿತ, ಪ್ರವಾಹ ಪೀಡಿತದಂತಹ ಸೂಕ್ಷ್ಮ ಪ್ರದೇಶಗಳನ್ನು ಗುರುತು ಮಾಡಲಾಗಿದೆ ಜಿಲ್ಲೆಗೆ ಬಂದಿರುವ ಎನ್‌ಡಿಆರ್‌ಎಫ್ ತಂಡದೊಂದಿಗೆ ವಿವಿಧ ಇಲಾಖೆಗಳು ಜಂಟಿಯಾಗಿ ತರಬೇತಿ, ಪೂರ್ವ ಕಾರ್ಯಾಚರಣೆಯ ಡ್ರಿಲ್‌ಗಳನ್ನು ನಡೆಸಲಾಗುತ್ತದೆ ಎಂದು ಮಾಹಿತಿ ನೀಡಿದರು.





ಪೊನ್ನಂಪೇಟೆ ಸಮೀಪದ ಬಾಡಗ ಗ್ರಾಮದಲ್ಲಿ ಕಾಫಿ ಬೆಳೆಗಾರರಾದ ಕೆ.ಕೆ. ಉತ್ತಪ್ಪ ಅಲಿಯಾಸ್ ವಾಸು ಅವರ ತೋಟಕ್ಕೆ ನುಗ್ಗಿರುವ ಕಾಡಾನೆಗಳು ಲಕ್ಷಾಂತರ ರೂ ಮೌಲ್ಯದ ಪಂಪ್‌ಸೆಟ್ ಗಳನ್ನು ನಾಶ ಮಾಡಿದ್ದು, ಇದರಿಂದ 2.5 ಲಕ್ಷಕ್ಕೂ ಹೆಚ್ಚು ರೂ. ನಷ್ಟ ಉಂಟಾಗಿದೆ ಎನ್ನಲಾಗಿದೆ.

ಕಾಡಾನೆ ದಾಳಿ: ವ್ಯಕ್ತಿಗೆ ಗಾಯ



ಮಡಿಕೇರಿ,ಜೂ.10– ಕಾಡಾನೆ ದಾಳಿಗೆ ಸಿಲುಕಿ ವ್ಯಕ್ತಿಯೊಬ್ಬರು ಗಂಭೀರ ಗಾಯಗೊಂಡ ಘಟನೆ ಪೊನ್ನಂಪೇಟೆ ತಾಲೂಕಿನ ಬೀರುಗ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಹಾಲಪ್ಪ(58) ಗಾಯಗೊಂಡ ವ್ಯಕ್ತಿಯಾಗಿದ್ದು, ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಹಾಲಪ್ಪ ಎಂದಿನಂತೆ ತೋಟಕ್ಕೆ ತೆರಳುತ್ತಿದ್ದ ಸಂದರ್ಭ ತೋಟದ ಒಳಗಿದ್ದ ಕಾಡಾನೆ ದಾಳಿ ನಡೆಸಿದೆ. ಇದರಿಂದ ಹಾಲಪ್ಪ ಅವರ ಕೈ ಮುರಿಯಲ್ಪಟ್ಟಿದ್ದು, ಎದೆಯ ಭಾಗಕ್ಕೂ ಪೆಟ್ಟಾಗಿದೆ. ಘಟನಾ ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಕುಲ್ಲೇಟಿರ ರಘು ಮುತ್ತಪ್ಪ ನಿಧನ



ನಾಪೋಕ್ಲು, ಜೂ.10– ಹಳೆತಾಲೂಕು ನಿವಾಸಿ ಕುಲ್ಲೇಟಿರ ರಘು ಮುತ್ತಪ್ಪ (84) ಶುಕ್ರವಾರ ಬೆಳಗ್ಗೆ ನಿಧನರಾದರು. ನಿವೃತ್ತ ಮುಖ್ಯೋಪಾಧ್ಯಾಯರಾಗಿದ್ದ ಇವರು ನಾಪೋಕ್ಲು ಗ್ರಾಮದ ಶ್ರೀ ಭಗವತಿ ದೇವಾಲಯದ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಮೃತರು ಸಹೋದರ ಮತ್ತು ಅಪಾರ ಬಂಧು ಬಳಗವನ್ನು ಅಗಲಿದ್ದು, ಅಂತ್ಯಕ್ರಿಯೆ ಸ್ವಗ್ರಾಮ ಹಳೆತಾಲೂಕಿನಲ್ಲಿ ನಡೆಯಿತು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಜಮೀನು ಮಾರಾಟಕ್ಕಿದೆ
ಮೈಸೂರು, ಹೆಚ್.ಡಿ.ಕೋಟೆ, ಮುಖ್ಯ ರಸ್ತೆಯಲ್ಲಿ 1 ಎಕರೆ, 18 ಗುಂಟೆ ಜಮೀನು ಮಾರಾಟಕ್ಕಿದೆ. ತಂತಿ ಬೇಲಿ ಕಾಂಪೌಂಡ್ ಅಳವಡಿಸಿ ಪೂರ್ಣ ಅಭಿವೃದ್ಧಿ ಪಡಿಸಲಾಗಿದೆ. ಕಡಿಮೆ ಬೆಲೆಯಲ್ಲಿ.
9945661696
7975110748

RUNNING DHABHA FOR RENT
1500 Square fully Furnished Located on Alanahalli Ring Road
7829772699

ಜಮೀನು ಮಾರಾಟಕ್ಕಿದೆ
ಚಾಮರಾಜನಗರದಿಂದ 6 ಕಿ.ಮೀ ಅಂತರದಲ್ಲಿ NH 209 ಹೈವೇ ರಸ್ತೆಯಿಂದ ಸ್ವಲ್ಪ ಒಳಭಾಗಕ್ಕೆ BUS ರೂಟ್‌ನಲ್ಲಿ 45 ಗುಂಟೆ ಜಮೀನು ತಕ್ಷಣಕ್ಕೆ ಮಾರಾಟಕ್ಕೆ ಇದೆ. Semi Commercial
8867757056

ಬ್ರಾಹ್ಮಣ ವಿವಾಹ ವೇದಿಕೆ
ಸೇವಾ ಶಾಖೆ 501
ಬ್ರಾಹ್ಮಣ ವಧುಗಳಿಗೆ ಈ ಸೇವೆ ಸಂಪೂರ್ಣ ಉಚಿತ, ಬ್ರಾಹ್ಮಣರಿಂದ ಬ್ರಾಹ್ಮಣರಿಗೋಸ್ಕರ ಸಮಗ್ರ ಬ್ರಾಹ್ಮಣ ವಿವಾಹ ಅನುಷ್ಠಾನಕ್ಕೆ ನಮ್ಮ ಗುರಿ ಕಳೆದ 15 ವರ್ಷಗಳಿಂದ ನಿಮ್ಮ ಸೇವೆಯಲ್ಲಿ
9449408551

Job in Mysore
Mohan Kheda Ceramics
Tiles Marketing Executives - 10 Members
Male Candidates
Salary: Rs. 10,000 to 25,000 + Incentive
SSLC Pass (with two wheeler). J.P. Nagar
7892510068, 9620967801

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

HOUSE FOR RENT
2 BHK on 1st Floor, Semi furnished at 2nd Cross, CFTRI Layout, Bogadi, Mysuru. No Car Parking. Rent Rs. 15,000/- per month. Interested please contact:
Mob: 9449829038

ಬಾಡಿಗೆಗೆ /ಬೇಕಾಗಿದ್ದಾರೆ
Swift Dezire / Etios 2019-20
ಮಾದರಿ ವಾಹನ ಬಾಡಿಗೆಗೆ ಬೇಕಾಗಿದೆ. ಮಾಲೀಕ ಮತ್ತು ಚಾಲಕರಿಗೆ ಆದ್ಯತೆ. ಚಾಲಕರು (25 ರಿಂದ 35) ಬೇಕಾಗಿದ್ದಾರೆ.
TATA Manza / Indigo ECS Taxi for Sale
9972837203 / 9036745292

HOUSE FOR LEASE
30x40 Architect Built 3 Bedrooms @ Somanathnagar, Dattagalli, Mysore.
Brokers Excuse
* Lease amount 28 Lakhs* Negotiable
9741461969

Mysore Diagnostic Centre
S.R.Road, Mysore
WANTED
1) Receptionist
2) Typist
3) Staff Nurse - ANM
9243781906
9845272844

PART TIME WORK
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ
ಕೆಲಸ / JOB
ವಾರದ ಸಂಬಳ 3000/- ರಿಂದ 5000/- ಮೇಲ್ಪಟ್ಟು ಕೊರಿಯರ್ ಸೌಲಭ್ಯವಿದೆ.
9743217566
9108418233

WANTED
Qualified Teacher Called for interview on 12/06/2022 at Patel Devegowda School, Goplapura, City Bus 235C / 241 for Primary / Nursery School. Secretary:
9980913299

ಜಮೀನು ಮಾರಾಟಕ್ಕಿದೆ
ಪಿರಿಯಾಪಟ್ಟಣ ಟೌನ್‌ನಿಂದ ಸಿದ್ದಾಪುರ ಮಡಿಕೇರಿ PWD ಮುಖ್ಯರಸ್ತೆಗೆ ಹೊಂದಿಕೊಂಡಂತೆ ಎರಡು ಎಕರೆ ಸ್ವತ್ತು ಟೌನ್‌ನಿಂದ 1 1/2 ಕಿ.ಮೀ ಅಂತರದಲ್ಲಿ ಕಮರ್ಷಿಯಲ್‌ಗೆ ಅನುಕೂಲವಾಗುವಂತೆ ತಕ್ಷಣದಲ್ಲಿ ಮಾರಾಟಕ್ಕಿದೆ.
9611881603
9741013531

ಸೈಟು ಮಾರಾಟಕ್ಕಿದೆ
25x30
ಪ್ರಗತಿ ಗ್ರೂಪ್ ಪಕ್ಕ, ಪೂರ್ವ ದಿಕ್ಕು, ಬೆಳಗೊಳ ರೈಲ್ವೆ ಸ್ಟೇಷನ್ ಹತ್ತಿರ
8660177135
9886131399

LOAN LOAN LOAN
ಎಲ್ಲಾ ರೀತಿಯ ಹೊಸ ಹಾಗೂ ಹಳೆಯ Business ಗಳಿಗೆ Subsidy Loan ಗಳು ದೊರೆಯುತ್ತದೆ. (ಇತರೆ ಎಲ್ಲಾ ರೀತಿಯ Loan ಗಳಿಗಾಗಿ ಸಂಪರ್ಕಿಸಿ)
9620934944
9686773884

ಸೈಟುಗಳು ಮಾರಾಟಕ್ಕಿವೆ
ಶ್ರೀರಾಂಪುರ ರಿಂಗ್ ರೋಡ್, ಮೈಸೂರು
8050345574

MOBILE ರಿಪೇರಿ ಟ್ರೈನಿಂಗ್
18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತೇವೆ. ಪಕ್ಕದ ಸಂಸ್ಥೆಯಲ್ಲಿ ಕೆಲಸ ಮಾಡಿಕೊಳ್ಳುತ್ತಲೇ ಕಲಿಯಬಹುದು. ಉದ್ಯೋಗ ವಿದ್ಯಾರ್ಥಿಗಳಿಗೆ, SSLC, PUC ಹಾಗೂ PG ವ್ಯಾಸಂಗ ಮಾಡುತ್ತಿರುವವರಿಗೂ ಸೂಕ್ತ ತರಬೇತಿ ಇರುತ್ತದೆ. ಕೂಡಲೇ ಸಂಪರ್ಕಿಸಿ:
SMM Institute,
ಶ್ರೀ ವೀರಭದ್ರೇಶ್ವರಸ್ವಾಮಿ ದೇವಸ್ಥಾನದ ಎದುರು, ದೇವರಾಜ ಅರಸು ರಸ್ತೆ, ಕೆ.ಆರ್.ವೃತ್ತ, ಮೈಸೂರು.
Mob.: 9986926101

SDJ JEWELERS
ಪುರುಷರು ಮತ್ತು ಮಹಿಳೆಯರು Tele Callers ಮತ್ತು Sales Executive ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000
8884304444

ಕೆಲಸಕ್ಕೆ ಬೇಕಾಗಿದ್ದಾರೆ
ನಮ್ಮಲ್ಲಿ ಕೆಲಸ ಮಾಡಲು ಹುಡುಗರು / ಮಹಿಳೆಯರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 40 ವರ್ಷ, ವಿದ್ಯಾರ್ಹತೆ: Any Degree, ಸಂಬಳ: 10,000 ರಿಂದ 15,000/-
ಗಾನವಿ ಇಂಟರ್ ನ್ಯಾಷನಲ್
01, ಓಲ್ಡ್ ಮಹದೇವಪುರ ಮೇನ್ ರೋಡ್, ಫೋರಮ್ ಮಾಲ್ ಹತ್ತಿರ ಉದಯಗಿರಿ ಮೈಸೂರು
8123819136 / 9900283883

ಬೇಕಾಗಿದ್ದಾರೆ
* Front Office Executives,
* Room Boy
* House Keeping Ladies
* Security Guard
ನಗರದ ಹೃದಯ ಭಾಗದಲ್ಲಿರುವ ಹೊಸದಾದ ಹೋಟೆಲ್‌ವೊಂದಕ್ಕೆ, ಊಟ, ವಸತಿ ಹಾಗೂ ಆಕರ್ಷಕ ವೇತನವಿರುತ್ತದೆ. ಸಂಪರ್ಕಿಸಿ:
0821-4262294
8310000936

NANDINI SECURITY SERVICES
No.147, Belvatha, R.B.I Post, Mysore.
URGENTLY WANTED
Security Gaurds and House Keeping Personnel, Near by Mysore and Surrounding.
Mohan Kumar .K / Partner
7975810567

S.K.CONSTRUCTION
ನಿಮ್ಮ ಕನಸಿನ ಮನೆ J P Nagar ಗುರೂರು MUDA Approved 30x50 ಸೈಟ್‌ನಲ್ಲಿ 3D Elevation ಸಹಿತ 90% Loan ಮಾಡಿಸಿ ಮನೆ ಕಟ್ಟಿ ಕೊಡುತ್ತೇವೆ.
ಬೆಲೆ 55 Lakhs only
9620528490

ಮೈಸೂರು ಮ್ಯಾರೇಜ್ ಲಿಂಕ್ಸ್
ವಧು ವರರನ್ನು ಹುಡುಕಲು ಸಹಾಯ ಬೇಕೆ? ನಮಗೆ ಕರೆಮಾಡಿ ನಿಮ್ಮ ಫೋಟೋ & ಬಯೋಡೇಟಾ ವಾಟ್ಸಾಪ್ ಮಾಡಿರಿ. ಡಾಗುರಾಜು ಮೈಸೂರು
6361740552

MUDA APPROVED SITE FOR SALE
30x40 West Facing @ 1650/ Sq.ft. Immdiate Reg. & Bank Loan available Next to Lalbahadur Shastri Nagar & 1.5 kms from Ring Road.
7795609173

S.M. GOLD
ಗಿರವಿ ಚಿನ್ನಾಭರಣ ಖರೀದಿ
ಒಂದು ಗ್ರಾಂ ಚಿನ್ನಕ್ಕೆ 5200
ಯಾವುದೇ ಬ್ಯಾಂಕ್ ಮತ್ತು ಫೈನಾನ್ಸ್‌ನಲ್ಲಿ ಗಿರವಿ ಇಟ್ಟಿರುವ ಚಿನ್ನಾಭರಣಕ್ಕೆ ಹಣ ಬೇಕೆ ಕೂಡಲೇ ಸಂಪರ್ಕಿಸಿ (T&C)
8050518881

ಸುವರ್ಣ ಯಾತ್ರ
ಕಾಶಿ ಪ್ರವಾಸ 7 ದಿನಗಳು 23/07/22 ಆಯೋಧ್ಯೆ, ಪ್ರಯಾಗ್‌ರಾಜ್, ಗಯಾ, ಶ್ರೀ ಬಾಬಾ ವೈದ್ಯನಾಥಾ ಹಾಗೂ ಇತರೆ ತಮಿಳುನಾಡು ಪ್ರವಾಸ 5 ದಿನಗಳು 26/06/22 9 ನವಗ್ರಹ, ತಂಜಾವೂರು, ಕನ್ಯಾಕುಮಾರಿ ಹಾಗೂ ಇತರೆ
9019462508 / 8970949434

LEASE & SALE
2 BHK & 3 BHK Houses Available for Lease, 30x40 Duplex House for Sale, Vijayanagar 4th Stage, Mysore
Contact: 8050245332

TEACHERS TRAINING
NURSERY/ MONTESSORI/ KINDERGARTEN
ನೀವು ಒಬ್ಬ ಶಿಕ್ಷಕಿ ಆಗಬೇಕೆ ! SSLC ಪಾಸಾಗಿದ್ದರೆ ಎಲ್ಲದಕ್ಕೂ ತಕ್ಷಣ ಸಂಪರ್ಕಿಸಿ, ತರಬೇತಿ ಪಡೆಯಿರಿ ನಂತರ ತಕ್ಷಣ ಕೆಲಸ PUC & DEGREE PASS OR FAIL APPLY, N T T TRAINING, EXAM & CERTIFICATE, Regs. By Govt of NCT (New Delhi)
9113980741

ಮೈಸೂರು ಮತ್ತು ಬೆಂಗಳೂರಿನ ಪ್ರಖ್ಯಾತ ಕಂಪನಿಗಳಿಗೆ
ತಕ್ಷಣ ಬೇಕಾಗಿದ್ದಾರೆ
4th, 7th, SSLC, PUC, ITI, Diploma, Degree Pass/Fail ಆದಂತಹ ಯುವಕರು, ಯುವತಿಯರು ಬೇಕಾಗಿದ್ದಾರೆ.
ESI/PF ನೊಂದಿಗೆ ಊಟ ಮತ್ತು ವಸತಿ ಸೌಲಭ್ಯವಿದೆ. ಹಾಗೂ ತಿಂಗಳ ಸಂಬಳ 14,500 to 40,000+OT. ಮಾರ್ಕೆಟಿಂಗ್ ಅಲ್ಲ
9535709338 / 9606508609
9945261022

LOST
SSLC (10th) Pass Certificate and Statement marks of Disha K S D/o Shivaramu had been lost. If anyone had found it, we kindly request you all to call to below mobile number and return it to us.
8748089119

ಬೋಳು ತಲೆಯ ಸಮಸ್ಯೆಯೇ?



SMART HAIR FIXING
574, 1th Cross, Anikethana Road, Kuvempunagar, Mysuru
9611028523 / 9343142258

Sri Narayananda Vidyalaya
(English Medium School)
Hinkal, Mysuru-30
REQUIRED LADY TEACHERS
1) NST / Montessori,
2) P.U.C./ B.A., D.Ed (Hindi, EVS)
3) B.Sc./M.Sc., B.Ed (Science CBZ)
Contact: 7353711673
Walk in interview on 15.06.2022 (10.00 am to 1.00 pm)

Gem Selections
(A Part of Khanna Gems Group)
100% Natural Govt. Lab Certified Gemstones
ಶೇಕಡಾ 100 ರಷ್ಟು ನೈಸರ್ಗಿಕ ಸರ್ಕಾರಿ ಪ್ರಯೋಗಾಲಯದಿಂದ ಪ್ರಮಾಣೀಕೃತ ರತ್ನದ ಹರಳುಗಳು ದೊರೆಯುತ್ತವೆ
HIG-3, Near Akshaya Bhandar, New Kantharaju Urs Rd. Kuvempu Nagar, Mysuru, Karnataka-570023
8152066999

ಸೋಲಾರ್ ವಾಟರ್ ಹೀಟರ್
Solar Water Heater



ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

ಮನೆ ಮಾರಾಟಕ್ಕಿದೆ
ವಾಸಕ್ಕೆ ಯೋಗ್ಯವಾಗಿರುವ ಮುಡಾ ಮನೆ ಮಾರಾಟಕ್ಕೆ ಇದೆ. 17 ಲಕ್ಷ 11x30 ಪೂರ್ವ ದಿಕ್ಕು EWS - 124, ವಿಶ್ವಗುರು ರಸ್ತೆ, 2ನೇ ಕ್ರಾಸ್, ಕುವೆಂಪುನಗರ ಪೊಲೀಸ್ ಠಾಣೆ ಮುಂಭಾಗ
9980031819

ಮನೆ ಮಾರಾಟಕ್ಕಿದೆ
20x30 ಗ್ರೌಂಡ್ ಫ್ಲೋರ್ ಅಂಡ್ ಫಸ್ಟ್ ಫ್ಲೋರ್ ನಾರ್ತ್ ಫೇಸ್ ಆರ್ಕಿಟೆಕ್ಟ್ ಬಿಲ್ಡಿಂಗ್ ಆಲ್ ಟೀಕ್, ಶ್ರೀರಾಂಪುರ ಸೆಕೆಂಡ್ ಸ್ಟೇಜ್, ಮೈಸೂರು. ಹುಣಸೂರು ಬಸ್‌ಸ್ಟಾಪ್ ಹತ್ತಿರ ಮಧ್ಯವರ್ತಿಗಳಿಗೆ ಅವಕಾಶವಿಲ್ಲ
7259613736
9141353309

ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರ, ಕ್ಯಾಂಟೀನ್ ಅಡುಗೆ ಭಟ್ಟರು House Keeping ಮಹಿಳೆಯರು ಬೇಕಾಗಿದ್ದಾರೆ.
7829090366
8971662736



SUNZONE SOLAR SYSTEM
VM Double Road, Kuvempunagar, Mysuru
9845175443

ತಕ್ಷಣ ಬೇಕಾಗಿದ್ದಾರೆ
ಫ್ಯಾಕ್ಟರಿ ಮತ್ತು ಮೇನ್‌ಟೈನೆನ್ಸ್ ವಿಭಾಗದಲ್ಲಿ ಕೆಲಸ ಮಾಡಲು Computer ಅಥವಾ ಡ್ರೈವಿಂಗ್ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್ ಮತ್ತು ಸೂಪರ್‌ವೈಸರ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು ಸೂಪರ್ ವೈಸರ್: 16,500/- +W/o (8hrs), ಗಾರ್ಡ್ - 15,500/- +W/o (8hrs) ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9620667819 / 9880727819

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

AFFIDAVIT
I, Ramdas, residing at #1829, 8th Cross, Ashokapuram, Mysore-570 008, declare that my name mentioned in all documents as Ramdas, but in my Kotak Mahindra Bank's Cheque and Passbook wrongly mentioned as Ramdas G. I also confirm that both the names are belongs to me only. My correct name is Ramdas. I am, swearing in front of Notary Venkatesha Patawardhana on 9.6.2022.
Sd/- Ramdas

WANTED TEACHERS
Chethana English School
HINDI B.Ed - 1
NST Teachers -2
Contact:
9945911981
7892930680

ಬೇಕಾಗಿದ್ದಾರೆ
ವೆಜ್ ಮತ್ತು ನಾನ್ ವೆಜ್ ಅಡುಗೆ ಕೆಲಸ ಮಾಡಲು ಮಹಿಳೆಯರು ಮತ್ತು ಪುರುಷರು ಬೇಕಾಗಿದ್ದಾರೆ. ಸರಸ್ವತಿಪುರಂ, ಮೈಸೂರು
9611736458
7795267413

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ
7795560970

ಮೊಬೈಲ್‌ನಲ್ಲಿ ಕೆಲಸ
ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬೇಕಾಗಿದ್ದಾರೆ
ಮೈಸೂರಿನ ರಿಂಗ್‌ರೋಡ್‌ನಲ್ಲಿರುವ ಎಸ್.ಎ.ಎಸ್ (ಗಾರ್ಮೆಂಟ್ಸ್ ಘಟಕಕ್ಕೆ) ಅನುಭವವುಳ್ಳ ಕ್ವಾಲಿಟಿ ಚೆಕರ್ಸ್ ಮತ್ತು ಟೈಲರ್‌ಗಳು ಬೇಕಾಗಿದ್ದಾರೆ. PUC ಪಾಸ್/ಫೇಲ್ ಆದವರು, SSLC ಆದವರು ಅರ್ಜಿ ಸಲ್ಲಿಸಬಹುದು. Part time and full time ಕೆಲಸಕ್ಕೆ ಬೇಕಾಗಿದ್ದಾರೆ. Assistant Manager, Supervisors, Desk Co-Ordinators, Stewards Washing, Cooking and House Keeping ಕೆಲಸ ಮಾಡಲು ಬೇಕಾಗಿದ್ದಾರೆ. ವಯಸ್ಸು 18 ವರ್ಷ ಮೇಲ್ಪಟ್ಟವರು. ಸಂಪರ್ಕಿಸಿ:
S.A.S. Groups, #371/A, 1st Floor, Opp. Ayyappa Swamy Temple, Chamundi Hills Bottom (Padha), Mysore-570 010. Mob: 9740491192

Bar and Restaurant for lease
Location: Mandya
contact: 8884424704

ಬೇಕಾಗಿದ್ದಾರೆ
ಹೋಟೆಲ್ ಕೆಲಸಕ್ಕೆ ವೆಯಿಟರ್ಸ್, ಕೌಂಟರ್ ಬಾಯ್ಸ್, ಚಾಟ್ಸ್, ಜ್ಯೂಸ್ ಮಾಸ್ಟರ್, ಕ್ಲೀನರ್ಸ್‌ಗಳು ಬೇಕಾಗಿದ್ದಾರೆ. ಆಸಕ್ತರು ನೇರವಾಗಿ ವಿವರಗಳೊಂದಿಗೆ ಸಂಪರ್ಕಿಸಿ. ವ್ಯವಸ್ಥಾಪಕರು:
ಹೋಟೆಲ್ ವಿಷ್ಣುಭವನ್,
ಬೀಮಾ ಜುವೆಲ್ಲರ್ಸ್ ಹಿಂದೆ, ಬಿ ಎನ್ ರಸ್ತೆ, ಬಸ್ ನಿಲ್ದಾಣದ ಎದುರು ಮೈಸೂರು

SITES FOR SALE
Approved by DTCP and MUDA
20x30, 20x40, 30x40, 30x60, 40x60
Hunsur Road, Bogadi Road, T.Narsipura Road.
9632454592

St Paul's English School
Bannimantap
Walk in interview on 13th June 2022 between 10.30 AM to 1 PM. Required Efficient, Qualified and Experienced
1. Head Mistress BA, B.Ed .
2. Physical Instructor (PT Teacher)
3. Assistant Teacher BA,.
Reg. For Admission open for Pre- School to 10th Standrad
9243526260 / 7349732300

Vidyavahini School (R)
Hebbal, 2nd Stage, Mysuru 570017
Teachers Required
Nursery- N S T
Computer Teacher - BCA / MCA
Maths Teacher - D.Ed, B.Com / B.Sc
Email: vidyavahini06@gmail.com
9844032278
7795115811

Travel Desk Executive Wanted- Female
Female-Assisting corporate client with travel related Services, Booking Domestic & International Packages, Tickeing, Hotels & Cars. Age: 20-28 with Minimun 1 year Exp in travel agency Field Fluent in kannada, English & Hindi
Contact : 7022005889
email: travelccmforts2011@gmail.com

WANTED
Office Assistant-Male
SSLC pass / Fail,
CAD-Designer-Female
Fresher can apply
7090900099

FOR RENT (VEG. ONLY)
Just renovated & Painted N/F, G/F 60x40 3BHK, 2 Varandas, 2 Washrooms, Dining, Pooja with Sump & Solar, Car Parking, Near JSS Hospital New Building, Nataraj Choultry, Mysore.
(No Brokers)
9483901346

HOUSE FOR SALE
MUDA 30x40
New 4 BHK Duplex House with 22 squares, Furnished, E/F Door, S/F Site at SBM Layout, Bogadi - Rs. 1.40 Cr., Pillar Construction, 100 mtrs from Gadige Road
Direct Owner: 6361295132

ವರ ಬೇಕಾಗಿದೆ
ಮಕ್ಕಳಿಲ್ಲದಂತಹ 'ಪದವೀಧರೆ' 50 ವರ್ಷ ವಯಸ್ಸಿನ ಒಕ್ಕಲಿಗ ಜಾತಿಯ ವಿಧವೆಗೆ ಎರಡನೇ ಮದುವೆಗೆ 48 ರಿಂದ 53 ವರ್ಷ ವಯಸ್ಸಿನ 'ಪದವೀಧರ' ಸರ್ಕಾರಿ/ಖಾಸಗಿ ನೌಕರಿಯಲ್ಲಿರುವ, ವಿಧುರ / ವಿಚ್ಛೇದಿತ ಒಕ್ಕಲಿಗ ಜಾತಿಯ ವರ ಬೇಕಾಗಿದ್ದಾರೆ.
9353225779

ಬೆಂಗಳೂರಿನಲ್ಲಿ Cook ಬೇಕಾಗಿದ್ದಾರೆ
ಸಂಬಳ 12,000 ಸಸ್ಯಹಾರಿ, ಮಾಂಸಹಾರಿ ಅಡುಗೆ ಗೊತ್ತಿರಬೇಕು, ಊಟ, ರೂಂ ಉಚಿತ. ಸಂಪರ್ಕಿಸಿ:
9740098047
9740098064

WANTED TEACHERS
Chethana English School
B.Sc, B.Ed (PCM) - 1
B.Sc, B.Ed (CBZ) - 1
B.A, B.Ed Social Science -1
9945911981
7892930680

ಮನೆ ಬಾಡಿಗೆಗೆ
20x30
ಕನಕದಾಸನಗರ, ಎ ಬ್ಲಾಕ್, ದಟ್ಟಗಳ್ಳಿ, ಮೈಸೂರು.
9902238205
9902238206

PREMIUM VILLA PLOTS FOR SALE
30x40 DTCP (BMMP), Ready to build Villa Plot, Ready for Registration, Loanable, UGC (Underground Cable) & UGD, Behind Shobha Retreat, Close to Schools & Hospital, Bogadi Road- Mysore.
9916844857 / 8762242134

ಗ್ರಾವೆಲ್ ಮಣ್ಣು, ಕೆಮ್ಮಣ್ಣು, ಗೊಬ್ಬರ್, ಗಾರ್ಡನ್ ಕೆಲಸ ಮಾಡಿಕೊಡಲಾಗುತ್ತದೆ.
7259407518
8310220458

SITES FOR SALE
20x30 - 12.60 Lakhs
30x40 - 25.20 Lakhs
Bank Loan upto 75%, Ready for Registration, Near Gurur Bus Stop, Ramabainagar, Mysore, DTCP approved, (Corporation Limit) 1.5 kms from J P Nagar Ring Road.
8660105902

ಬೇಕಾಗಿದೆ
ಮೈಸೂರು, ಮಂಡ್ಯ, ನಂಜನಗೂಡು, ಗುಂಡ್ಲುಪೇಟೆ, ಚಾಮರಾಜನಗರ, ಹೆಚ್.ಡಿ.ಕೋಟೆ, ಕೊಳ್ಳೇಗಾಲ, ಮಳವಳ್ಳಿ ಬಡಾವಣೆ ನಿರ್ಮಾಣ ಮಾಡಲು J.V ಗೆ ಜಮೀನು ಬೇಕಾಗಿದೆ. ಶ್ರೀ ಬಾಲಾಜಿ ಡೆವಲಪರ್ಸ್, ತಕ್ಷಣ ಸಂಪರ್ಕಿಸಿ:
9620426509

HOUSE FOR SALE
30x40 MUDA New 4 BHK Duplex, East Facing Door Site, at Ramkrishnagar, Near Andolana Circle - Rs.1.55 Cr.
30x40 New 3 BHK Duplex with Borewell, N/F Site & E/F Door, Vijayanagar 4th Stage - Rs.1.58 Cr.
(Brokers Excuse)
8660105902

HOUSE FOR SALE
20x30 MUDA
New 3 BHK Duplex with North Facing Site & East Facing Door, Somnathnagar, Dattagalli. Rs.76 Lakhs (Opp 40x60 Sites)
Brokers Don't Call
8660105902

SITE FOR SALE
30x40
ಪೂರ್ವಾಭಿಮುಖ ಜ್ಞಾನಭಾರತಿ ಲೇಔಟ್ ದಡದಹಳ್ಳಿ, ಮುಡಾ ಖಾತೆ ಆಗಿದೆ. ಬೆಲೆ : 21 ಲಕ್ಷ
9342123373

ಮುಡಾ ಸೈಟು ಮಾರಾಟಕ್ಕಿದೆ
30x40 S/F
ಲಾಲ್‌ಬಹದ್ದೂರ್ ಶಾಸ್ತ್ರಿನಗರ
9342071453

2ನೇ ಸನ್‌ಫ್ಲವರ್ ಎಣ್ಣೆ ಉಚಿತ
25Kg MRಗೋಲ್ಡ್ BTರೈಸ್ ಖರೀದಿಸಿದರೆ 2 ಲೀಟರ್ ಸನ್‌ಫ್ಲವರ್ ಅಡುಗೆ ಎಣ್ಣೆ ಉಚಿತ ಅಥವಾ 5Kg ಬ್ರಾಂಡ್ ಗೋದಿ ಹಿಟ್ಟು 2Kgಸಕ್ಕರೆ, 1Kg ಫ್ರೀ ತೊಗರಿಬೇಳೆಯನ್ನು ಉಚಿತವಾಗಿ ಕೊಡುತ್ತೇವೆ ಬೆಲೆ ರೂ 1350/- ಮಾತ್ರ
ಸನ್‌ಶೈನ್ ಟ್ರೇಡರ್ಸ್
9206470833 ಮೈಸೂರು

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಕೆಲಸಕ್ಕಾಗಿ ಹುಡುಗ / ಹುಡುಗಿಯರು ಬೇಕಾಗಿದ್ದಾರೆ. ಹುದ್ದೆಗಳು:
1) ಮ್ಯಾನೇಜರ್
2) ಸೂಪರ್ ವೈಸರ್
3) ಮೆಕ್ಯಾನಿಕ್
4) ಕ್ಯಾಷಿಯರ್
7829490009

BRIGHT KIDS MONTESSORI
Required Montessori Trained Teacher.
7204812322
9686711710
Admission Open for Pre KG, LKG, UKG

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ದೊಡ್ಡ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ನಿಮ್ಮ ಜೀವನದಲ್ಲಿನ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ... (ಸಣ್ಣ ಅಕ್ಷರಗಳು)

ಕೊಳ್ಳೇಗಾಲದ ಜ್ಯೋತಿಷ್ಯರು
ದೇವಿ ಮಾಂತ್ರಿಕರು ಪಂ.ಎಸ್.ಕುಮಾರಸ್ವಾಮಿ
ಮೊ.: 9880538804
ಪ್ರೀತಿ ಪ್ರೇಮ, ಸಂಸಾರ, ದಾಂಪತ್ಯ ಸಮಸ್ಯೆ (Divorce), ... (Reliance Smart) ಹತ್ತಿರ, ATM ... (KSRTC) ಸಬರ್ಬನ್ ಬಸ್ ಸ್ಟ್ಯಾಂಡ್, ಮೈಸೂರು

ಶ್ರೀ ಕನ್ನಿಕಾ ಪರಮೇಶ್ವರಿ ಜ್ಯೋತಿಷ್ಯಾಲಯ
ಪಂಡಿತ್ ಭೀಮರಾವ್
Mob: 9972196728
ವಿಳಾಸ: 806, 3ನೇ ಹಂತ, ಅದಿತ್ಯ ಆಸ್ಪತ್ರೆ ಹತ್ತಿರ, ಗೋಕುಲಂ, ಮೈಸೂರು

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆ ನೇರ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 9 ರಲ್ಲಿ

ಶ್ರೀಕಂಠೇಶ್ವರಸ್ವಾಮಿ ಹುಂಡಿಯಲ್ಲಿ 1.41 ಕೋಟಿ ರೂ. ಆದಾಯ

● 125 ಗ್ರಾಂ ಚಿನ್ನ, 6 ಕೆಜಿ ಬೆಳ್ಳಿ, 32 ವಿದೇಶಿ ಕರೆನ್ಸಿ ಸಂಗ್ರಹ ● ನಿಷೇಧಿತ 1000, 500 ರೂ.ಗಳು ಕೂಡ ಪತ್ತೆ

ನಂಜನಗೂಡು, ಜೂ.10(ಸುದರ್ಶನ್)– ದಕ್ಷಿಣ ಕಾಶಿ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಹುಂಡಿ ಪರ್ಕಾವಣೆ ಕಾರ್ಯ ಶುಕ್ರವಾರ ನಡೆಯಿತು. ಹುಂಡಿಯಲ್ಲಿ 1 ಕೋಟಿ 41 ಲಕ್ಷ 15 ಸಾವಿರ ರೂ. ನಗದು, 125 ಗ್ರಾಂ ಚಿನ್ನ, 6 ಕೆ.ಜಿ. 100 ಗ್ರಾಂ ಬೆಳ್ಳಿ, 32 ವಿದೇಶಿ ಕರೆನ್ಸಿ ಸಂಗ್ರಹಗೊಂಡಿದೆ ಎಂದು ಪ್ರಭಾರ ಇಒ ವೆಂಕಟೇಶ್ ಪ್ರಸಾದ್ ಹೇಳಿದರು.

ಕಳೆದ ಮೇ 7ರಂದು ಹುಂಡಿ ಪರ್ಕಾವಣೆ ಕಾರ್ಯವನ್ನು ನಡೆಸಲಾಗಿತ್ತು. 1 ತಿಂಗಳ ಅವಧಿಯಲ್ಲಿಯೇ ಮತ್ತೆ ಶ್ರೀಕಂಠೇಶ್ವರ ದೇವಾಲಯಕ್ಕೆ ಒಂದೂವರೆ ಕೋಟಿ ಆದಾಯ ಬಂದಿದೆ.

1000, 500ರ ಮುಖಬೆಲೆಯ ನೋಟುಗಳನ್ನು ನಿಷೇಧಗೊಳಿಸಿ 4 ವರ್ಷಗಳಾದರೂ ಸಹ ದೇವಾಲಯದ ಹುಂಡಿಯಲ್ಲಿ 1000 ಮುಖಬೆಲೆಯ ಎರಡು, 500 ಮುಖಬೆಲೆಯ 12 ನಿಷೇಧಿತ ನೋಟುಗಳು ಸೇರಿದಂತೆ ಒಟ್ಟು 8 ಸಾವಿರ ಮೌಲ್ಯದ ನಿಷೇಧಿತ ನೋಟುಗಳು ಸಂಗ್ರಹಗೊಂಡಿದೆ. ಎಣಿಕೆ ಕಾರ್ಯದಲ್ಲಿ ಮಹಿಳಾ ಸ್ವಸಹಾಯ ಸಂಘದ ಮಹಿಳೆಯರು ಹಾಗೂ ಬ್ಯಾಂಕ್ ಆಫ್ ಬರೋಡಾದ ವ್ಯವಸ್ಥಾಪಕ ಗುರುಮಲ್ಲಯ್ಯ, ಸಿಬ್ಬಂದಿ ಹಾಗೂ ದೇವಾಲಯದ ಸಿಬ್ಬಂದಿ ನೆರವಾದರು.

ನನ್ನ ಅಧಿಕಾರವಧಿಯಲ್ಲಿ ತಿ.ನರಸೀಪುರ ಅಭಿವೃದ್ಧಿಗೆ ಒತ್ತು

ಆದಿಶಕ್ತಿ ಕಾಳಮ್ಮ ದೇವಸ್ಥಾನದ ಉದ್ಘಾಟನೆ ವೇಳೆ ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪರಿಗೆ ಸನ್ಮಾನ



ತಿ.ನರಸೀಪುರ, ಜೂ.10(ಎಸ್‌ಕೆ)– ನನ್ನ ಅಧಿಕಾರದ ಅವಧಿಯಲ್ಲಿ ಸಂವಿಧಾನದ ಆಶಯಗಳನ್ನು ಸಾಕಾರಗೊಳಿಸುವುದರೊಂದಿಗೆ ತಾಲೂಕಿನ ಸಮಗ್ರ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿದ್ದೇನೆ ಎಂದು ಮಾಜಿ ಲೋಕೋಪಯೋಗಿ ಸಚಿವ ಡಾ. ಎಚ್.ಸಿ. ಮಹದೇವಪ್ಪ ತಿಳಿಸಿದ್ದಾರೆ.

ತಾಲೂಕಿನ ಶ್ರೀ ರಂಗರಾಜಪುರ ಗ್ರಾಮದ ಶ್ರೀ ಆದಿಶಕ್ತಿ ಕಾಳಮ್ಮ ದೇವಸ್ಥಾನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಗ್ರಾಮಸ್ಥರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು ಸಿದ್ದರಾಮಯ್ಯನವರ ಸಂಪುಟದಲ್ಲಿ ಲೋಕೋಪಯೋಗಿ ಸಚಿವನಾಗಿ ತಾಲೂಕಿಗೆ ನೂರಾರು ಕೋಟಿ ರೂ.ಗಳ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದ್ದೆ, ಅಂದು ನಾನು ತಂದ ಯೋಜನೆಗಳೇ ಇಂದು ಕೂಡ ಕಾರ್ಯರೂಪಕ್ಕೆ ಬರುತ್ತಿವೆ ಎಂದರು.

ನನ್ನ ಅವಧಿಯಲ್ಲಿ ಬಹುತೇಕ ಕಾಮಗಾರಿಗಳು ಪೂರ್ಣಗೊಂಡಿವೆ, ಸದಾ ಜನಪರ ಆಶೋತ್ತರಗಳಿಗೆ ಸ್ಪಂದಿಸುತ್ತಾ, ಸಂವಿಧಾನದ ಆಶಯವನ್ನು ಇಟ್ಟುಕೊಂಡು, ಸರ್ವೋದಯ ಮಾದರಿಯ ಅಭಿವೃದ್ಧಿಯನ್ನೇ ಧ್ಯೇಯವಾಗಿಟ್ಟುಕೊಂಡು ಆಡಳಿತ ನಡೆಸಿದ್ದೇನೆ ಎಂದರು.

ಕ್ಷೇತ್ರದ ಜನರು ನನ್ನನ್ನು ಸೋಲಿಸಿದ ಪರಿಣಾಮ ಶ್ರೀ ಆದಿಶಕ್ತಿ ಕಾಳಮ್ಮ ದೇವಸ್ಥಾನ ಜೀರ್ಣೋದ್ಧಾರಕ್ಕೆ ನಾಲ್ಕು ವರ್ಷಗಳು ಬೇಕಾಯಿತು, ನಾನು ಶಾಸಕನಾಗಿದ್ದರೆ, ಒಂದು ವರ್ಷದಲ್ಲಿ ಪೂರ್ಣಗೊಳಿಸಿ ಲೋಕಾರ್ಪಣೆಗೊಳಿಸುತ್ತಿದ್ದೆ ಮುಂದೆ ಈ ರೀತಿ ಆಗದಂತೆ ನೋಡಿಕೊಂಡು ಕ್ಷೇತ್ರದ ಅಭಿವೃದ್ಧಿಗಾಗಿ ನನ್ನನ್ನು ಗೆಲ್ಲಿಸಿ ಎಂದು ಮನವಿ ಮಾಡಿದರು, ಕ್ಷೇತ್ರದ ಜನ ಈಗಾಗಲೇ ಅರ್ಥ ಮಾಡಿಕೊಂಡಿದ್ದಾರೆ, ಮುಂದೆ ಈ ರೀತಿ ಆಗೋದಿಲ್ಲ ಎಂಬ ಆತ್ಮವಿಶ್ವಾಸ ನನಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಶ್ರೀ ಆದಿಶಕ್ತಿ ಕಾಳಮ್ಮ ದೇವಸ್ಥಾನದ ಉದ್ಘಾಟನೆಯಲ್ಲಿ ಶ್ರೀ ರಾಜ ಬೊಪ್ಪೇಗೌಡನಪುರದ ಶ್ರೀಗಳು ಭಾಗವಹಿಸಿದ್ದರು, ಕಳೆದ ಮೂರು ದಿನಗಳಿಂದ ಧ್ವಜಾರೋಹಣ, ಗಣಪತಿ ಹೋಮ, ಪೂಜಾ ವಿಧಿವಿಧಾನಗಳು ಜರುಗಿದವು.

ಕಾರ್ಯಕ್ರಮದಲ್ಲಿ ಬಿಜೆಪಿ ಕ್ಷೇತ್ರ ಅಧ್ಯಕ್ಷ ಕೆ.ಸಿ. ಲೋಕೇಶ್, ತಾಲೂಕು ನಾಯಕರ ಸಂಘದ ಮಾಜಿ ಅಧ್ಯಕ್ಷರಾದ ಹೊನ್ನನಾಯಕ, ಚಿನ್ನಸ್ವಾಮಿ, ಶ್ರೀರಂಗರಾಜಪುರದ ಗುತ್ತಿಗೆದಾರ ಸಿದ್ದರಾಜು, ಗ್ರಾಪಂ ಮಾಜಿ ಅಧ್ಯಕ್ಷ ಪುಟ್ಟಸಿದ್ದಮ್ಮ, ರಂಗಸಮುದ್ರ ರಮೇಶ್, ಮುಖಂಡರುಗಳಾದ ಪುಟ್ಟಸ್ವಾಮಿ, ರಾಜೇಶ್, ಮಲ್ಲೇಶ್, ಲೋಕೇಶ್, ಕೆಬ್ಬೆ ನಾಗಣ್ಣ, ಎಸ್.ಪಿ. ಸುಂದರ್, ಬೆಂಗಳೂರು ಮಂಜುನಾಥ್ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಹೆಚ್.ಕೆ.ರಾಮು ಪರ ಮಾಜಿ ಶಾಸಕ ಮತಯಾಚನೆ



ಹೆಚ್.ಡಿ.ಕೋಟೆ,ಜೂ.10(ಮಂಜು)–ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಹಾಗೂ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರು ಪದವೀಧರರಿಗೆ ಮತ್ತು ಶಿಕ್ಷಕರಿಗೆ ದೊಡ್ಡ ಪ್ರಮಾಣದಲ್ಲಿ ಕೊಡುಗೆ ನೀಡಿದ್ದಾರೆ ಎಂದು ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ತಿಳಿಸಿದರು.

ಪಟ್ಟಣದ ಮಿನಿವಿಧಾನ ಸೌಧದಲ್ಲಿ ಮಾತನಾಡಿದ ಅವರು, ಐದನೇ ಮತ್ತು ಆರನೇ ವೇತನ ಆಯೋಗದಲ್ಲಿ 28 ಪರ್ಸೆಂಟ್ ವೇತನ ಹೆಚ್ಚಿಸುವ ವಿಚಾರದಲ್ಲಿ ಎಚ್.ಕೆ. ರಾಮು ಅವರು ಅತಿ ಹೆಚ್ಚು ಶ್ರಮ ವಹಿಸಿದ್ದಾರೆ, ಪದವೀಧರ ಶಿಕ್ಷಕರ ಅಭಿವೃದ್ಧಿ ವಿಚಾರದಲ್ಲಿ ಉತ್ತಮ ಕೆಲಸಗಳನ್ನು ಮಾಡುವಂತ ಅಭ್ಯರ್ಥಿ ಎಚ್.ಕೆ.ರಾಮು. ಅವರಿಗೆ ಮೊದಲ ಪ್ರಾಶಸ್ತ್ಯದ ಮತನೀಡಿ ಗೆಲ್ಲಿಸಿ ಎಂದರು. ಈ ಸಂದರ್ಭದಲ್ಲಿ ರಾಜೇಂದ್ರ, ಗೋಪಾಲಸ್ವಾಮಿ, ತಾಲೂಕು ಮಹಿಳಾ ಘಟಕದ ಅಧ್ಯಕ್ಷೆ ಗಾಯಿತ್ರಿ, ಜೆಡಿಎಸ್ ಪಕ್ಷದ ಹಿರಿಯ ಮುಖಂಡ ನರಸಿಂಹೆಗೌಡ, ಶಫಿವುಲ್ಲಾ, ಮಳಲಿ ಶಾಂತ, ಎಂ.ಡಿ. ಮಂಚಯ್ಯ, ನಾಗಣ್ಣ, ನಾಗನಾಯ್ಕ, ಶಾಂತ, ವೇಣು, ಇನ್ನು ಮುಂತಾದವರು ಹಾಜರಿದ್ದರು.

ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಿಸಲು ಮಾಜಿ ಶಾಸಕರ ಮನವಿ



ಬೆಟ್ಟದಪುರ, ಜೂ.10– ದಕ್ಷಿಣ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ. ಮಾದೇಗೌಡರಿಗೆ ತಾಲೂಕಿನ ಎಲ್ಲಾ ಮತದಾರರು ಮತ ಚಲಾಯಿಸುವ ಮೂಲಕ ಜಯಶೀಲರನ್ನಾಗಿ ಮಾಡುವಂತೆ ಮಾಜಿ ಶಾಸಕ ಕೆ.ವೆಂಕಟೇಶ್ ಮನವಿ ಮಾಡಿದ್ದಾರೆ.

ಬೆಟ್ಟದಪುರದ ಪದವೀಧರ ಮತದಾರರನ್ನು ಭೇಟಿ ಮಾಡಿ ಮಾತನಾಡಿದ ಅವರು ಪದವೀಧರರ ಸಮಸ್ಯೆಗಳನ್ನು ಹತ್ತಿರದಿಂದ ಬಲ್ಲವರಾಗಿದ್ದು, ಅವರ ಸಮಸ್ಯೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಲು ಹಾಗೂ ಅವರ ಸಮಸ್ಯೆಗಳ ಪರಿಹಾರಕ್ಕೆ ಹೋರಾಟ ನಡೆಸಲು ಮಧು ಜಿ ಮಾದೇಗೌಡರು ಉತ್ತಮ ವ್ಯಕ್ತಿಯಾಗಿದ್ದಾರೆ. ಆದ್ದರಿಂದ ಉತ್ತಮ ವ್ಯಕ್ತಿಗೆ ತಮ್ಮ ಮೊದಲ ಪ್ರಾಶಸ್ತ್ಯ ಮತ ನೀಡಿ ಅವರನ್ನು ಜಯಶೀಲರಾಗುವಂತೆ ಮಾಡಬೇಕೆಂದು ಮನವಿ ಮಾಡಿದರು.

ಅಲ್ಲದೆ ಮಧು ಅವರ ತಂದೆ ಜಿ ಮಾದೇಗೌಡರು ಕಾವೇರಿ ನೀರಾವರಿ ಹೋರಾಟಕ್ಕೆ ಹಾಗೂ ಹಲವಾರು ಶಿಕ್ಷಣ ಸಂಸ್ಥೆಗಳನ್ನು ತೆರೆದು ಸಾವಿರಾರು ಜನರಿಗೆ ವಿದ್ಯಾದಾನ ಮಾಡಿ ನೂರಾರು ಜನರಿಗೆ ಉದ್ಯೋಗವನ್ನು ನೀಡಿದ್ದಾರೆ. ಇಂತಹ ಮಹಾನ್ ವ್ಯಕ್ತಿಯ ಹೆಸರಿಗೆ ಗೌರವ ನೀಡಬೇಕಾದರೆ ಮಧು ಜಿ ಮಾದೇಗೌಡ ಅವರನ್ನು ಗೆಲ್ಲಿಸಬೇಕೆಂದು ಕೆ ವೆಂಕಟೇಶ್ ಮನವಿ ಮಾಡಿದರು.

ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಪಿ.ಪ್ರಶಾಂತ್ ಗೌಡ, ಗ್ರಾಪಂ ಮಾಜಿ ಅಧ್ಯಕ್ಷ ಚನ್ನಕೇಶವ, ಹಾಲಿ ಸದಸ್ಯೆ ಸುಮಲತಾ, ಶಿಲ್ಪಾ, ವಿಎಸ್ಎಸ್ಎನ್ ನಿರ್ದೇಶಕ ದಿಲೀಪ್, ನರಸಿಂಹೇಗೌಡ, ಪ್ರಶಾಂತ್, ಗ್ರಾಪಂ ಮಾಜಿ ಸದಸ್ಯ ಜಯರಾಮೇಗೌಡ, ಮೈಲಾರಿಗೌಡ, ಅತ್ತಿಗೋಡು ಸುರೇಶ್, ಬೇಕರಿ ಮಹೇಶ್ ಹಾಗೂ ಇನ್ನೂ ಹಲವರು ಹಾಜರಿದ್ದರು

ಗಾವಡಗೆರೆ ಗ್ರಾಪಂ ಅಧ್ಯಕ್ಷರಾಗಿ ಲೀಲಾವತಿ ಆಯ್ಕೆ



ಹಿರೀಕ್ಯಾತನಹಳ್ಳಿ, ಜೂ.10– ಹುಣಸೂರು ತಾಲೂಕಿನ ಗಾವಡಗೆರೆ ಗ್ರಾಪಂ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಲೀಲಾವತಿ ಹಾಗೂ ಉಪಾಧ್ಯಕ್ಷರಾಗಿ ಜ್ಯೋತಿ ಅವಿರೋಧವಾಗಿ ಆಯ್ಕೆಯಾದರು.

ಅಧ್ಯಕ್ಷೆ ಮಧುಮತಿ ಹಾಗೂ ಉಪಾಧ್ಯಕ್ಷ ಕೃಷ್ಣಯ್ಯ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಬುಧವಾರ ಚುನಾವಣೆ ನಡೆಯಿತು. ಅಧ್ಯಕ್ಷ ಸ್ಥಾನಕ್ಕೆ ಲೀಲಾವತಿ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಜ್ಯೋತಿ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದ ಹುಣಸೂರು ಹಾರಂಗಿ ನೀರಾವರಿ ಇಲಾಖೆಯ ಸಹಾಯಕ ಕಾರ್ಯಪಾಲಕ ಸುರೇಶ್ ಅವಿರೋಧ ಆಯ್ಕೆ ಘೋಷಿಸಿದರು.

ಒಟ್ಟು 13 ಸದಸ್ಯ ಬಲ ಹೊಂದಿರುವ ಪಂಚಾಯಿತಿಯಲ್ಲಿ ನಡೆದ ಚುನಾವಣೆಗೆ 8 ಸದಸ್ಯರು ಹಾಜರಿದ್ದು 5 ಸದಸ್ಯರು ಗೈರು ಹಾಜರಾಗಿದ್ದರು. ಅಧ್ಯಕ್ಷರ ಆಯ್ಕೆ ಘೋಷಣೆಯಾಗುತ್ತಿದ್ದಂತೆ ಪಕ್ಷದ ಕಾರ್ಯಕರ್ತರು ಅಭಿಮಾನಿಗಳು ಪಟಾಕಿ ಸಿಡಿಸಿ ಸಂಭ್ರಮಿಸಿದರು.


ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಶಾಸಕ ಹೆಚ್.ಪಿ.ಮಂಜುನಾಥ್ ಅಭಿನಂದಿಸಿದರು. ಗ್ರಾಪಂ ಸದಸ್ಯರಾದ ಶ್ರೀನಾಥ್, ಲೋಕೇಶ್, ಮಧುಮತಿ ಬಾಯಿ, ಕೃಷ್ಣಯ್ಯ, ಲತಾ, ಪ್ರದೀಪ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ದೇವರಾಜ್, ಟಿ.ವಿ.ನಾರಾಯಣ್, ಮುಖಂಡರಾದ ಸಾವಿತ್ರಮ್ಮ, ರಮೇಶ್, ಬಸವರಾಜ್, ತಿಮ್ಮನಾಯಕ, ಗಣಪತಿ, ಲೋಕೇಶ್, ಶಿವಪ್ರಸಾದ್, ರಾಮಚಂದ್ರ ನಾಗರಾಜು, ಜಯಣ್ಣ, ಕೃಷ್ಣನಾಯಕ, ಲಕ್ಷ್ಮಣ, ಜಗದೀಶ್ ಇದ್ದರು.

ಕುಡುಕ ಗಂಡನನ್ನು ಕೊಂದ ಪತ್ನಿ, ಮಗನ ಬಂಧನ

ನಂಜನಗೂಡು, ಜೂ.10– ಕುಡಿದು ಬಂದು ಗಲಾಟೆ ಮಾಡುತ್ತಿದ್ದ ಗಂಡನನ್ನು ತಾಯಿ–ಮಗ ಸೇರಿ ಕೊಲೆ ಮಾಡಿರುವ ಘಟನೆ ತಾಲೂಕಿನ ಹದಿನಾರು ಮೊಳೆ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ವಾಸಿ ಸಣ್ಣಮಾದಶೆಟ್ಟಿ ಮೃತ ದುರ್ದೈವಿ. ಮದ್ಯ ವ್ಯಸನಿಯಾದ ಸಣ್ಣಮಾದಶೆಟ್ಟಿ(51) ಪ್ರತಿದಿನ ಕುಡಿದು ಬಂದು ಮನೆಯವರೊಂದಿಗೆ ಜಗಳವಾಡುತ್ತಿದ್ದ. ಗುರುವಾರ ರಾತ್ರಿ ಗಲಾಟೆ ಮಿತಿ ಮೀರಿದ್ದು ಸಣ್ಣಮಾದಶೆಟ್ಟಿಯ ಪತ್ನಿ ಚಿಕ್ಕಮ್ಮ(45) ಹಾಗೂ ಮಗ ಶ್ರೀನಿವಾಸ(23) ಅವರುಗಳು ಒನಕೆಯಿಂದ ಹಲ್ಲೆ ನಡೆಸಿ ಕೊಲೆ ಮಾಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆ ನಂತರ ತಲೆಮರೆಸಿ ಕೊಂಡಿದ್ದ ತಾಯಿ ಮತ್ತು ಮಗನನ್ನು ವಶಕ್ಕೆ ಪಡೆಯಲಾಗಿದೆ ಎಂದು ಗ್ರಾಮಾಂತರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಶಿವನಂಜ ಶೆಟ್ಟಿ ತಿಳಿಸಿದ್ದಾರೆ. ಈ ಸಂಬಂಧ ನಂಜನಗೂಡು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಟಿಎಪಿಸಿಎಂಎಸ್ ಕಾರ್ಯದರ್ಶಿಗೆ ಬೀಳ್ಕೊಡುಗೆ



ಹುಣಸೂರು, ಜೂ.10(ಕೆಕೆ)– ಹುಣಸೂರಿನ ಟಿಎಪಿಸಿಎಂಎಸ್ ಕಚೇರಿ ಸಭಾಂಗಣದಲ್ಲಿ ನಡೆದ ಸರಳ ಸಮಾರಂಭದಲ್ಲಿ ನಿವೃತ್ತರಾದ ಟಿಎಪಿಸಿಎಂಎಸ್ ಕಾರ್ಯದರ್ಶಿ ದೇವರಾಜಮೂರ್ತಿ ಅವರನ್ನು ಬೀಳ್ಕೊಡಲಾಯಿತು.

ಮೈಮುಲ್ ನಿರ್ದೇಶಕ ಕೆ.ಎಸ್.ಕುಮಾರ್, ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷ ಹರೀಶ್‌ಗೌಡ, ಸಂಘದ ಉಪಾಧ್ಯಕ್ಷ ನಾಗರಾಜು, ಪ್ರಭಾರ ಕಾರ್ಯದರ್ಶಿ ಹೇಮಲತಾ, ಸಹಕಾರ ಸಂಘದ ಸಹಾಯಕ ನಿರ್ದೇಶಕ ಪ್ರಕಾಶ್‌ರಾವ್, ಸಂಘದ ನಿರ್ದೇಶಕರಾದ ಜಿ.ಎಂ.ವೆಂಕಟೇಶ್, ಚಂದ್ರಶೇಖರ್, ಶ್ರೀಗೌಡ, ಹೆಚ್.ಟಿ.ಬಾಬು, ಬಸವಲಿಂಗಯ್ಯ, ಪ್ರೇಮಕುಮಾರ್, ಗೋವಿಂದೇಗೌಡ, ರೇವಣ್ಣ, ಸುಜಾತ, ಸಂಘದ ನೌಕರರಾದ ಹೆಚ್.ಪಿ. ರವಿಕುಮಾರ್, ವೆಂಕಟೇಶ್, ಮಧು, ಸುದರ್ಶನ್, ರಾಘವೇಂದ್ರ ಉಪಸ್ಥಿತರಿದ್ದರು.

ವಿದ್ಯುತ್ ಸ್ಪರ್ಶದಿಂದ ಕೂಲಿ ಕಾರ್ಮಿಕ ಸಾವು

ಹೆಚ್.ಡಿ.ಕೋಟೆ, ಜೂ.10(ಮಂಜು)– ವಿದ್ಯುತ್ ಸ್ಪರ್ಶದಿಂದ ಕೂಲಿ ಕಾರ್ಮಿಕ ಮೃತಪಟ್ಟಿರುವ ಘಟನೆ ಶುಕ್ರವಾರ ತಾಲೂಕಿನ ಮದ್ದೂರು ಗ್ರಾಮದಲ್ಲಿ ನಡೆದಿದೆ.

ತಾಲೂಕಿನ ಹೈರಿಗೆ ಗ್ರಾಮದ ತಾಲೂಕು ಪಂಚಾಯತಿ ಮಾಜಿ ಸದಸ್ಯ ಮಾದಯ್ಯ ಅವರ ಮಗ ಪ್ರತಾಪ್ (22) ಮೃತಪಟ್ಟ ಕೂಲಿ ಕಾರ್ಮಿಕ. ವಿದ್ಯುತ್ ಗುತ್ತಿಗೆದಾರ ನಾರಾಯಣ ಎಂಬುವರು ಮದ್ದೂರು ಗ್ರಾಮದ ಬಳಿ ನೂತನವಾಗಿ ತಲೆ ಎತ್ತಿರುವ ಲೇಔಟ್‌ನಲ್ಲಿ ವಿದ್ಯುತ್ ಕಂಬಕ್ಕೆ ವಿದ್ಯುತ್ ತಂತಿ ಅಳವಡಿಸುವ ಕೆಲಸಕ್ಕೆ ತಾಲೂಕಿನ ಹೈರಿಗೆ ಗ್ರಾಮದ ವಿದ್ಯುತ್ ಕಂಬದ ಕೆಲಸ ಮಾಡುವ ಕೂಲಿ ಕಾರ್ಮಿಕರನ್ನು ಕರೆದುಕೊಂಡು ಹೋಗಿದ್ದಾರೆ.

ಪ್ರತಾಪ್ ವಿದ್ಯುತ್ ಕಂಬದಿಂದ ಕಂಬಕ್ಕೆ ತಂತಿ ಎಳೆಯುತ್ತಿದ್ದ ಸಂದರ್ಭದಲ್ಲಿ ಆಕಸ್ಮಿಕವಾಗಿ ವಿದ್ಯುತ್ ಹರಿದಿದೆ. ಇದರಿಂದ ವಿದ್ಯುತ್ ಸ್ಪರ್ಶಗೊಂಡು ಕಂಬದ ಮೇಲೆಯೇ ಮೃತಪಟ್ಟಿದ್ದಾನೆ.

ಮೃತದೇಹವನ್ನು ಗುತ್ತಿಗೆದಾರ ಎಚ್.ಡಿ.ಕೋಟೆ ಸಾರ್ವಜನಿಕ ಆಸ್ಪತ್ರೆಗೆ ತರುವ ಬದಲು ಮೈಸೂರಿನ ಕೆ.ಆರ್.ಆಸ್ಪತ್ರೆ ಶವಗಾರಕ್ಕೆ ರವಾನಿಸಿದ್ದಾರೆ ಎಂದು ಮೃತನ ಸಂಬಂಧಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಗುತ್ತಿಗೆದಾರ, ಲೈನ್ ಮ್ಯಾನ್ ಹಾಗೂ ಇಂಜಿನಿಯರ್ ವಿರುದ್ಧ ಮೃತನ ಸಂಬಂಧಿಕರು ದೂರು ನೀಡಿದ್ದು, ಎಚ್.ಡಿ.ಕೋಟೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಅಪ್ರಾಪ್ತ ಬಾಲಕಿ ಅಪಹರಿಸಿ, ಲೈಂಗಿಕ ಕಿರುಕುಳ

● ಸಂಬಂಧಿಕರ ವಿರುದ್ಧ ಪ್ರಕರಣ ದಾಖಲು ● ಚಿನ್ನಾಭರಣ ದೋಚಿ, ಬಾಲ ಮಂದಿರಕ್ಕೆ ಸೇರಿಸಿದ ಆರೋಪ

ನಂಜನಗೂಡು, ಜೂ.10– ಅಪ್ರಾಪ್ತ ಬಾಲಕಿಯನ್ನು ಅಪಹರಿಸಿ, ಲೈಂಗಿಕ ಕಿರುಕುಳ ನೀಡಿದ್ದಲ್ಲದೇ ಚಿನ್ನಾಭರಣ ಕಸಿದು ಬಾಲ ಮಂದಿರಕ್ಕೆ ಸೇರಿಸಿದ ಆರೋಪದ ಮೇರೆಗೆ ಬಾಲಕಿಯ ಸಂಬಂಧಿಕರ ವಿರುದ್ಧ ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯಲ್ಲಿ ತಡವಾಗಿ ದೂರು ದಾಖಲಿಸಲಾಗಿದೆ.

ನಂಜನಗೂಡಿನಲ್ಲಿ ತಂದೆ ಮತ್ತು ಅಜ್ಜಿಯೊಂದಿಗೆ ವಾಸವಿದ್ದು, ಪಿಯುಸಿ ವ್ಯಾಸಂಗ ಮಾಡುತ್ತಿರುವ 17 ವರ್ಷದ ಬಾಲಕಿ ಈ ಸಂಬಂಧ ದೂರು ದಾಖಲಿಸಿದ್ದು, ಆಕೆಯ ಸಂಬಂಧಿಕರಾದ ಅರುಣ, ಅಭಿ ಮತ್ತು ಇವರಿಬ್ಬರ ಚಿಕ್ಕಮ್ಮ ಅಶ್ವಿನಿ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ವಿವರ: ಈ ಅಪ್ರಾಪ್ತ ಬಾಲಕಿ ಹೆಚ್.ಡಿ. ಕೋಟೆ ತಾಲೂಕು ಕಾರಾಪುರದಲ್ಲಿರುವ ದೊಡ್ಡಪ್ಪನ ಮನೆ ಗೃಹಪ್ರವೇಶಕ್ಕೆ ಕಳೆದ ವರ್ಷ ತೆರಳಿದ್ದಾಗ ಈಕೆಯ ಸಂಬಂಧಿಕನೇ ಆದ ಅರುಣ ಪರಿಚಯವಾಗಿ ಇವರಿಬ್ಬರು ಪರಸ್ಪರ ಪ್ರೀತಿಸುತ್ತಿದ್ದರು. ಆದರೆ ಈಕೆಗೆ ತಮಿಳುನಾಡಿನ ಯುವಕನೊಂದಿಗೆ ಜೊತೆ ಮದುವೆ ಮಾಡಲು ಕಳೆದ ಫೆ.6ರಂದು ನಿಶ್ಚಿತಾರ್ಥ ಮಾಡಲಾಗಿತ್ತು. ಈ ವಿಷಯ ತಿಳಿದು ಫೆ.15ರಂದು ಬಾಲಕಿ ಮನೆಗೆ ಬಂದ ಅರುಣ ಮತ್ತು ಅಭಿ, ಮೈಸೂರಿನಲ್ಲಿರುವ ಅವರ ಚಿಕ್ಕಮ್ಮ ಅಶ್ವಿನಿ ನೋಡಬೇಕೆನ್ನುತ್ತಿದ್ದಾರೆ ಎಂದು ಬಾಲಕಿಯನ್ನು ಮೈಸೂರಿನ ಕುಂಬಾರ ಕೊಪ್ಪಲಿನ ಅಶ್ವಿನಿ ಮನೆಗೆ ಕರೆದೊಯ್ದರು ಎಂದು ದೂರಿನಲ್ಲಿ ತಿಳಿಸಲಾಗಿದೆ.

ಅರುಣನನ್ನೇ ಮದುವೆಯಾಗಬೇಕೆಂದು ಅಶ್ವಿನಿ ಒತ್ತಾಯಿಸಿದಾಗ ಬಾಲಕಿಯು ಈಗಾಗಲೇ ನನಗೆ ನಿಶ್ಚಿತಾರ್ಥವಾಗಿದ್ದು, ಅರುಣನನ್ನು ನಿರಾಕರಿಸಿದ್ದಾಳೆ. ಆಗ ಆಕೆಯನ್ನು 3ದಿನ ಅಕ್ರಮ ಬಂಧನದಲ್ಲಿಟ್ಟು, ಆಕೆಯ ಬಳಿ ಇದ್ದ 42 ಗ್ರಾಂ ತೂಕದ ಚಿನ್ನಾಭರಣ ಹಾಗೂ ಮೊಬೈಲ್ ಕಸಿದುಕೊಂಡು ಪೊಲೀಸರಿಗೆ ಕರೆ ಮಾಡಿ ಕರೆಸಿಕೊಂಡು ಅವರ ಮೂಲಕ ಬಾಲಕಿಯನ್ನು ಬಾಲ ಮಂದಿರಕ್ಕೆ ಕಳುಹಿಸಿದ್ದಾರೆ. ಈ ವಿಷಯ ತಿಳಿದು ಬಾಲಕಿ ಅಜ್ಜಿ ಮಾ.15 ರಂದು ಆಕೆಯನ್ನು ಬಾಲ ಮಂದಿರದಿಂದ ಮನೆಗೆ ಕರೆ ತಂದಿದ್ದಾರೆ ಎಂದು ಬಾಲಕಿ ನೀಡಿರುವ ದೂರಿನಲ್ಲಿ ತಿಳಿಸಲಾಗಿದ್ದು, ಮದುವೆಯಾಗುವುದಾಗಿ ಹೇಳಿ ತನ್ನ ಮೇಲೆ ಲೈಂಗಿಕ ಕ್ರಿಯೆ ನಡೆಸಿ, ಅಕ್ರಮ ಬಂಧನದಲ್ಲಿಟ್ಟು ಚಿನ್ನಾಭರಣ ಕಿತ್ತುಕೊಂಡಿರುವ ಅರುಣ, ಅಭಿ ಮತ್ತು ಅಶ್ವಿನಿ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಜೂ.3ರಂದು ಬಾಲಕಿ ನೀಡಿದ ದೂರಿನ ಮೇರೆಗೆ ಭಾರತೀಯ ದಂಡ ಸಂಹಿತೆ 342, 420, 34 ಮತ್ತು ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿರುವ ನಂಜನಗೂಡು ಪಟ್ಟಣ ಠಾಣೆ ಪೊಲೀಸರು ಆರೋಪಿಗಳ ಪತ್ತೆಗಾಗಿ ಬಲೆ ಬೀಸಿದ್ದಾರೆ.

ಜೂ.14ರಂದು ಕೆಲವೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಜೂ.10– ತ್ರೈಮಾಸಿಕ ಅವಧಿಯ ನಿರ್ವಹಣಾ ಕಾಮಗಾರಿ ಹಿನ್ನೆಲೆಯಲ್ಲಿ ಜೂ.14ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5.30ರವರೆಗೆ ರಮ್ಮನಹಳ್ಳಿ, ಕಾಳಿಸಿದ್ದನಹುಂಡಿ, ಹಂಚ್ಯ, ಸಾತಗಳ್ಳಿ, ಗಳಿಗರಹುಂಡಿ, ನೆಹರು ನಗರ, ಸಾತಗಳ್ಳಿ ಗ್ರಾಮ, ಡಿ.ಟಿ.ಎಸ್.ರಾವ್ ನಗರ, ವಿಟಿಯೂ ಕಾಲೇಜು ಎದುರು, ಸನ್ ಪ್ಯೂರ್ ಬಡಾವಣೆ, ಸಾತಗಳ್ಳಿ ಬಿ ಜೋನ್, ವಿಟಿಯೂ ಕಾಲೇಜು, ಭಾರತ್ ನಗರ, ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕೆ.ಆರ್. ಆಸ್ಪತ್ರೆಯಲ್ಲಿ ಸ್ಟಾಫ್ ನರ್ಸ್‌ಗಳ ಕೊರತೆ

● 1,200 ಮಂದಿ ಜಾಗದಲ್ಲಿ ಕೇವಲ 250 ಜನ ಕಾರ್ಯನಿರ್ವಹಣೆ
● ಗುಣಮಟ್ಟದ ಚಿಕಿತ್ಸೆ ಲಭಿಸದೆ ಬಹುತೇಕ ಬಡ ರೋಗಿಗಳು ಕಂಗಾಲು

ಮೈಸೂರು, ಜೂ. 10 (ಆರ್‌ಕೆ)– ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಅಧೀನದ 1050 ಹಾಸಿಗೆ ಸಾಮರ್ಥ್ಯದ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಸ್ಟಾಫ್ ನರ್ಸ್‌ಗಳ ತೀವ್ರ ಕೊರತೆ ಉಂಟಾಗಿದೆ.



ಸದಾ 850 ರಿಂದ 900 ಮಂದಿ ಒಳ ರೋಗಿಗಳಿರುವ ಈ ದೊಡ್ಡಾಸ್ಪತ್ರೆಯಲ್ಲಿ ದಿನಕ್ಕೆ 1200 ರಿಂದ 1600 ಮಂದಿ ಹೊರ ರೋಗಿಗಳ ವಿಭಾಗದಲ್ಲಿ ಚಿಕಿತ್ಸಾ ಪಡೆಯುತ್ತಿದ್ದಾರೆ. ರಾಷ್ಟ್ರೀಯ ವೈದ್ಯಕೀಯ ಮಂಡಳಿ (National Medical Council) ನಿಯಮದ ಪ್ರಕಾರ ಕೆ.ಆರ್. ಆಸ್ಪತ್ರೆಯಲ್ಲಿ 1200 ಮಂದಿ ಶುಶ್ರೂಷಕರಿರಬೇಕು. ಆದರೆ ದಿನದ ಮೂರೂ ಪಾಳಿಯಲ್ಲಿ ಸ್ಟೈಫಂಡರಿ ಆಧಾರದಲ್ಲಿ ತಾತ್ಕಾಲಿಕವಾಗಿ ನೇಮಕಗೊಂಡವರೂ ಸೇರಿ ಕೇವಲ 250 ಮಂದಿ ಸೇವೆ ಸಲ್ಲಿಸುತ್ತಿದ್ದಾರೆ.

ಈ ಮೊದಲು ಮೆಡಿಸಿನ್, ಆರ್ಥೋ, ಸರ್ಜರಿ, ಅಪ್ತಾಮಾಲಜಿ, ಸ್ಕಿನ್ ವಿಭಾಗಗಳು ಮಾತ್ರ ಇದ್ದವು. ಇದೀಗ ಯುರಾಲಜಿ, ಪ್ಲಾಸ್ಟಿಕ್ ಸರ್ಜರಿ, ನ್ಯೂರಾಲಜಿ, ಆಂಕಾಲಜಿ ಸೇರಿದಂತೆ ಒಟ್ಟು 20 ವಿಭಾಗಗಳಿವೆ.

ಒಳರೋಗಿ ವಿಭಾಗದ ವಾರ್ಡ್‌ಗಳು (inpatient), ಅಪಘಾತ ತುರ್ತು ಚಿಕಿತ್ಸಾ ವಿಭಾಗ (Casualty), ಸಿಒಟಿ (Casualty Operation Theatre), ತುರ್ತು ಚಿಕಿತ್ಸಾ ವಿಭಾಗ (Emergency Ward), ಐಸಿಯು, ಎಂಐಸಿಯು, ಆರ್‌ಐಸಿಯು, ಸಾರಿ ವಾರ್ಡ್, ಎಸ್‌ಐಸಿಯು, ಸೆಂಟ್ರಲ್ ಲ್ಯಾಬೋರೇಟರಿ, ರೇಡಿಯಾಲಜಿಯಂತಹ ವಿಭಾಗಗಳಲ್ಲಿ ದಿನದ 24 ಗಂಟೆಯೂ ಸೇವೆ ಒದಗಿಸಬೇಕು. ಜೊತೆಗೆ ಒಳರೋಗಿ ವಿಭಾಗಗಳು ಸದಾ ಕಾರ್ಯ ನಿರ್ವಹಿಸಬೇಕು.

ಹೊರ ರೋಗಿ ವಿಭಾಗ, ಚರ್ಮರೋಗ, ಇಎನ್‌ಟಿ, ಆಡಳಿತ ಕಚೇರಿ ಹೊರತುಪಡಿಸಿದಲ್ಲಿ ಕೆ.ಆರ್. ಆಸ್ಪತ್ರೆಯ ಉಳಿದ ಎಲ್ಲಾ ವಿಭಾಗಗಳು 24x7 ಮಾದರಿಯಲ್ಲಿ ಕೆಲಸ ಮಾಡುತ್ತಿರುವುದರಿಂದ ದಿನದ 3 ಪಾಳಿಯಲ್ಲಿ ನರ್ಸ್, ಪಿಜಿ ಸ್ಟೂಡೆಂಟ್‌ಗಳು, ಗ್ರೂಪ್ ಡಿ ಸಿಬ್ಬಂದಿ ಕೆಲಸ ಮಾಡಲೇಬೇಕಾಗಿರುವುದರಿಂದ ಪ್ರಸ್ತುತ ಲಭ್ಯವಿರುವ ಕೇವಲ 250 ಮಂದಿ ಶುಶ್ರೂಷಕರು ರೋಗಿಗಳ ಆರೈಕೆ ಮಾಡುವುದು ದುಸ್ತರವಾಗಿದೆ.

50–60 ರೋಗಿಗಳಿಗೊಬ್ಬರಂತೆ ನರ್ಸ್‌ಗಳು ಸೇವೆ ಸಲ್ಲಿಸುತ್ತಿದ್ದು, ಅದರಲ್ಲೂ ರಾತ್ರಿ ಪಾಳಿಯಲ್ಲಿ ಸೇವೆ ಗುಣಮಟ್ಟ ಕುಸಿದಿರುವ ಕಾರಣ ರೋಗಿಗಳು ಪರದಾಡುವಂತಾಗಿದೆ. ದಿನೇ ದಿನೇ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿದ್ದರೆ, ನಿವೃತ್ತಿಯಾಗುತ್ತಿರುವವರ ಸ್ಥಾನಕ್ಕೆ ನೇಮಕವಾಗದ ಕಾರಣ ನರ್ಸ್‌ಗಳ ಅಭಾವವುಂಟಾಗಿದೆ.

ವೈದ್ಯಕೀಯ ಕಾಲೇಜಿನಿಂದ ಮಾಸಿಕ 12,500 ರೂ. ಸ್ಟೈಫಂಡ್ ನಿಗದಿಪಡಿಸಿ ತಾತ್ಕಾಲಿಕವಾಗಿ ನೇಮಿಸಿಕೊಂಡ ನರ್ಸ್‌ಗಳು, ಕಡಿಮೆ ವೇತನ ಹಾಗೂ ಕೆಲಸದ ಒತ್ತಡ ನಿಭಾಯಿಸಲಾರದೇ ಕೆಲಸ ಬಿಟ್ಟು ಹೋಗುತ್ತಿದ್ದಾರೆ. ಕನಿಷ್ಠ 20 ರಿಂದ 25 ಸಾವಿರ ಸ್ಟೈಫಂಡ್ ನೀಡಿದಲ್ಲಿ ಅವರು ಉಳಿಯುವ ಸಾಧ್ಯತೆ ಇದೆ. ಖಾಸಗಿ ಆಸ್ಪತ್ರೆಗಳಲ್ಲಿ ಸಂಬಳ ಮತ್ತು ಸೌಲಭ್ಯಗಳು ಅನುಕೂಲಕರವಾಗಿರುವುದು ಹಾಗೂ ಇಲ್ಲಿ ಅಧಿಕ ಕಾರ್ಯ ಒತ್ತಡದ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ನೇಮಕಗೊಂಡ ಶುಶ್ರೂಷಕರು ಕೆ.ಆರ್. ಆಸ್ಪತ್ರೆಯಲ್ಲಿ ಸೇವೆ ಮುಂದುವರಿಸಲು ಆಸಕ್ತಿ ತೋರಿಸುತ್ತಿಲ್ಲ. ಖಾಯಂ ಸೇವೆಯಲ್ಲಿರುವವರ ಸಂಖ್ಯೆ ಕೇವಲ 30 ಮಂದಿ ಮಾತ್ರ ಅದೇ ರೀತಿ ಸೆಕ್ಯೂರಿಟಿ, ವಾರ್ಡ್ ಬಾಯ್, ಸ್ವಚ್ಛತಾ ಸಿಬ್ಬಂದಿಗಳನ್ನೂ ಹೊರ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲಾಗುತ್ತಿದೆ.

ಕಳೆದ ಹಲವು ವರ್ಷಗಳಿಂದ ನರ್ಸ್‌ಗಳ ನೇಮಕವಾಗದಿರುವುದು ಈ ಸಮಸ್ಯೆಗೆ ಕಾರಣವಾಗಿದೆ. 30 ಮಂದಿ ಖಾಯಂ ಶುಶ್ರೂಷಕರಿಂದ ಇಡೀ ಆಸ್ಪತ್ರೆ ನಿರ್ವಹಿಸಲು ಸಾಧ್ಯವಿಲ್ಲ ಎಂಬುದನ್ನು ಮನಗಂಡು ಸ್ಟೈಫಂಡರಿ ಆಧಾರದಲ್ಲಿ ನೇಮಕ ಮಾಡಲಾಗುತ್ತಿತ್ತು. ಅವರೂ ಸಂಬಳ ಕಡಿಮೆ ಎಂದು ಹೇಳಿ ಬಿಟ್ಟು ಹೋಗುತ್ತಿದ್ದಾರೆ. ಎಲ್ಲಾ ವಿಭಾಗಗಳಲ್ಲಿ 150 ವೈದ್ಯರು ಹಾಗೂ 150 ಮಂದಿ ಪಿಜಿ ಡಾಕ್ಟರ್‌ಗಳು ಸೇವೆ ಒದಗಿಸುತ್ತಿದ್ದಾರೆ.

ಓಪಿಡಿ, ಒಳರೋಗಿ ವಿಭಾಗಗಳಲ್ಲಿ ಪಿಜಿ ವಿದ್ಯಾರ್ಥಿಗಳೇ ಬಹುತೇಕ ಸೇವೆ ಒದಗಿಸುತ್ತಿದ್ದು, ಎಮರ್ಜೆನ್ಸಿ ವಾರ್ಡ್‌ನಲ್ಲೂ ಸ್ಟಾಫ್‌ನರ್ಸ್‌ಗಳ ಕೊರತೆಯಿಂದ ರೋಗಿಗಳಿಗೆ ತೀವ್ರ ತೊಂದರೆಯಾಗಿದೆ.



ದಲಿತ ಸಂಸ್ಕೃತಿ ಪ್ರತಿನಿಧಿಸದೆ ಆರ್‌ಎಸ್‌ಎಸ್ ಸಂಸ್ಕೃತಿ ಪ್ರತಿನಿಧಿಸುತ್ತಿರುವ

ಶಾಸಕ ಛಲವಾದಿ, ಎನ್.ಮಹೇಶ್ ರಾಜೀನಾಮೆಗೆ ಆಗ್ರಹ

ಮೈಸೂರು, ಜೂ.10(ಆರ್‌ಕೆಬಿ)– ದಲಿತ ಸಂಸ್ಕೃತಿ ಪ್ರತಿನಿಧಿಸದೆ ಆರ್‌ಎಸ್‌ಎಸ್ ಸಂಸ್ಕೃತಿಯನ್ನು ಪ್ರತಿನಿಧಿಸುತ್ತಿರುವ ಶಾಸಕರಾದ ಛಲವಾದಿ ನಾರಾಯಣ ಸ್ವಾಮಿ, ಎನ್.ಮಹೇಶ್ ಅವರು ಬಿಜೆಪಿ ಪಕ್ಷವನ್ನು ಧಿಕ್ಕರಿಸಿ ಹೊರ ಬರುವಂತೆ ದಲಿತ ವೆಲ್‌ಫೇರ್ ಟ್ರಸ್ಟ್ ಅಧ್ಯಕ್ಷ ಶಾಂತರಾಜು ಆಗ್ರಹಿಸಿದ್ದಾರೆ.



ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಧಿಕಾರದ ಆಸೆಯಿಂದ ಛಲವಾದಿ ನಾರಾಯಣಸ್ವಾಮಿ, ಎನ್. ಮಹೇಶ್ ಬಿಜೆಪಿ ಸೇರಿದ್ದಾರೆ. ದಲಿತರಿಗೆ ಅವಮಾನವಾಗುತ್ತಿದ್ದರೂ ಕಿಂಚಿತ್ತೂ ದನಿ ಎತ್ತುತ್ತಿಲ್ಲ ಕಿಂಚಿತ್ತಾದರೂ ಸ್ವಾಭಿಮಾನ ಇದ್ದರೆ ಬಿಜೆಪಿಗೆ ರಾಜೀನಾಮೆ ನೀಡಿ ಹೊರ ಬನ್ನಿ ಎಂದು ಒತ್ತಾಯಿಸಿದರು.

ಬಸವಲಿಂಗಪ್ಪನವರು ನಿಷೇಧಿಸಿದ್ದ ಮಲಹೊರುವ ಪದ್ಧತಿಯನ್ನು ಬಿಜೆಪಿ ದಲಿತ ನಾಯಕರಿಂದ ಆರ್‌ಎಸ್‌ಎಸ್ ಚಡ್ಡಿ ಹೊರಿಸುವ ಮೂಲಕ ಮತ್ತೆ ಆರಂಭಿಸಿದ್ದಾರೆ ಎಂದು ಆರೋಪಿಸಿದರು.

ಹೊರಳವಾಡಿ ನಂಜುಂಡಸ್ವಾಮಿ ಮಾತನಾಡಿ, ಜೀತಪದ್ಧತಿ, ಗುಲಾಮಗಿರಿ, ಮಲ ಹೊರುವುದೇ ದಲಿತರ ಕೆಲಸ ಎಂಬುದನ್ನು ನಾರಾಯಣಸ್ವಾಮಿ ಮೂಲಕ ಆರ್‌ಎಸ್‌ಎಸ್ ಸೂಚನೆ ಕೊಟ್ಟಿದೆ. ದಲಿತರಿಗೆ ಅಪಮಾನ ಮಾಡಿರುವ ನಾರಾಯಣ ಸ್ವಾಮಿ ಕೂಡಲೇ ದಲಿತರ ಕ್ಷಮೆ ಕೇಳಬೇಕು. ನಾರಾಯಣಸ್ವಾಮಿ ಅವರನ್ನು ದಲಿತರ ಕಾರ್ಯಕ್ರಮಗಳಿಗೆ ಆಹ್ವಾನಿಸದೆ, ಬಹಿಷ್ಕರಿಸುವ ಮೂಲಕ ತಕ್ಕಪಾಠ ಕಲಿಸಬೇಕಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಾಹಿತಿ ಸಿದ್ದಸ್ವಾಮಿ, ಚಿಕ್ಕಂದಾನಿ ಉಪಸ್ಥಿತರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ. 10– ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ವೀರಶೈವ ಲಿಂಗಾಯತ ಮಠಾಧಿಪತಿಗಳ ಗೋಷ್ಠಿಯು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಿಗೆ ಸೇರಿದ ಪ್ರತಿಭಾವಂತ ವೀರಶೈವ–ಲಿಂಗಾಯತ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ 10ನೇ ತರಗತಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು ಜೂ.30 ರೊಳಗೆ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಸಿ.ಮಹದೇವಪ್ರಸಾದ್, ಅವರನ್ನು ಮೊ. 9449030588 ಮೂಲಕ ಸಂಪರ್ಕಿಸಬಹುದು.

ಸಮಾಜ ಸೇವಕರಿಗೆ ಚೈತನಾರ್ಚನ ದತ್ತ ಪೀಠ ಪ್ರಶಸ್ತಿ ಪ್ರದಾನ



ಮೈಸೂರು,ಜೂ 10(ಜಿಎ)– ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರು 80ನೇ ಜನ್ಮ ದಿನಾಚರಣೆ ವರ್ಷದ ಪ್ರಯುಕ್ತ ಹಲವಾರು ವರ್ಷಗಳಿಂದ ಸಮಾಜ ಸೇವೆ ಸಲ್ಲಿಸುತ್ತಿರುವವರಿಗೆ ಶುಕ್ರವಾರ ಸಂಜೆ ಚೈತನಾರ್ಚನ ದತ್ತ ಪೀಠ ಪ್ರಶಸ್ತಿಯನ್ನು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರು ಪ್ರದಾನ ಮಾಡಿ ಆಶೀರ್ವದಿಸಿದರು.

ಅವಧೂತ ದತ್ತ ಪೀಠದ ಆವರಣದಲ್ಲಿ ಆಯೋಜಿದ್ದ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮೈಸೂರಿನ ನಂ.ಶ್ರೀಕಂಠಕುಮಾರ್, ಹೈದರಾಬಾದಿನ ಅಪ್ಪಲಾಕುಟ್ಟಿ ವೆಂಕಟಾಚಲ(ವೆಂಕಟಾಚಲಪತಿ), ಇಲ್ಲಾಂಟಿ ಮುರಳಿ, ಮದನಪಲ್ಲಿಯ ಕತ್ರಾಗಡ(ನಾದಪ್ರಸಾರ) ವೆಂಕಟೇಶ್ವರ ರಾವ್, ವಾರಂಗ್ಲ್ ನ ಡಾ.ಕೆ. ಲಕ್ಷ್ಮೀ ನಾರಾಯಣ, ಚೆನ್ನೈನ ಡಾ.ಎ. ಶಿವ ಸುಬ್ರಮಣ್ಯನ್ ಮತ್ತು ಹೈದರಬಾದಿನ ಡಾ.ಎಂ. ಕೊದಂಡ ರಾಮ ರೆಡ್ಡಿ ಅವರುಗಳಿಗೆ 'ದತ್ತ ಪೀಠ ಬಂಧು' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಇದೇ ವೇಳೆ ಇಲಾಂಟ ವಿಜಯಕುಮಾರಿ ಅಮ್ಮಗೆ ಜಯಲಕ್ಷ್ಮೀ ಪುರಸ್ಕಾರ, ಧರ್ಮವರಂನ ಬೆಸ್ತ ಸಾಂಬಶಿವ ಅವರಿಗೆ ಅಷ್ಟನಾ ತಂತುಕಾಯ ಮತ್ತು ಡಾ, ವಂಶಿ ಕೃಷ್ಣ ಜ್ಞಾನಪತಿ ಅವರಿಗೆ ವೇದ ನಿಧಿ ಎಂಬ ಪ್ರಶಸ್ತಿಗಳನ್ನು ನೀಡಿ ಅಭಿನಂದಿಸಿದರು.

ಕಾರ್ಯಕ್ರಮದಲ್ಲಿ ಅವಧೂತ ದತ್ತಶ್ರೀ ಗಣಪತಿ ಆಶ್ರಮದ ಕಿರಿಯ ಶ್ರೀಗಳಾದ ದತ್ತ ವಿಜಯಾನಂದ ಸ್ವಾಮೀಜಿ ಉಪಸ್ಥಿರಿದ್ದರು.

ಮಾಜಿ ಸಚಿವ ಹೆಚ್ ಡಿ ರೇವಣ್ಣ ಮತ ಸಿಂಧು

ಕೇಂದ್ರ ಚುನಾವಣಾ ಆಯೋಗದ ಆದೇಶ

ಬೆಂಗಳೂರು: ರಾಜ್ಯಸಭೆ ಚುನಾವಣೆಯಲ್ಲಿ ಮತವನ್ನು ತೋರಿಸಿ ಹಾಕಿದ್ದಾರೆ. ಈ ಮೂಲಕ ಗೌಪ್ಯ ಮತದಾನದ ನಿಯಮವನ್ನು ಮಾಜಿ ಸಚಿವ ಹೆಚ್.ಡಿ. ರೇವಣ್ಣ ಉಲ್ಲಂಘಿಸಿದ್ದಾರೆ ಎಂಬುದಾಗಿ ಕಾಂಗ್ರೆಸ್ ಹಾಗೂ ಬಿಜೆಪಿಯಿಂದ ಚುನಾವಣಾಧಿಕಾರಿಗೆ ದೂರು ನೀಡಲಾಗಿತ್ತು. ಅಲ್ಲದೇ ಹೆಚ್.ಡಿ.ರೇವಣ್ಣ ಅವರ ಮತವನ್ನು ಅಸಿಂಧುಗೊಳಿಸಲು ಮನವಿ ಮಾಡಲಾಗಿತ್ತು. ಆದರೆ ಅವರು ಗೌಪ್ಯತೆ ನಿಯಮ ಮೀರಿಲ್ಲ ಎಂದು ಚುನಾವಣಾಧಿಕಾರಿ ಕ್ಲೀನ್ ಚೀಟ್ ನೀಡಿದ್ದರು.



ಈ ಕ್ರಮ ಪ್ರಶ್ನಿಸಿ, ಈಗ ಮತ್ತೆ ಕಾಂಗ್ರೆಸ್ ಮೇಲ್ಮನವಿ ಸಲ್ಲಿಸಿತ್ತು. ಇದೀಗ ಕೇಂದ್ರ ಚುನಾವಣಾ ಆಯೋಗವೂ ಮತವನ್ನು ಸಿಂಧುಗೊಳಿಸಿ, ಆದೇಶಿಸಿದೆ. ಇಂದು ಕಾಂಗ್ರೆಸ್ ಪಕ್ಷದ ಚುನಾವಣಾ ಏಜೆಂಟ್ ಪ್ರಕಾಶ್ ರಾಥೋಡ್ ಅವರು, ಚುನಾವಣಾಧಿಕಾರಿಗೆ ಮತ್ತೊಂದು ಮೇಲ್ಮನವಿ ಪತ್ರವನ್ನು ಸಲ್ಲಿಸಿದ್ದು, ಈ ಪತ್ರದಲ್ಲಿ ಹೆಚ್.ಡಿ.ರೇವಣ್ಣ ಅವರು ಸುಪ್ರೀಂಕೋರ್ಟ್‌ನ ಮತದಾನದ ಗೌಪ್ಯ ನೀತಿಯನ್ನು ಉಲ್ಲಂಘಿಸಿದ್ದಾರೆ. ತಮ್ಮ ಮತವನ್ನು ಹಾಕುವ ಸಂದರ್ಭದಲ್ಲಿ ಬೇರೆಯವರಿಗೆ ತೋರಿಸಿ ಹಾಕಿದ್ದಾರೆ. ಅವರ ನಡೆಯನ್ನು ಕ್ಲೀನ್ ಚೀಟ್ ನೀಡಿದ್ದು ಸರಿಯಲ್ಲ, ಮತ್ತೊಮ್ಮೆ ಪರಿಶೀಲಿಸಿ, ಅವರ ಮತವನ್ನು ಅಸಿಂಧುಗೊಳಿಸುವಂತೆ ಮನವಿ ಮಾಡಿದ್ದಾರೆ. ಅಲ್ಲದೇ ಚುನಾವಣಾಧಿಕಾರಿ ನೀಡಿರುವಂತಹ ಆದೇಶವನ್ನು ರದ್ದುಗೊಳಿಸುವಂತೆ ಕೋರಿದ್ದರು.

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. 04-S&T/MYS/2022-01
ದಿನಾಂಕ: 07.06.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಎರಡು ವರ್ಷಗಳ ಅವಧಿಗೆ ರಾಮಗಿರಿ, ಹೊಳಲ್ಕೆರೆ, ಸಾಸಲು, ಮಾಯಕೊಂಡ, ಕೊಡಗನೂರು, ತೋಳಹುಣಸೆ, ದಾವಣಗೆರೆ, ಅಮರಾವತಿ ಕಾಲೋನಿ ಜಂ, ಹರಿಹರ, ಕುಮಾರಪಟ್ಟಣಂ ಸೈಡಿಂಗ್, ಚಳಗೇರಿ, ರಾಣೆಬೆನ್ನೂರು ಮತ್ತು ದೇವರಗುಡ್ಡ ನಿಲ್ದಾಣಗಳಲ್ಲಿ ಸ್ಥಾಪಿಸಿರುವ ಕೈಂಯೋಸನ್ ನಿರ್ಮಾಣದ ಎಲೆಕ್ಟ್ರಾನಿಕ್ ಇಂಟರ್‌ಲಾಕಿಂಗ್ ಸಿಸ್ಟಮ್‌ಗಳಿಗೆ ವಾರ್ಷಿಕ ನಿರ್ವಹಣೆ ಗುತ್ತಿಗೆ.	ರೂ. 2,11,11,200/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 28–06–2022, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಸಿಗ್ನಲ್ ಮತ್ತು ಟೆಲಿಕಾಂ ಇಂಜಿನೀಯರ್, ಮೈಸೂರು

PUB/135/AAV/PRB/SWR/2022-23

S.W.Railways SWRLY SWRRLY

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

IN THE COURT OF THE PRL CIVIL JUDGE (JR.DN.) AT VIRAJPET

O.S.No.138/2018

Plaintiff: Vijaya Bank, now Bank of Baroda, Bittangala Branch. **VS**
Defendants: Miss Nikath Azaj & others.
Defendant No. 1: Miss NIkath Azaj, Aged 24 years, D/o Ajaz.
Defendant No. 2: Mrs. Gulsheer G, Aged 44 years, W/o Late Ajaz Pasha, Both are in No. 6, 2nd Stage, 2nd Cross, M.G. Road, Udayagiri, Mysore.

COURT NOTICE TO DEFENDANTS No.1 & 2

WHEREAS, in the above case, the plaintiff Bank has filed the suit against you both and another for the recovery of money. The above said suit filed by the Plaintiff is now stands posted to 04/07/2022 for your appearance in the Court at 11 am. Hence take notice of the same and be present on the above said date and time without fail in the above said Court. If you fail to appear in person or through an Advocate, the suit will be heard in your absence and decided exparte.

By Order of the Court
Sd/- Chief Ministerial Officer,
Civil Judge and JMFC, Virajpet.

Virajpet, Date: 8/6/2022
Advocates for the Plaintiff
M/s. Poovayya & Co., Advocates & Legal Consultants, Virajpet, S.Kodagu.